ಗೌರಿ ಲಂಕೇಶರ

ಲಂಕೇಶ್

ಮೇ 16, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ

…ಡ್ಡಿಗಾಗಿ ಕಿತ್ತಾಟ

…ಮುಂಗಾರು …ತಂಡದ …ಮುಂಗಾಟ



ಗೋ ಸಮ್ಮೇಳನ



ಸಗಣಿ ತಿಂದ ಸ್ವಾಮಿ

…ರ್ಮಕಾರಣ' ನಿಷೇಧ:
…ಿವ್ಯಕ್ತಿ ಸ್ವಾತಂತ್ರ್ಯದ
…ೀಲೆ ಹಲ್ಲೆ
-ಬರಗೂರು

ಬಿಜೆಪಿ ಯುವ ಮೋರ್ಚಾ

ಕಳ್ಳರ ಪಾಲು



…ನ ಭೂಕಬಳಿಕೆಗೆ ತತ್ತರಿಸಿದೆ ಯಲಹಂಕ

ಸಾಲ ಮನ್ನಾ: ಬಿಟ್ಟಿ ಭರವಸೆಗಳ ಜಾತ್ರೆ



ಸಾಲಮನ್ನಾ ಎಂಬುದು ಈಗ ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳ ನಡುವಿನ ಕಿತ್ತಾಟದ ದಾಳವಾಗಿದೆ. ಇದರಿಂದ ರೈತರಿಗಂತೂ ಪೊಳ್ಳು ಭರವಸೆಗಳ ಪೊಳ್ಳು ಸಮಾಧಾನ ಬಿಟ್ಟರೆ ಬೇರೇನೂ ಸಿಕ್ಕುವುದಿಲ್ಲವೆಂಬುದು ದಿನೇದಿನೇ ಸ್ಪಷ್ಟವಾಗುತ್ತಿದೆ. ಮೊದಲು ಎಲ್ಲಾ ರೈತರ ಎಲ್ಲಾ ಬಗೆಯ ಸಾಲಮನ್ನಾ ಮಾಡುತ್ತೇವೆಂದು ಜೆಡಿಎಸ್ ಘೋಷಿಸಿತು. ತಕ್ಷಣ ಅದಕ್ಕೆ ಬಿಜೆಪಿ ವಿರೋಧಿಸಿತು. ಆಮೇಲೆ ಯಡಿಯೂರಪ್ಪನವರೇ ಜೆಡಿಎಸ್ ಅನ್ನು ಸಂಪರ್ಕಿಸದೇ ಬಜೆಟ್ಟಿನಲ್ಲಿ 25000 ರೂ.ವರೆಗೆ ಸಾಲ ಮನ್ನಾ, ಸಾರಾಯಿ ನಿಷೇಧ, ಲಾಟರಿ ನಿಷೇಧ ಎಂದು ಘೋಷಿಸಿದರು. ಆದರೆ ಜೆಡಿಎಸ್ ಮತ್ತು ಬಿಜೆಪಿ ಎರಡಕ್ಕೂ ಅದರ ಬಗ್ಗೆ ಅರೆ ಮನಸ್ಸಿದ್ದಿದ್ದರಿಂದಲೇ ಲಾಟರಿ ಮತ್ತೆ ಶುರುವಾಯಿತು. ಸಾರಾಯಿ ನಿಷೇಧ ಜಾರಿ ಆಗುವುದು ಜುಲೈನಲ್ಲಿ. ಅಷ್ಟು ಸಮಯದಲ್ಲಿ ಸಾರಾಯಿ ಲಾಬಿ ಮತ್ತು ಇದೇ ಸರ್ಕಾರ ಒಂದಾಗಿ ಮತ್ತೊಂದೇನಾದರೂ ನೆಪ ತೋರಿಸಿ ಮುಂದುವರೆಸಿದರೂ ಆಶ್ಚರ್ಯವಿಲ್ಲ.

ಈ ಕೋ-ಜಾ ಸರ್ಕಾರದ 'ಜನಹಿತ' ಕಾರ್ಯಕ್ರಮಗಳ ಹುನ್ನಾರ ಹೀಗಿರುವಾಗ ಮೊನ್ನೆ ಯಡಿಯೂರಪ್ಪನವರು ಇದ್ದಕ್ಕಿದ್ದ ಹಾಗೆ ಬಡ ಹಾಗೂ ಶ್ರೀಮಂತ ರೈತರೆಲ್ಲರಿಗೂ 25,000 ರೂ.ವರೆಗಿನ ಸಾಲಮನ್ನಾ ಎಂದು ಘೋಷಿಸಿದ್ದಾರೆ. ಮೊದಲು ಇದು ಕಾರ್ಯಸಾಧ್ಯವೇ ಎಂದು ಪರಿಶೀಲಿಸೋಣ. ಇದರಿಂದ ಸರ್ಕಾರಕ್ಕೆ 2500 ರೂ. ಕೋಟಿಗಳಷ್ಟು ಅಧಿಕ ಹೊರೆ ಬೀಳುತ್ತದೆ. ಈ ಮುಂಚೆ ಬಜೆಟ್ಟಿನಲ್ಲಿ ಘೋಷಿಸಲಾಗಿರುವ ಸೀಮಿತ ಸಾಲಮನ್ನಾ ಕಾರ್ಯಕ್ರಮಕ್ಕೆ 1500 ಕೋಟಿ ರೂ.ಗಳು ಬೇಕಾಗಿದ್ದರೂ ಅದಕ್ಕೆಂದು ಬಜೆಟ್ಟಿನಲ್ಲಿ ಎತ್ತಿಡಲಾಗಿದ್ದು ಕೇವಲ 500 ಕೋಟಿ ರೂ. ಮಾತ್ರ. ಮೊನ್ನೆ ಯಡಿಯೂರಪ್ಪನವರೇ ಹೇಳಿದಂತೆ ಅದು ಈ ವರ್ಷದ ಬಾಬತ್ತಲ್ಲ, ಹೋದ ವರ್ಷ ರೈತರಿಗೆ ಸಾಲ ಕೊಟ್ಟ ಕೋ ಆಪರೇಟೀವ್ ಬ್ಯಾಂಕ್‌ಗಳಿಗೆ ಕೊಡಬೇಕಾಗಿದ್ದ ಮೊತ್ತವದು. ಈ ವರ್ಷದ್ದು ಹಲವಾರು ಹಂತದಲ್ಲಿ ಕೊಡಲಾಗುವುದು ಅಂದಿದ್ದಾರೆ. ಇದರರ್ಥ ಹಣ ಕೊಡುವುದು ಖಚಿತವೇನಲ್ಲ ಎಂಬುದು. ಇನ್ನು ಈ ವರ್ಷವೂ ರೈತರಿಗೆ ಶೇ.4 ರದರದಲ್ಲಿ ಕೋ ಆಪರೇಟೀವ್ ಬ್ಯಾಂಕ್‌ಗಳು ಸಾಲ ಕೊಡಲು ಬಜೆಟ್ಟಿನಲ್ಲಿ ಎತ್ತಿಡಲಾಗಿರುವುದು ಕೇವಲ 150 ಕೋಟಿ ರೂ. ಮಾತ್ರ. ಆದರೆ ಹೋದ ವರ್ಷದ ಬಾಬತ್ತಿನಲ್ಲೇ ಸರ್ಕಾರ ಇನ್ನೂ ಈ ಬ್ಯಾಂಕ್‌ಗಳಿಗೆ 300 ಕೋಟಿ ಬಾಕಿ ಕೊಡಬೇಕಿದೆ. ಹೀಗಾಗಿ ಈ ಹಣ ಹೊಸ ಸಾಲಕ್ಕೆ ಹೋಗುವುದಿಲ್ಲ!

ಸರ್ಕಾರದ ಬೊಕ್ಕಸದ ಪರಿಸ್ಥಿತಿ ಹೀಗಿರುವಾಗ ಮತ್ತೆ 2500 ಕೋಟಿಗಳಷ್ಟು ಹೊರೆಯನ್ನು ನಿಜಕ್ಕೂ ಸರ್ಕಾರ ಹೊರಬಲ್ಲದೆ? ಈಗಾಗಲೆ ಸಾರಾಯಿ ಬ್ಯಾನ್, ಲಾಟರಿ ನಿಷೇಧ ಹಾಗೂ ಸಾಲಮನ್ನಾಗಳಿಂದ ಸರ್ಕಾರಕ್ಕೆ 3500 ಕೋಟಿಗಳಷ್ಟು ಆದಾಯದ ಮೂಲ ಇಲ್ಲವಾಗಿದೆ. ಇದಲ್ಲದೆ ಈ ಬಜೆಟ್ಟಿನಲ್ಲಿ ಇನ್ನೂ ಅಧಿಕ 3500 ಕೋಟಿಗಳಷ್ಟು ಆದಾಯದ ನಿರೀಕ್ಷೆಯನ್ನು ಇಟ್ಟುಕೊಂಡು ಹಲವಾರು ಕಾರ್ಯಕ್ರಮಗಳನ್ನು ಪುಗಸಟ್ಟೆ ಘೋಷಿಸಲಾಗಿದೆ. ಅಂದರೆ ಹಳೇ ಆದಾಯದ ಕೋತಾ ಮತ್ತು ಈ ಹೊಸ ಅಂದಾಜು ಒಟ್ಟು ಸೇರಿ 7000 ಕೋಟಿಗಳಷ್ಟು ಅಧಿಕ ಸಂಪನ್ಮೂಲವನ್ನು ಸರ್ಕಾರ ರೂಢಿಸಿಕೊಳ್ಳದಿದ್ದರೆ ಸಾಲಮನ್ನಾವೂ ಜಾರಿಗೆ ಬರುವುದಿಲ್ಲ, ಯಾವ ಜನಹಿತ ಯೋಜನೆಗಳೂ ಜಾರಿಗೆ ಬರುವುದಿಲ್ಲ. ಅದರೊಂದಿಗೆ ಈ ಚೆಡ್ಡಿ ಸರ್ಕಾರದ ಆದ್ಯತೆಯಲ್ಲಿ ದೊರಕುವ ಸಂಪನ್ಮೂಲದ ಪ್ರಧಾನ ವೆಚ್ಚ ಆಗುವುದು ಮಠ ಮಾನ್ಯಗಳಿಗೆ ಮತ್ತು ಚೆಡ್ಡಿ ಐಡಿಯಾಲಜಿ ಪ್ರೇರಿತ ಕಾರ್ಯಕ್ರಮಗಳಿಗಾದ್ದರಿಂದ ಜನಹಿತ ಕಾರ್ಯಕ್ರಮಗಳಿಗಾಗಲೀ, ಸಾಲಮನ್ನಾಗಾಗಲೀ ದಮ್ಮಡಿ ದುಡ್ಡು ಉಳಿಯುವುದಿಲ್ಲ ಎನ್ನುವುದೇ ವಾಸ್ತವ..


ಬಿಜೆಪಿ-ಜೆಡಿಎಸ್ ಜಗಳದಲ್ಲಿ ರೈತರ ಬದುಕಿನ ಬವಣೆಯನ್ನು ದಾಳವಾಗಿ ಬಳಸಿಕೊಳ್ಳುತ್ತಿದ್ದಾರೆ ಅಷ್ಟೆ.

ಚಾರ್ವಾಕ
■ ಶಿವಸುಂದರ್

No Comments

"ಚೈಲ್ಡಿಶ್ ಆಗಬ್ಯಾಡಾಂತ ನಾನು ಕುಮಾರಸ್ವಾಮಿಗೆ ಬಾಳಾ ಹೇಳ್ದೆ."

- ಧರಂಸಿಂಗ್



"ಕರ್ನಾಟಕ ಸರ್ಕಾರದಿಂದ ನನಗೆ ಈವರೆಗೆ ಪ್ರಶಸ್ತಿ ಸಿಕ್ಕಿಲ್ಲ, ಅದಕ್ಕೆ ಭಾಷಾ ಆಧಾರಿತ ತಾರತಮ್ಯವೇ ಕಾರಣ."

- ಎಸ್. ಜಾನಕಿ



"ಸಚಿನ್ ಮತ್ತು ಸೌರವ್‌ಗೆ ವಿಶ್ರಾಂತಿ ನೀಡಿದ್ದಲ್ಲ, ಅವರನ್ನು ತಂಡದಿಂದಲೇ ಕೈ ಬಿಡಲಾಗಿದೆ."

- ಕಪಿಲ್ ದೇವ್

"ಕೌಸರ್ ಬಿ ಹತ್ಯೆ ಪ್ರಕರಣದಲ್ಲಿ ಗುಜರಾತ್ ಸರ್ಕಾರದ ಪಾತ್ರ ಸಾಬೀತಾಗಿರುವುದರಿಂದ ಮೋದಿಯನ್ನು ಮಂಪರು ಪರೀಕ್ಷೆಗೆ ಒಳಪಡಿಸಬೇಕು."

- ಕಾಂಗ್ರೆಸ್ಸಿನ ಆಗ್ರಹ



"ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನೇಸರ್ಗಿ ಅವರು ಯಡಿಯೂರಪ್ಪನವರ ಏಜೆಂಟರಂತೆ ವರ್ತಿಸುತ್ತಿದ್ದಾರೆ."

- ನರ್ಸ್ ಜಯಲಕ್ಷ್ಮಿ

ನಂಬಿದ್ರೆ ನಂಬಿ ಬಿಟ್ರೆ ಬಿಡಿ

"ಕಾಂಗ್ರೆಸ್ ಜೊತೆ ಹೊಂದಾಣಿಕೆ ಆಗುವ ಅಗತ್ಯವೇ ನಮಗಿಲ್ಲ, ಅದೆಲ್ಲಾ ಗಾಳಿ ಮಾತು ಅಷ್ಟೆ."

-ಎಚ್.ಡಿ. ಕುಮಾರಸ್ವಾಮಿ

"ಬೆನ್ನಿಗೆ ಚೂರಿ ಹಾಕುವ ಮೋಸಗಾರರ ಜೊತೆ ಮತ್ತೆ ಹೋಗಲಾರೆ. ಆದರೆ ರಾಜಕೀಯದಲ್ಲಿ ಯಾವ ಬದಲಾವಣೆಯೂ ಆಗಬಹುದು."

- ಧರಂ ಸಿಂಗ್

"ಎಂ.ಪಿ.ಪ್ರಕಾಶ್ ಅವರ ಮಾಸಿಕ ಆದಾಯ 1.30 ಲಕ್ಷ ರೂ. ಮಾತ್ರ."

- ಪತ್ರಿಕಾ ವರದಿ

ವಾರದ ಪ್ರಹಸನ

"ಸರ್ಕಾರದ ಸಾಧನೆ ತೃಪ್ತಿ ತಂದಿಲ್ಲ, ಮುಖ್ಯಮಂತ್ರಿಯಾಗಿ ತಲೆತಗ್ಗಿಸಬೇಕಾಗಿದೆ. ನಾವು ಚಕ್ರವ್ಯೂಹದಲ್ಲಿ ಸಿಲುಕಿದ್ದೇವೆ."

- ಹೆಚ್. ಡಿ. ಕುಮಾರಸ್ವಾಮಿ

ವಾರದ ವಿವೇಕ

"ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ನೀಡಿ, ಅನುದಾನ ನೀಡಿಯೆಂದು ಭಿಕ್ಷೆ ಬೇಡುವುದಕ್ಕಿಂತ ಮೊದಲು ಎಲ್ಲಾ ಭಾಷೆಗಳ ಸಮಾನತೆಗಾಗಿ ಹೋರಾಡಬೇಕು."

- ಬರಗೂರು ರಾಮಚಂದ್ರಪ್ಪ



ಕೊನೆ ಮಾತು

ಮೊನ್ನೆ 'ಲಂಕೇಶ್' ವಾರ ಪತ್ರಿಕೆಯ ಕಚೇರಿಯಲ್ಲಿ ಟೈಂಸ್ ಆಫ್ ಇಂಡಿಯಾದ ಅಮೆರಿಕಾದ ಪ್ರತಿನಿಧಿಯಾದ ಚಿದಾನಂದ ರಾಜಘಟ್ಟರವರು ಅಮೆರಿಕದ ಮಿಲಿಟರಿ ಮೈಂಡ್ ಸೆಟ್ ಬಗ್ಗೆ ಮಾತಾಡಿದರು. ಅದರಲ್ಲಿ ಭಾಗವಹಿಸಿದ್ದವರು — ಅನಂತಮೂರ್ತಿಯವರನ್ನು ಒಳಗೊಂಡಂತೆ—ಪ್ರಬುದ್ಧ ವಿಶ್ಲೇಷಣೆಯನ್ನು ಮಂಡಿಸಿದರು. ಆ ಕಾರ್ಯಕ್ರಮದಲ್ಲಿ ರಾಯಚೂರು ಪ್ರಾಂತ್ಯದ ವಿಕ್ರಾಂತ ಮನೋಭಾವದ ಮಾತಿನ ಮಲ್ಲನ್ ಅಮೆರಿಕದ ಗೌಡಿಕೆಯ ಬಗ್ಗೆ ಹ್ಯೂಮರಸ್ ಆಗಿ ಹೇಳಿದ್ದು ಹೀಗೆ.

ಅಮೆರಿಕದ ರಾಷ್ಟ್ರೀಯ ಕ್ರೀಡೆ: ಯುದ್ಧ

ಅಮೆರಿಕದ ರಾಷ್ಟ್ರೀಯ ಲಾಂಛನ: ಎ.ಕೆ.47

ಅಮೆರಿಕದ ರಾಷ್ಟ್ರೀಯ ಪ್ರಾಣಿ: ಜಾರ್ಜ್ ಬುಷ್!!






ಅಕ್ರಮ ಭೂವಶವೋ ಸಕ್ರಮ ಭೂಗಳ್ಳತನವೋ?

ಬೆಂಗಳೂರಿನ ಸುತ್ತಮುತ್ತ 7500 ಎಕರೆಯಷ್ಟು ಭೂಮಿಯನ್ನು ಭೂಗಳ್ಳರು, ವಾಣಿಜ್ಯೋದ್ಯಮಿಗಳು ಅಕ್ರಮವಾಗಿ ವಶಪಡಿಸಿಕೊಂಡಿದ್ದಾರೆ. ಅದನ್ನು ಮರುವಶಪಡಕೊಂಡು ಹರಾಜು ಮಾಡಿ ರೈತರ ಸಾಲಮನ್ನಾ ಮಾಡುವುದಾಗಿ ಕುಮಾರಸ್ವಾಮಿಯವರು ಹೇಳಿದ್ದರಷ್ಟೆ. ಪಾಪ, ಇದೊಂದು ವಿಷಯದಲ್ಲಾದರೂ ಅವರು ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಿದ್ದಾರೆ ಎಂದು ಹೇಳಬಹುದು!!! ಭೂಮಿಯನ್ನು ಸರ್ಕಾರ ವಶಪಡಿಸಿಕೊಳ್ಳುತ್ತಿದೆ. ಆದರೆ ಅದು ಅಕ್ರಮ ಭೂಮಿಯೂ ಅಲ್ಲ, ವಾಣಿಜ್ಯೋದ್ಯಮಿಗಳ ಭೂಮಿಯೂ ಅಲ್ಲ, ಬಡರೈತರು ಸರ್ಕಾರದ ಗೋಮಾಳ ಇತ್ಯಾದಿಯಲ್ಲಿ ಉಳುಮೆ ಮಾಡುತ್ತಿದ್ದ ಭೂಮಿಯನ್ನು ವಶಪಡಿಸಿಕೊಂಡು ಸರ್ಕಾರ ಅದನ್ನು ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಪರಭಾರೆ ಮಾಡುತ್ತಿದೆ. ದಿನಪತ್ರಿಕೆಗಳೇ ವರದಿ ಮಾಡುತ್ತಿರುವಂತೆ ಕನಿಷ್ಠ 600 ಎಕರೆ ಭೂಮಿ ಅಂದರೆ ಸರಿಸುಮಾರು 1200 ಕೋಟಿ ಬೆಲೆ ಬಾಳುವ ಭೂಮಿ ಅದರ ಅರ್ಧದಷ್ಟು ಬೆಲೆಗೆ ರಿಯಲ್ ಎಸ್ಟೇಟ್ ಉದ್ಯಮಿಗಳ ಪಾಲಾಗಿದೆ. ಅದರಲ್ಲಿ ಬಹುಪಾಲು ಇದೇ ಸರ್ಕಾರದ ಶಾಸಕ ಗಣ್ಯರೇ ಇದ್ದಾರೆ. ಇದು ರೈತರನ್ನು ಸಾರಾಸಗಟು ಒಕ್ಕಲೆಬ್ಬಿಸುವ ಮತ್ತೊಂದು ಯೋಜನೆಯೇ ಹೊರತು ಬೇರೇನು ಅಲ್ಲ, ಏಕೆಂದರೆ ಆ 7500 ಅಕ್ರಮ ಭೂಮಿಯಲ್ಲಿ ಶೇ.80 ರಷ್ಟಿರುವುದು ವಾಣಿಜ್ಯೋದ್ಯಮಿಗಳ ಕೈಯಲ್ಲಿ ಮತ್ತು ಸರ್ಕಾರದಿಂದ ಕೃಪಾಶೀರ್ವಾದ ಪಡೆದಿರುವ ಉದ್ಯಮಿ ಮತ್ತು ಡೆವಲಪರ್‌ಗಳ ಕೈಯಲ್ಲಿ, ಈವರೆಗೆ ಅವರು ಅಕ್ರಮವಾಗಿ ಹಿಡಿದಿಟ್ಟುಕೊಂಡಿರುವ ಒಂದೆಕರೆ ಭೂಮಿಯನ್ನೂ ವಶಪಡಿಸಿಕೊಳ್ಳಲಾಗಿಲ್ಲ, ಬದಲಿಗೆ ಅವೆಲ್ಲವೂ ಹರಾಜಿನ ಹೆಸರಲ್ಲಿ ಸಕ್ರಮಗೊಳ್ಳುತ್ತಿದೆ. ಇದು ಜನರ ಭೂಮಿಯ ಹಗಲು ದರೋಡೆ! ಜನಹಿತದ ಹೆಸರಿನಲ್ಲಿ!!

ಗುಜರಾತ್ ಎಂದರೆ ಸತ್ಯದ ಎನ್‌ಕೌಂಟರ್!!

ಅಪರಾಧಿಗಳೇ ಅಧಿಕಾರದಲ್ಲಿರುವ ಗುಜರಾತ್‌ನಲ್ಲಿ ಕೌಸರ್ ಬೀ ಎಂಬ ಮುಸ್ಲಿಂ ಗೃಹಿಣಿಯ ಭೀಕರ ಹತ್ಯೆಯನ್ನು ಗುಜರಾತ್ ಸರ್ಕಾರ ಒಪ್ಪಿಕೊಳ್ಳಲೇ ಬೇಕಾದಷ್ಟು ಸ್ಪಷ್ಟವಾದ ಸಾಕ್ಷ್ಯಾಧಾರಗಳು ದೊರೆತಿವೆ. ಹೀಗಾಗಿ ಅದನ್ನು ಅನಿವಾರ್ಯವಾಗಿ ಒಪ್ಪಿಕೊಂಡಿರುವ ಸರ್ಕಾರ ಅದನ್ನು ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳ ಮೇಲೆ ಎತ್ತಿ ಹಾಕಲು ಯತ್ನಿಸುತ್ತಿದೆ. ಆದರೆ ಗುಜರಾತಿನ ಮುಖ್ಯಮಂತ್ರಿಯವರ ಕಪಾಟಿನಲ್ಲಿ ಇಂಥ ಕನಿಷ್ಠ ಪಕ್ಷ ಮೂರು ಸಾವಿರ ಕೌಸರ್ ಬೀಗಳು ದೊರೆಯುತ್ತಾರೆ. ಅದಕ್ಕೆ ಕೆಲವರು ಮೋದಿಯನ್ನು ಮಂಪರು ಪರೀಕ್ಷೆಗೆ ಗುರಿ ಪಡಿಸಬೇಕೆಂದೂ ಆಗ್ರಹಿಸುತ್ತಿದ್ದಾರೆ. ಆದರೆ ಬಿಜೆಪಿಯ ದ್ವೇಷದ ಫ್ಯಾಸಿಸ್ಟ್ ಮನೋಭಾವ ಎಷ್ಟು ವಿಷಯುಕ್ತವಾದದ್ದೆಂದರೆ ಮೊನ್ನೆ ಅದರ ನಾಯಕರಲ್ಲೊಬ್ಬರಾದ ವೆಂಕಯ್ಯನಾಯ್ಡುರವರು ಈ ಎನ್‌ಕೌಂಟರ್ ಪ್ರಕರಣವನ್ನು ರಾಜಕೀಯಗೊಳಿಸಬಾರದೆಂದೂ, ಅದು ಕಾಂಗ್ರೆಸ್ಸಿಗೇ ಮುಳುವಾಗುತ್ತದೆಂದೂ ಎಚ್ಚರಿಸಿದ್ದಾರೆ. ಏಕೆಂದರೆ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಆಂಧ್ರದಲ್ಲೂ, ಕರ್ನಾಟಕದಲ್ಲೂ ಎನ್‌ಕೌಂಟರ್‌ಗಳು ನಡೆದಿವೆ ಎಂಬುದು ಅವರ ಬ್ಲಾಕ್ ಮೇಲ್ ತಂತ್ರ!!

ಕರ್ನಾಟಕದಲ್ಲೂ ಈ ಕೋ-ಜಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಕರಾವಳಿಯಲ್ಲಿ ಎನ್‌ಕೌಂಟರ್‌ಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆಯುತ್ತಿವೆ. ಮೋದಿಯೇ ತನ್ನ ಗುರು ಎನ್ನುವ ನಾಗರಾಜ್ ಶೆಟ್ಟಿ ಮತ್ತು ಗುಜರಾತ್ ಮಾದರಿ ಸರ್ಕಾರ ರಚಿಸಲು ಪಣತೊಟ್ಟಿರುವ ಬಿಜೆಪಿ ಅಧಿಕಾರದಲ್ಲಿ ಹೀಗೆ ಮುಂದುವರೆದರೆ ಬರಲಿರುವ ದಿನಗಳಲ್ಲಿ ಕರ್ನಾಟಕದ ಕೌಸರ್ ಬೀಗಳು ಎಚ್ಚೆತ್ತುಕೊಳ್ಳಲೇ ಬೇಕು!!





ಮುಂದುವರೆದ SEZ ದಾಳಿಗಳು

ಪಶ್ಚಿಮ ಬಂಗಾಳದ ನಂದಿಗ್ರಾಮದಲ್ಲಿ SEZ ದಾಳಿಯ ವಿರುದ್ಧ ರೈತರು ವೀರೋಚಿತವಾಗಿ ಹೋರಾಡಿದರಷ್ಟೆ. ಇದರ ಭಾಗವಾಗಿ ಮಾರ್ಚ್ 14ರಂದು ಬಂಗಾಳದ ಕಮ್ಯುನಿಸ್ಟ್ ಸರ್ಕಾರದ ಪೊಲೀಸರು ನಡೆಸಿದ ಏಕಪಕ್ಷೀಯವಾಗಿ ನಡೆಸಿದ ದಾಳಿಗೆ ಕನಿಷ್ಠ 14 ಜನ ಸ್ಥಳದಲ್ಲೇ ಮೃತಪಟ್ಟರು. ಇದರಿಂದ ದೇಶಾದ್ಯಂತ SEZ ವಿರುದ್ಧ ಗರಿಗೆದರಿದ ಹೋರಾಟ ಮತ್ತು ಜನಾಭಿಪ್ರಾಯಗಳ ಕಾರಣದಿಂದಾಗಿ ಸರ್ಕಾರ SEZ ಗಾಗಿ ರೈತರ ಭೂಮಿಯನ್ನು ವಶಪಡಿಸಿಕೊಳ್ಳುವ ಕ್ರಮವನ್ನು ಸ್ವಲ್ಪಮಟ್ಟಿಗೆ ತಡೆಹಿಡಿಯಿತು. ರೈತರ ಬಗ್ಗೆ ಮೊಸಳೆ ಕಣ್ಣೀರು ಸುರಿಸಿ ತಾವು ರೈತರ ಹಿತಾಸಕ್ತಿಯ ವಿರುದ್ಧ ಹೋಗುವುದಿಲ್ಲ, ಒಂದು ರೈತಪರ ಪುನರ್ ವಸತಿ ಯೋಜನೆ ರೂಪುಗೊಳ್ಳದೆ ರೈತರ ಜಮೀನನ್ನು ವಶಪಡಿಸಿಕೊಳ್ಳುವುದಿಲ್ಲ, ರೈತರ ಇಷ್ಟಕ್ಕೆ ವಿರುದ್ಧವಾಗಿ ಯಾವ ಕಾರಣಕ್ಕೂ ಅವರ ಜಮೀನನ್ನು ವಶಪಡಿಸಿಕೊಳ್ಳುವುದಿಲ್ಲ... ಎಂದೆಲ್ಲಾ ಭರವಸೆಗಳನ್ನು ನೀಡಿತು. ಆದರೆ ಈವರೆಗೆ ಒಂದು ಪುನರ್ ವಸತಿ ಯೋಜನೆಯೂ ರೂಪು ಗೊಂಡಿಲ್ಲ; ಸದ್ಯಕ್ಕೆ ರೂಪುಗೊಳ್ಳುವ ಸೂಚನೆಯೂ ಇಲ್ಲ, ಆದರೂ ಮತ್ತೆ SEZ ಗಾಗಿ ಭೂ ವಶ ಮಾಡಿಕೊಳ್ಳುವ ಪ್ರಕ್ರಿಯೆ ಮುಂದುವರೆದಿದೆ. ಕಳೆದ ಏಪ್ರಿಲ್ 15 ರಿಂದಾಚೆಗೆ 134 SEZ ಗಳಿಗೆ ಮತ್ತೆ ರೈತರ ಒಪ್ಪಿಗೆ ಇಲ್ಲದೆ ಮತ್ತು ಒಂದು ಪುನರ್ ವಸತಿ ಯೋಜನೆ ಇಲ್ಲದೆ ಒಪ್ಪಿಗೆ ಕೊಡಲಾಗಿದೆ.

ಹಾಗಿದ್ದ ಮೇಲೆ ಇದರ ತಾತ್ಪರ್ಯವೇನು?

ಈ ದೇಶದಲ್ಲಿ ನಂದಿಗ್ರಾಮ ಮಾರ್ಗ ಅನುಸರಿಸದೇ ರೈತರ ಬದುಕು ರಕ್ಷಣೆ ಆಗುವುದಿಲ್ಲ!!



ಕಂಡಹಾಗೆ

ಎನ್‌ಕೌಂಟರ್‌ನ ನಾನಾ ಮುಖಗಳು

"ನಕಲಿ ಎನ್‌ಕೌಂಟರ್‌ಗಳ ಸುದ್ದಿ ಬಂದ ಕೂಡಲೇ ರಿಯ ಪೊಲೀಸ್ ಅಧಿಕಾರಿಗಳು ಆದರ ಸತ್ಯಾಸತ್ಯತೆ ರಿಶೀಲಿಸಬೇಕು. ತಮ್ಮ ಸಿಬ್ಬಂದಿ ತಪ್ಪು ಮಾಡಿದ್ದರೆ ವರ ವಿರುದ್ಧ ಕ್ರಮ ಜರುಗಿಸಬೇಕು. ಎಲ್ಲಿಯವರೆಗೆ ಕಲಿ ಎನ್‌ಕೌಂಟರ್ ಮಾಡಿದ ಅಧಿಕಾರಿಗಳಿಗೆ ಬಹು ಮಾನ ಹಾಗೂ ಮೆಡಲ್‌ಗಳ ಶಿಫಾರಸ್ಸು ಆಗುತ್ತದೆಯೋ ಲ್ಲಿಯುವರೆಗೆ ಹಿರಿಯ ಅಧಿಕಾರಿಗಳೂ ಅದರಲ್ಲಿ ಾಮೀಲಾಗಿದ್ದಾರೆ ಎಂದೇ ಸಮಾಜ ಭಾವಿಸುತ್ತದೆ"...

ಹೀಗೆ ಇವತ್ತು (ಭಾನುವಾರ) 'ಪ್ರಜಾವಾಣಿ' ತ್ರಿಕೆಯಲ್ಲಿ ಬರೆದಿರುವವರು ಡಾ.ಡಿ.ವಿ. ಗುರುಪ್ರಸಾದ್. ಂದಹಾಗೆ ಇವರು ಕರ್ನಾಟಕದ ಹಿರಿಯ ಐಪಿಎಸ್ ಧಿಕಾರಿ. ತಮ್ಮ ಲೇಖನದಲ್ಲಿ ಈಗ ಎಲ್ಲೆಡೆ ಚರ್ಚೆ ೊಳಗಾಗಿರುವ ಸೊಹ್ರಾಬುದ್ದೀನ್‌ನನ್ನು ಗುಜರಾತ್ ಮತ್ತು ರಾಜಸ್ತಾನದ IPS ಅಧಿಕಾರಿಗಳು ನಕಲಿ ನ್‌ಕೌಂಟರ್‌ನಲ್ಲಿ ಕೊಂದಿದ್ದರ ಬಗ್ಗೆ ಪ್ರಸ್ತಾಪಿಸುತ್ತಾ ಗ ಎಲ್ಲೆಡೆ ಇಂತಹ ಪ್ರಕರಣಗಳು ಹೆಚ್ಚಾಗುತ್ತಿವೆ ಂದೂ 'ನಕಲಿ ಎನ್‌ಕೌಂಟರ್‌ಗಳು ಪೊಲೀಸ್ ಧಿಕಾರಿಗಳಿಗೆ ಹೊಸದೇನಲ್ಲ' ಎಂದೂ, ದಾಖಲಿಸು ಷ್ಟು ಪ್ರಾಮಾಣಿಕತನವನ್ನು ತೋರಿಸಿದ್ದಾರೆ.

ಆದರೆ ಇದೇ ಗುರುಪ್ರಸಾದ್‌ರವರು ರ್ನಾಟಕದ ಪೊಲೀಸರೇ ನಕಲಿ ಎನ್ ಂಟರ್‌ಗಳನ್ನು ನಡೆಸಿದಾಗ ಯಾಕೆ ಇದೇ ್ರಾಮಾಣಿಕತೆಯನ್ನು ತೋರಿಸಲಿಲ್ಲ ಎಂಬುದು ಗೂಢವಾಗಿದೆ. ಉದಾಹರಣೆಗೆ ಸದಾನಂದ ಟ್ಟಿಯ ಕೊಲೆಯ ಆರೋಪವನ್ನು ಹೊತ್ತಿದ್ದ ಯಲ್ಲಿ ರಫೀಕ್‌ನ "ಎನ್‌ಕೌಂಟರ್ ಸದ್ಯದಲ್ಲೇ ಗುತ್ತದೆ" ಎಂದು ಪತ್ರಿಕೆಗಳು ನಿಖರವಾಗಿ ದು ನಡೆಯುವ ಎರಡು ವಾರಗಳ ಮುನ್ನವೇ ಬರೆದಿದ್ದವು. ಹಾಗೆಯೇ ಆತ ೊಲೀಸರಿಂದ "ತಪ್ಪಿಸಿಕೊಂಡ" ಎಂಬ ಸುದ್ದಿ ಂದ ನಂತರ ಗುಜರಾತ್ ಮತ್ತು ರಾಜ ಸ್ತಾನದ ಪೊಲೀಸರು ಸೊಹ್ರಾಬುದ್ದೀನ್‌ನನ್ನು ಮುಗಿಸಿದಂತೆಯೇ ಇಲ್ಲಿನ ಪೊಲೀಸರೂ ರಫೀಕ್‌ನನ್ನು ಕೊಂದೇ ಕೊಲ್ಲುತ್ತಾರೆ ಎಂದು ಜನಸಾಮಾನ್ಯರೂ ಊಹಿಸಿದರು.

ಕೊನೆಗೆ ಅಂತಹದೊಂದು ನಕಲಿ ಎನ್‌ಕೌಂಟರ್ ನಡೆದೇ ಹೋಯಿತು. ಇವತ್ತಿಗೂ ರಫೀಕ್ ಹೇಗೆ ಪೊಲೀಸರ ವಶದಿಂದ ತಪ್ಪಿಸಿಕೊಂಡ, ಹೇಗೆ ಆತನನ್ನು ಪೊಲೀಸರು ಪತ್ತೆ ಹಚ್ಚಿದರು, ಹೇಗೆ ಆತನನ್ನು ಅವರೆಲ್ಲ ಎನ್‌ಕೌಂಟರ್‌ನಲ್ಲಿ ಕೊಂದು ಹಾಕಿದರು ಎಂದು ಸ್ವತಃ ಪೊಲೀಸರಿಗೇ ಗೊತ್ತಿಲ್ಲದಿದ್ದರೂ ಕರಾವಳಿ ಪ್ರದೇಶದ ಪತ್ರಕರ್ತರಿಗಂತೂ ಗೊತ್ತು! ರಫೀಕ್ ಸತ್ತಿದ್ದೂ ಒಂದು ನಕಲಿ ಎನ್‌ಕೌಂಟರ್‌ನಲ್ಲಿ ಎಂಬುದು ಸ್ಪಷ್ಟ.

ಆದರೆ ಗುರುಪ್ರಾಸಾದ್‌ರವರು ತಮ್ಮ ಲೇಖನದಲ್ಲಿ ಉಲ್ಲೇಖಿಸಿರುವಂತೆ ರಫೀಕ್ ಎನ್‌ಕೌಂಟರ್ ಕುರಿತಂತೆ ರಾಜ್ಯ ಸರ್ಕಾರವು ಮಾನವ ಹಕ್ಕು ಆಯೋಗಕ್ಕೆ ಮಾಹಿತಿ ನೀಡಿಲ್ಲ, CID ತನಿಖೆ ನಡೆದಿಲ್ಲ, ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಸಿಲ್ಲ, ಅದಕ್ಕೊಂದು ರಫೀಕನ ಸಂಬಂಧಿಕರು ಹಾಜರಿರಬೇಕೆಂದು ಹೇಳಿಲ್ಲ... ಇದೆಲ್ಲಕ್ಕಿಂತ ಮಿಗಿಲಾಗಿ ಆ ಎನ್‌ಕೌಂಟರ್‌ನಲ್ಲಿ ಪಾತ್ರ ವಹಿಸಿದ್ದ ಪೊಲೀಸ್ ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಗುರುಪ್ರಸಾದ್‌ರವರು ಕೇವಲ ಓರ್ವ ಅಂಕಣ ಕಾರರೂ ಅಲ್ಲ, ಅಥವಾ ಸರ್ಕಾರಿ ಗುಮಾಸ್ತರು ಅಲ್ಲ. ಮೊದಲೇ ಹೇಳಿದಂತೆ ಅವರು ಹಿರಿಯ IPS ಅಧಿಕಾರಿ. ಅವರೇ ಬರೆದಿರುವಂತೆ "ನಕಲಿ ಎನ್‌ಕೌಂಟರ್‌ಗಳನ್ನು ತಪ್ಪಿಸಬೇಕಾದಲ್ಲಿ ಇದಕ್ಕೆ ಕಾರಣವಾದ ವ್ಯಕ್ತಿಗಳಿಗೆ ಅತ್ಯಂತ ಗುರುತರವಾದ ಶಿಕ್ಷೆ ಆಗಲೇಬೇಕು" ಅದು ಕರ್ನಾಟಕ ದಲ್ಲಿ ಎಂದೂ ಆಗಿಲ್ಲ. ಮತ್ತು ಅವರೇ ಹೇಳಿರುವಂತೆ "ನಕಲಿ ಎನ್‌ಕೌಂಟರ್‌ಗಳ ಬಗ್ಗೆ ಹಿರಿಯ ಪೊಲೀಸ್ ಅಧಿಕಾರಿಗಳು ತೀವ್ರ ರೀತಿಯ ಪ್ರತಿರೋಧ ವ್ಯಕ್ತಪಡಿಸ ಬೇಕು." ಇದೂ ಕರ್ನಾಟಕದ ಇತಿಹಾಸದಲ್ಲಿ ಎಂದೂ ಆದಂತೆ ಕಂಡುಬರುವುದಿಲ್ಲ.

ಗುರುಪ್ರಸಾದ್‌ರವರನ್ನು ಇಲ್ಲಿ ವೈಯಕ್ತಿಕವಾಗಿ ಟೀಕಿಸುತ್ತಿಲ್ಲ. ಆದರೆ ನಮ್ಮ ಸಮಾಜದಲ್ಲಿ ಇವತ್ತು ಎಲ್ಲವೂ ಹೀಗೆ "ಆಚಾರ ಹೇಳೋಕೆ, ಬದನೆಕಾಯಿ ತಿನ್ನೋಕೆ" ಎಂಬಂತಾಗಿದೆ ಎಂಬುದಕ್ಕೆ ಉದಾಹರಣೆ ಯಾಗಿ ಮಾತ್ರ ನೀಡುತ್ತಿದ್ದೇನೆ.

* * * * * * * * * * *

ಪೊಲೀಸರೂ ಸರಕಾರದ ಒಂದು ಅಂಗವೇ ಆಗಿರುವುದರಿಂದ ಇವತ್ತು ಹೆಚ್ಚುತ್ತಿರುವ ಈ ನಕಲಿ ಎನ್‌ಕೌಂಟರ್‌ಗಳಿಂದಾಗಿ ಹೇಗೆ ನಮ್ಮ ಪ್ರಭುತ್ವ protector ಆಗುವ ಬದಲಾಗಿ predator ಆಗಿ ಪರಿವರ್ತನೆಗೊಂಡಿದೆ ಎಂಬುದು ಅರಿವಾಗುತ್ತದೆ.



ಚರ್ಚೆಯಲ್ಲಿ ನಗರಗೆರೆ ರಮೇಶ್, ಯು.ಆರ್. ಅನಂತಮೂರ್ತಿ, ಗೌರಿ ಲಂಕೇಶ್ ಮತ್ತು ಚಿದಾನಂದ ರಾಜಘಟ್ಟ

ಇವತ್ತು RSSನ ಹಿರಿಯ ನಾಯಕ ಸಂಜಯ್ ಜೋಶಿಯ ಸೆಕ್ಸ್ ಸಿಡಿ ಪ್ರಕರಣದ ಹಿಂದೆ ಸೊಹ್ರಾ ಬುದ್ದೀನ್ ಇದ್ದನೆಂಬ ಕಾರಣಕ್ಕೆ ಆತನನ್ನು ನರೇಂದ್ರ ಮೋದಿಯ ಪೊಲೀಸರು ಕೊಂದರು ಎಂಬ ಸುದ್ದಿ ಬಂದಿದೆ. ಅಂದರೆ ಭೂಗತ ಲೋಕದ ಪಾತಕಿಗಳು ತೆಗೆದುಕೊಳ್ಳುವ ಸುಫಾರಿಗೂ, ಪೊಲೀಸ್ ಅಧಿಕಾರಿಗಳು ಪಡೆಯುವ ಸುಫಾರಿಗೂ ಯಾವುದೇ ವ್ಯತ್ಯಾಸವಿಲ್ಲ ಎಂದಾಯಿತು!

ಹಾಗೆಯೇ, ಬಡ್ತಿ ಮತ್ತು ಹಣಕ್ಕಾಗಿ ಭಾರತದ ಸೈನ್ಯದ ಅಧಿಕಾರಿಗಳು ಮತ್ತು ಜಮ್ಮು ಕಾಶ್ಮೀರದ ಪೊಲೀಸರು ಗಂಟರ್‌ಬಾಲ್‌ನಲ್ಲಿ ಅಮಾಯಕರನ್ನು ನಕಲಿ ಎನ್‌ಕೌಂಟರ್‌ನಲ್ಲಿ ಕೊಂದು ಹಾಕಿದ್ದು, ಅವರೆಲ್ಲ ಭಯೋತ್ಪಾದಕರೆಂದು ಹೇಳಿ ಚಪ್ಪಾಳೆ ಗಿಟ್ಟಿಸಿದ್ದನ್ನೂ ನೋಡಿದ್ದೇವೆ. ಅಂದರೆ ಹಣಕ್ಕಾಗಿ ಕೊಲೆ ಮಾಡುವ ಪಾತಕಿಗೂ, ಬಡ್ತಿಗಾಗಿ ಕೊಲೆ ಮಾಡುವ ಭಾರತದ ಸೈನಿಕನಿಗೂ ಯಾವುದೇ ವ್ಯತ್ಯಾಸವಿಲ್ಲ ಎಂದಾಯಿತು!

ಇಲ್ಲಿ ಇನ್ನೊಂದು ಅಂಶವನ್ನು ಗಮನಿಸಬೇಕು. ಪಾರ್ಲಿಮೆಂಟ್ ಭವನದ ಮೇಲೆ ನಡೆದ ದಾಳಿಯಲ್ಲಿ ಭಾಗವಹಿಸಿದ್ದ ಎಂಬ ಆರೋಪ ಹೊತ್ತಿದ್ದ ಅಫಜಲ್ ಗುರು ಈಗ ಮರಣದಂಡನೆಗೆ ಗುರಿಯಾಗಿದ್ದಾನೆ ನಿಜ. ಆದರೆ ಇವತ್ತಿಗೂ ದಾಳಿಯಲ್ಲಿ ಸತ್ತವರು ಯಾರು, ಅದರ ಸೂತ್ರಧಾರ ಯಾರು, ಅದರಿಂದ ಯಾರಿಗೆ ಲಾಭವಾಯಿತು ಎಂಬುದು ಸ್ವತಃ ತನಿಖೆ ನಡೆಸಿದ ಪೊಲೀಸರಿಗೂ ಗೊತ್ತಿಲ್ಲ ಅಥವಾ ಗೊತ್ತಿದ್ದರೂ ಸತ್ಯ ಹೇಳಲು ಧೈರ್ಯ ಮಾಡುತ್ತಿಲ್ಲ. ಬದಲಾಗಿ ಸತ್ಯ ಗೊತ್ತಿರುವ ಅಫಜಲ್‌ನನ್ನು ತಕ್ಷಣವೇ ಗಲ್ಲಿಗೇರಿಸ ಬೇಕೆಂದು ಅದ್ವಾನಿಯಂತಹ ಚಿಡ್ಡಿಗಳು ಕಿರುಚಾಡು ತ್ತಿದ್ದಾರೆ. ಅಲ್ಲಾ.... ಸತ್ಯವನ್ನೇ ಹೊಸಕಿ ಹಾಕಬೇಕೆಂಬ ಆತುರ ಅದ್ವಾನಿಗ್ಯಾಕೆ.... ಈ ಪ್ರಶ್ನೆಯಲ್ಲಿ ಅಡಗಿರುವ ಸೂಕ್ಷ್ಮತೆಗಳಿಗೂ, ರಾಷ್ಟ್ರ ಭಕ್ತರ ಅಸಲಿ ದೇಶಭಕ್ತಿಗೂ ಸಂಬಂಧ ಇದೇ ಎಂದೆನಿಸುವುದಿಲ್ಲವೇ?

* * * * * * * * * * *

ಮೇ ದಿನದಂದು ನಮ್ಮ ಕಚೇರಿಯಲ್ಲಿ ಟೈಮ್ಸ್ ಆಫ್ ಇಂಡಿಯಾದ ವಿದೇಶಿ ಸಂಪಾದಕ ರಾಗಿರುವ, ಈಗ ಹಾಲಿ ಅಮೆರಿಕಾದಲ್ಲಿ ವಾಸಿಸುತ್ತಿರುವ ಚಿದಾನಂದ ರಾಜಘಟ್ಟರಿಂದ "ಮಧ್ಯ ಪ್ರಾಚ್ಯ ಪ್ರದೇಶದಲ್ಲಿ ಅಮೆರಿಕದ ದುಸ್ಸಾಹಸಗಳು" ಎಂಬುದರ ಬಗ್ಗೆ ಚರ್ಚೆಯನ್ನು ಏರ್ಪಡಿಸಿದ್ದೇವು. (ಕಾಲಾವಕಾಶವಿರದಿದ್ದ ಕಾರಣ ಇದರ ಬಗ್ಗೆ 'ಲಂಕೇಶ್'ನಲ್ಲಿ ಪ್ರಕಟಿಸಲಾಗಿರಲಿಲ್ಲ, ಕ್ಷಮಿಸಿ)

ಅಮೆರಿಕ ಬಿಳಿಯರ ವಸಾಹತು ಶಾಹಿ ಧೋರಣೆ ಬಗ್ಗೆ ಮಾತ ನಾಡುತ್ತಾ ಹೇಗೆ 1947ರತನಕವೂ ಅಲ್ಲಿನ ಸರಕಾರದಲ್ಲಿ ಗೃಹ ಸಚಿವಾಲ ಯದ ಬದಲಾಗಿ 'ಯುದ್ಧ ಸಚಿವಾ ಲಯ' ಇತ್ತೆಂದು ಚಿದು ಹೇಳಿದ್ದು ಎಲ್ಲರನ್ನು ಚಕಿತಗೊಳಿಸಿತು. ಈ ವಿಷಯವನ್ನು ವಿಸ್ತರಿಸುತ್ತಾ, ಜನ ಸಾಮಾನ್ಯರೂ ಬಂದೂಕುಗಳನ್ನು ಹೊಂದಬಹುದೆಂಬ ಅಲ್ಲಿನ ಕಾಯ್ದೆಯ ಬಗ್ಗೆ ಪ್ರಸ್ತಾಪಿಸುತ್ತಾ, ಇವತ್ತು ಅಮೆರಿಕ ಸರಕಾರವು ಅಫಘಾನಿಸ್ತಾನ ಮತ್ತು ಇರಾಕ್ ಸೇರಿದಂತೆ ಎಲ್ಲೆಡೆ ದಾಳಿ ಇಡಲು ಹವಣಿಸುತ್ತಿದ್ದೆ, ಪ್ರಧಾನವಾಗಿ ಅಮೆರಿಕ ಹೇಗೆ ಒಂದು ಯುದ್ಧ ಕೋರ ದೇಶವಾಗಿದೆ ಮತ್ತು ಅದರ ಹುಟ್ಟಿನಲ್ಲೇ ಹೇಗೆ ಮಿಲಿಟರಿ ಮಹತ್ವಾ ಕಾಂಕ್ಷೆ ಇತ್ತು ಎಂಬುದನ್ನು ವಿವರಿಸಿದರು.

ಇನ್ನೊಂದು ಅಚ್ಚರಿ ಹುಟ್ಟಿಸಿದ ಅಂಶವೆಂದರೆ, ಬಿಲ್ ಕ್ಲಿಂಟನ್ ಒಬ್ಬನನ್ನು ಬಿಟ್ಟರೆ 20ನೇ ಶತಮಾನದ ಪೂರ್ವಾರ್ಧದಲ್ಲಿ ಅಮೆರಿಕದ ಅಧ್ಯಕ್ಷ ಪದವಿಯನ್ನು ಅಲಂಕರಿಸಿರುವ ಪ್ರತಿಯೊಬ್ಬರೂ ಹೇಗೆ ಮಿಲಿಟರಿ ಅಧಿಕಾರಿಗಳಾಗಿದ್ದು ಆ ಹಿನ್ನೆಲೆಯನ್ನು ಹೊಂದಿರುವವರೇ ಆಗಿದ್ದರೆಂಬುದು. ಪ್ರಸ್ತುತ ಅಧ್ಯಕ್ಷ ಜಾರ್ಜ್ ಬುಷ್ ಕೂಡ ಯುದ್ಧ ಭೂಮಿಯಲ್ಲಿ ಸೇವೆ ಸಲ್ಲಿಸದಿದ್ದರೂ ಹಲವು ವರ್ಷಗಳ ಕಾಲ ಅಮೆರಿಕದ ಸೈನ್ಯದಲ್ಲಿದ್ದಾತ.

ಇದೇ ವಾದವನ್ನು ಮುಂದುವರೆಸಿದ ಚಿದು "ಇರಾಕ್ ಮತ್ತು ಅಫಘಾನಿಸ್ತಾನದಲ್ಲಿ ಅಮೆರಿಕ ಮಾಡಿ ರುವ ದಾಳಿಗೆ ತೈಲ ಕಾರಣವಲ್ಲ, ಬದಲಿಗೆ ಅಮೆರಿಕದ ಆಡಳಿತ ವ್ಯವಸ್ಥೆಯ ಡಿ.ಎನ್.ಎ ನಲ್ಲಿರುವ ಈ ಮಿಲಿಟರಿ ಗುಣವೇ ಕಾರಣ" ಎಂದು ಹೇಳಿದ್ದು ಚರ್ಚೆಗೆ ಬಂದಿದ್ದವರಲ್ಲಿ ಆತಂಕವನ್ನು ಮೂಡಿಸಿತು.

ಅಂದು ಬಂದಿದ್ದ ಹಿರಿಯ ಸಾಹಿತಿ ಅನಂತ ಮೂರ್ತಿಯವರನ್ನು ಒಳಗೊಂಡಂತೆ ಪ್ರತಿಯೊಬ್ಬರೂ ಈ ಡಿ.ಎನ್.ಎ. ಥಿಯರಿಯನ್ನು ವಿರೋಧಿಸಿದರು. ಆರ್ಥಿಕ ಮತ್ತು ರಾಜಕೀಯ ವಿದ್ಯಮಾನದ ಭಾಗವಾ ಗಿರುವ ನವ ಸಾಮ್ರಾಜ್ಯಶಾಹಿಯ ಪರಿಣಾಮಗಳನ್ನು ಕೇವಲ ಒಂದು ಮನಃಶಾಸ್ತ್ರೀಯ ವಿಶ್ಲೇಷಣೆಗೆ ಇಳಿಸಿ ಬಿಡುವುದು ಸೂಕ್ತವಲ್ಲ ಎಂದು ಸಭಿಕರೆಲ್ಲರೂ ಅಭಿ ಪ್ರಾಯಪಟ್ಟರು.

ಆದರೆ ಈ ಡಿ.ಎನ್.ಎ ಥಿಯರಿಯನ್ನು ಒಂದು ರೂಪಕವನ್ನಾಗಿ ಅರ್ಥ ಮಾಡಿಕೊಂಡರೆ ಅದು ನವ ಸಾಮ್ರಾಜ್ಯಶಾಹಿಯನ್ನು ಅರ್ಥ ಮಾಡಿಕೊಳ್ಳಲು ಒಂದು ಹೊಸ ವ್ಯಾಖ್ಯಾನವನ್ನೇ ಒದಗಿಸುತ್ತದೆ ಎಂದು ಚಿದು ಅಭಿಪ್ರಾಯಪಟ್ಟರು.

ಸಭೆಯಲ್ಲಿ ಒಬ್ಬರು ಹೇಳಿದಂತೆ ಅಮೆರಿಕದ ಬುಷ್ ಬಗ್ಗೆ ಚಿದು ಹೇಳಿದ್ದನ್ನೆಲ್ಲ ನಾವು ಇಲ್ಲಿ ನಾರಾಯಣ ಮೂರ್ತಿಗಳ ಬಗ್ಗೆ ಮತ್ತು ಎಸ್. ಎಲ್. ಭೈರಪ್ಪನ ಬಗ್ಗೆ ಕೂಡಾ ಹೇಳಬಹುದು. ಯಾಕೆಂದರೆ ಬುಷ್‌ನಂತೆ ಇವರೂ ಸಹ ಅನ್ಯಾಕ್ರಮಣವಾದಿಗಳು. ಇರಾಕ್ ಮೇಲೆ ಯುದ್ಧ ಮಾಡಿದಾಗ ಸಹಸ್ರಾರು ನಿರಪರಾಧಿಗಳು ಸತ್ತರಲ್ಲಾ ಎಂದರೆ, ಬುಷ್ ವಿಶ್ವಶಾಂತಿಗಾಗಿ ನಡೆಯುವ ಯುದ್ಧದಲ್ಲಿ ಈ ಬಗೆಯ ಕೊಲ್ಯಾಟರಲ್ ಡ್ಯಾಮೇಜು ಸಹಜ ಎಂದು ಹೇಳಿದ್ದ. ಅದೇ ರೀತಿ ಇಲ್ಲಿ ಜಾಗತೀ ಕರಣದಿಂದಾಗಿ ರೈತರು ಆತ್ಮಹತ್ಯೆ ಮಾಡಿ ಕೊಳ್ಳುತ್ತಿದ್ದಾ ರಲ್ಲಾ ಎಂದರೆ ದೇಶದ ಅಭಿವೃದ್ಧಿಗೆ ಒಂದಷ್ಟು ಜನ ತ್ಯಾಗ ಮಾಡಲೇ ಬೇಕು ಎನ್ನುತ್ತಾರೆ ನಾಣಿ-ಭೈರಿಗಳು!

ಎಲ್ಲಕ್ಕಿಂತ ಹೆಚ್ಚಾಗಿ ಬುಷ್ ಮತ್ತು ನಾರಾಯಣ ಮೂರ್ತಿ-ಭೈರಪ್ಪಗಳೆಲ್ಲಾ "ಬಲವಿದ್ದವನು, ಪ್ರತಿಭೆ ಇದ್ದವನು ಬದುಕುತ್ತಾನೆ" ಎಂಬ ಸಾಮಾಜಿಕ ಡಾರ್ವಿನ್ ವಾದವನ್ನೇ ಮುಂದಿಡುತ್ತಾರೆ. ಅಂದರೆ ಮನುಷ್ಯ ಜಗತ್ತಿನಲ್ಲೂ ಮಾನವೀಯತೆ ಅಮುಖ್ಯವಾಗಿ ಮೃಗಗಳ ಲೋಕದ ಬಲವೇ ಮುಖ್ಯವಾಗುತ್ತದೆ.

ಮೂಲಭೂತವಾಗಿ ಭೈರಪ್ಪ ಮತ್ತು ಬುಷ್‌ಗಳಿಬ್ಬರೂ ತಾರತಮ್ಯ ಸಿದ್ಧಾಂತವನ್ನೇ ಉಸಿರಾಡುತ್ತಾರೆ. ತಾವು ಬೇರೆ ದೇಶವನ್ನು ಸುಲಿಯುವುದೇ ಆ ದೇಶಕ್ಕೆ ನಾಗರಿಕತೆ ಕಲಿಸಿಕೊಡಲು ಎಂದು ಬುಷ್ ಹೇಳಿದರೆ, ಇಲ್ಲಿನ ಇತರ ಜಾತಿಗಳಿರುವುದೇ ಬ್ರಾಹ್ಮಣ್ಯದ ಸೇವೆ ಮಾಡಲು ಮತ್ತು ಅದರಿಂದಲೇ ಆ ಜಾತಿಗಳಿಗೆ ಮುಕ್ತಿ ಎಂದು ನಾಣಿ-ಭೈರಿಗಳು ಮೂರು ಸಾವಿರ ವರ್ಷಗಳಿಂದ ಸಾರಿಕೊಂಡು ಸುಲಿಯುತ್ತಾ ಬಂದಿದ್ದಾರೆ.

ಹೀಗೆ ಸಮೀಕರಿಸಿ ನೋಡಿದಾಗ ಇಲ್ಲಿನ ಬ್ರಾಹ್ಮಣ್ಯದ ಜೊತೆ ಅಮೆರಿಕದ ನವ ಸಾಮ್ರಾಜ್ಯಶಾಹಿ ಧೋರಣೆ ಗೆಳೆತನ ಸಾಧಿಸಿರುವುದು ಹೇಗೆಂದು ಅರ್ಥವಾಗುತ್ತದೆ. ಅಂದು ಸಭೆಯಲ್ಲಿ ಅನಂತಮೂರ್ತಿ ಯವರು ಜಾಗತೀಕರಣಕ್ಕೆ ಎಲ್ಲಾ ದೇಶಗಳಲ್ಲೂ ಬೆಂಬಲಿಸುವ ವರ್ಗವಿದೆ ಎಂದು ಹೇಳಿದ್ದು ಇದೇ ಅರ್ಥದಲ್ಲಿ. ಅಂದರೆ, ಇವತ್ತಿಗೂ ನಮ್ಮಂತಹ ದೇಶಗಳ ಮಧ್ಯಮ ಮತ್ತು ಮೇಲುವರ್ಗದ ಜನರ ಗುರಿ ಅಮೆರಿಕಾಕ್ಕೆ ಹೋಗುವುದು, ಇಲ್ಲವಾದರೆ ಇಲ್ಲೇ ಅಮೆರಿಕನ್ನರಂತೆ ಜೀವಿಸುವುದು. ಅವರೆಲ್ಲರಿಗೆ ಅಮೆರಿಕ ಮತ್ತು ಅದರ ಅಧ್ಯಕ್ಷ ಬುಷ್ ಅಪ್ಪರಂತೆ ಕಾಣಿಸುವುದೂ ಇದೇ ಕಾರಣಕ್ಕೆ. ಇವರನ್ನೆಲ್ಲ ತನ್ನೊಂದಿಗೆ ಸೇರಿಸಿಕೊಂಡು ಅಮೆರಿಕ ದೇಶವು ಬಡದೇಶಗಳಲ್ಲಿನ ಅಸಹಾಯಕರನ್ನು, ಹಿಂದುಳಿದವರನ್ನು ಮುಕ್ಕಿ ತಿನ್ನುತ್ತಿದೆ.

ಅರುಂಧತಿರಾಯ್ ರವರು ಹೇಳಿರುವಂತೆ, ಭಾರತ ವಿಭಜನೆಗೊಂಡಿದೆ ಮಾತ್ರವಲ್ಲ, ಇವತ್ತು ದೇಶದ ಒಂದು ಭಾಗದ ಜನರ ಮೇಲೆ ಯುದ್ಧ ಸಾರಿದ್ದಾರೆ ಬುಷ್-ನಾಣಿ-ಭೈರಿಗಳು.

– ಗೌರಿ ಲಂಕೇಶ್

'ಆನು ದೇವಾ'-ಒಂದು ಚರ್ಚೆ

ಬಸವಣ್ಣನ ಜಾತಿ ಮೂಲ ಹಾಗೂ 'ಆನು ದೇವಾ ಹೊರಗಣವನು' ಕೃತಿಯ ಬಗ್ಗೆ ಲಂಕೇಶ್ ಕಚೇರಿಯಲ್ಲಿ ಒಂದು ಸಂವಾದ ಸಭೆ ನಡೆಯಲಿದೆ. ಸಂಶೋಧಕ ಹಾಗೂ 'ಆನು ದೇವಾ' ಲೇಖಕ ಡಾ. ಬಂಜಗೆರೆ ಜಯಪ್ರಕಾಶ್ ಆ ದಿನ ಸವಿಸ್ತಾರವಾಗಿ ಮಾತನಾಡಲಿದ್ದಾರೆ. ನಂತರ ಚರ್ಚೆ ಇರುತ್ತದೆ.

ಪ್ರತಿಕ್ರಿಯಿಸುವವರು:

ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ)
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್

ಡಾ. ಎಲ್. ಹನುಮಂತಯ್ಯ
ಕವಿ-ಶಾಸಕರು

ಡಾ. ಬಸವರಾಜ ಕಲ್ಗುಡಿ
ಕನ್ನಡ ವಿಭಾಗ, ಬೆಂಗಳೂರು ವಿ.ವಿ.

'ಅನುದೇವಾ' ಪುಸ್ತಕ 'ಲಂಕೇಶ್' ಕಚೇರಿಯಲ್ಲಿ ದೊರೆಯುತ್ತದೆ. ಪುಸ್ತಕದ ಬೆಲೆ 60 ರೂಪಾಯಿ. ಅಂಚೆ ಮೂಲಕ ಪಡೆಯಲಿಚ್ಚಿಸುವವರು ಹೆಚ್ಚಿಗೆ 20 ರೂ. ಅಂಚೆ ವೆಚ್ಚ ಸೇರಿ ಒಟ್ಟು 80 ರೂಪಾಯಿ ಕಳುಹಿಸಿ.

ಸ್ಥಳ: ಲಂಕೇಶ್ ಕಚೇರಿ, ಬಸವನಗುಡಿ, ಬೆಂಗಳೂರು


ದಿನಾಂಕ: 10.5.2007 ಗುರುವಾರ

ಸಮಯ: ಸಂಜೆ 6 ಗಂಟೆಗೆ

ಆಸಕ್ತರೆಲ್ಲರಿಗೂ ಸ್ವಾಗತ

'ಧರ್ಮಕಾರಣ' ನಿಷೇಧ:

ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಹಲ್ಲೆ



ರಾಜ್ಯ ಸರಕಾರವು ಪಿ.ವಿ. ನಾರಾಯಣರವರ 'ಧರ್ಮಕಾರಣ' ಕೃತಿಯ ಮೇಲೆ ನಿಷೇಧ ಹೇರಿದ್ದನ್ನು ಪ್ರಶ್ನಿಸಿ ಹೈ ಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಮುಂದೆ ಮನವಿ ಸಲ್ಲಿಸಿದ್ದವರಲ್ಲಿ ಬಂಡಾಯ ಬರಹಗಾರ ಬರಗೂರು ರಾಮಚಂದ್ರಪ್ಪನವರು ಪ್ರಮುಖರು. ಈಗಪ್ರಕರಣಕ್ಕೆ ಸಂಬಂಧಿಸಿದಂತೆ ಹೊರಬಿದ್ದಿರುವ ತೀರ್ಪನ್ನು ಕುರಿತು ಅವರ ಪ್ರತಿಕ್ರಿಯೆ ಇಲ್ಲಿದೆ...

ಬರಗೂರು ರಾಮಚಂದ್ರಪ್ಪ

(ನಿರೂಪಣೆ : ಕುಮಾರ್ ಬುರಡಿಕಟ್ಟಿ)

ಪಿ.ವಿ. ನಾರಾಯಣರವರ ಕೃತಿಯ ಮೇಲೆ ರಾಜ್ಯ ಸರ್ಕಾರ ಹೇರಿದ್ದ ನಿಷೇಧವನ್ನು ಸುಪ್ರೀಮ್‌ಕೋರ್ಟ್ ಪುರಸ್ಕರಿಸಿ ಮಾನ್ಯ ಮಾಡಿರುವುದು ಸುತಾರಾಂ ಸರಿಯಲ್ಲ. ಸಂವಿಧಾನದ ಭಾಗ 3, ಪರಿಚ್ಛೇದ 19A ಪ್ರಕಾರ ಈ ದೇಶದ ಪ್ರತಿಯೊಬ್ಬ ನಾಗರೀಕನಿಗೂ ವಾಕ್ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯವಿದೆ. ಕೋರ್ಟಿನ ಈ ತೀರ್ಪು ನಾಗರಿಕನ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಹಲ್ಲೆಯಲ್ಲದೇ ಮತ್ತೇನಲ್ಲ.

ಅಂದಮಾತ್ರಕ್ಕೆ, ಪಿ.ವಿ. ನಾರಾಯಣ್‌ರವರು ಧರ್ಮಕಾರಣ. ಕೃತಿಯಲ್ಲಿ ಹೇಳಿದ್ದೆಲ್ಲವೂ ಚಾರಿತ್ರಿಕ ಸತ್ಯವೆಂದು ನಾನು ಹೇಳುತ್ತಿಲ್ಲ. ಅವರ ಕೃತಿಯ ಚಾರಿತ್ರಿಕ ನಿಖರತೆಯ ಬಗ್ಗೆ ಅಥವಾ ಅವರ ಅಭಿಪ್ರಾಯಗಳ ಸರಿ-ತಪ್ಪುಗಳ ಬಗ್ಗೆ ಚರ್ಚೆ ನಡೆಯಲಿ. ಅವರು ಹೇಳಿದ್ದು ತಪ್ಪು ಎಂದು ಬೇಕಾದರೆ ಯಾರಾದರೂ ವಾದಿಸಲಿ. ಅದನ್ನು ಬಿಟ್ಟು ನೀನು ನಿನ್ನ ಅಭಿಪ್ರಾಯವನ್ನು ವ್ಯಕ್ತಗೊಳಿಸುವುದೇ ಸಲ್ಲದು ಎಂದು ನಿಷೇಧದ ಮೂಲಕ ಬಾಯ್ಮುಚ್ಚಿಸುವುದು ಅಭಿವ್ಯಕ್ತಿ ಸ್ವಾತಂತ್ರ್ಯಾಪಹರಣವಲ್ಲದೆ ಮತ್ತಿನ್ನೇನು?

ಈ ರೀತಿ ಬರಹಗಾರರ ಪುಸ್ತಕಗಳನ್ನು ನಿಷೇಧಿಸುವ ಪರಿಪಾಠ ನಮಗೆ ಹೊಸದೇನೂ ಅಲ್ಲ. ತಸ್ಲೀಮಾ, ಸಲ್ಮಾನ್ ರಷ್ದಿ ಮುಂತಾದವರ ವಿಚಾರದಲ್ಲೂ ನಾವಿದನ್ನು ನೋಡಿದ್ದೇವೆ. ಸಾಮಾನ್ಯವಾಗಿ ಒಂದು ಪುಸ್ತಕವನ್ನು ನಿಷೇಧಿಸಲು ಸರ್ಕಾರ ಮತ್ತು ಕೋರ್ಟುಗಳು ಎರಡು ಕಾರಣಗಳನ್ನು ಕೊಡುತ್ತಿವೆ. ಒಂದನೆಯದು, ಕೃತಿಯೊಂದು ಅನೈತಿಕ, ಅಶ್ಲೀಲ, ಅಸಭ್ಯವಾಗಿದ್ದರೆ ಆ ಕಾರಣವನ್ನು ಕೊಟ್ಟು ನಿಷೇಧ ಮಾಡುತ್ತವೆ. ಎರಡನೆಯದಾಗಿ, ಕೃತಿಯು ಸಮಾಜದಲ್ಲಿ ಕಾನೂನು ಮತ್ತು ಸುವ್ಯವಸ್ಥೆ (Law and Order)ಯನ್ನು ಹದಗೆಡಿಸುವಂತಿದ್ದರೆ ಆ ಕಾರಣ ನೀಡಿ ನಿಷೇಧ ಮಾಡುತ್ತವೆ. ಆದರೆ 'ಧರ್ಮಕಾರಣ'ದಲ್ಲಿ ಅಂತಹುದ್ದೇನೂ ಇಲ್ಲ. ಇದನ್ನು 10 ವರ್ಷಗಳ ಹಿಂದೆ ರಾಜ್ಯ ಸರ್ಕಾರ ನಿಷೇಧ ಮಾಡಿದಾಗ ಲಂಕೇಶ್‌ರವರು ಪ್ರತಿಭಟನೆಗೆ ಕರೆ ನೀಡಿದ್ದರು. ನಾವೆಲ್ಲರೂ ಅದರಲ್ಲಿ ಭಾಗವಹಿಸಿ ಸರ್ಕಾರದ ಕ್ರಮವನ್ನು ಪ್ರತಿಭಟಿಸಿದ್ದೆವು. ಆದರೆ ಈಗ ಸುಪ್ರೀಂಕೋರ್ಟ್ ಕೂಡ ಸರ್ಕಾರದ ಕ್ರಮವನ್ನು ಎತ್ತಿಹಿಡಿದಿದ್ದರಿಂದ ಸುಪ್ರೀಮ್ ಕೋರ್ಟಿನ ಮೇಲಿನ ವಿಶ್ವಾಸದ ಬಗ್ಗೆ ಪ್ರಶ್ನೆ ಏಳುತ್ತಿದೆ.

ನಮ್ಮ ಸಂವಿಧಾನ ಪ್ರತಿಯೊಬ್ಬನಿಗೂ ಮೂಲಭೂತ ಹಕ್ಕುಗಳನ್ನು ಕೊಟ್ಟಿದೆ. ಅವುಗಳನ್ನು ಎಂತಹ ಪರಿಸ್ಥಿತಿಯಲ್ಲಿ ನಿರ್ಬಂಧಿಸಬಹುದು ಎಂಬ ವಿಚಾರಗಳನ್ನೂ ಸಂವಿಧಾನದಲ್ಲಿಯೇ ನೀಡಲಾಗಿದೆ. ಆದರೆ 'ಧರ್ಮಕಾರಣ' ಸಂವಿಧಾನ ಪಟ್ಟಿ ಮಾಡಿದ ನಿರ್ಬಂಧನಾ ಸಂದರ್ಭಕ್ಕೆ ಹೋಗೇ ಇಲ್ಲ. ಆದರೂ ಅದನ್ನು ನಿಷೇಧ ಮಾಡಲಾಗಿದೆ. 'ನಿರ್ಬಂಧನೆ' ಎಂಬ clause ನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ.

ಮಾಸ್ತಿ ವೆಂಕಟೇಶ್ ಐಯ್ಯಂಗಾರ್‌ರವರ 'ಚಿಕವೀರ ರಾಜೇಂದ್ರ' ಕೃತಿಯ ಕುರಿತಂತೆಯೂ ಇದೇ ರೀತಿ ವಾದ-ವಿವಾದ ಎದ್ದಿತ್ತು. ಅದರಲ್ಲಿ ಮಾಸ್ತಿಯವರು ರಾಜನನ್ನು ಕೆಟ್ಟದಾಗಿ ಚಿತ್ರಿಸಿರುವುದರ ಹಿಂದೆ ಒಂದು ನಿರ್ದಿಷ್ಟ ಜಾತಿಯ ಬಗ್ಗೆ ಅಸಹನೆ ಇದೆ ಎಂಬ ಆರೋಪ ಬಂದಿತ್ತು. ಅದಕ್ಕೆ 'ಜ್ಞಾನಪೀಠ' ಪ್ರಶಸ್ತಿ ಬಂದಾಗ ಇನ್ನೂ ದೊಡ್ಡ ವಿವಾದವಾಗಿ ಪರಿಣಮಿಸಿತು. ಜ್ಞಾನಪೀಠ ಪ್ರಶಸ್ತಿಗಾಗಿನ ನೀತಿ ನಿಯಮಗಳನ್ನೇ ಬದಲಿಸಿ ಒಂದು ಕೃತಿಗಾಗಿಯಲ್ಲದೇ ಒಟ್ಟು ಸಾಹಿತ್ಯ ಸಾಧನೆಗೆ ಪ್ರಶಸ್ತಿ ನೀಡುವ ಪರಿಪಾಠ ಪ್ರಾರಂಭವಾದದ್ದೇ ಈ ವಿವಾದದಿಂದಾಗಿ. ಹೀಗೆ ಚರ್ಚೆಯ ಮಟ್ಟಿಗೆ ಇದು ಓಕೆ. ಆದರೆ ಕೃತಿಯನ್ನು ನಿಷೇಧ ಮಾಡುವುದು ಅತಿರೇಕ ಮಾತ್ರವಲ್ಲ ಅಭಿವ್ಯಕ್ತಿಯ ಸ್ವಾತಂತ್ರ್ಯಾಪಹರಣ ಕೂಡ.

ಕುವೆಂಪುರವರ 'ಶೂದ್ರ ತಪಸ್ವಿ' ನಾಟಕದ ವಿಚಾರದಲ್ಲೂ ವಿವಾದ ಎದ್ದಿತ್ತು. ಶೂದ್ರನಿಗೂ ತಪಸ್ಸು ಮಾಡುವ ಹಕ್ಕಿದೆ ಎಂಬ ಸರಳ ಆಶಯವನ್ನು ಬಿಂಬಿಸುವ ಕೃತಿ ಅದು. ಅದರಲ್ಲಿ ರಾಮಾಯಣದ ಶಂಬೂಕನ ಪಾತ್ರವಿದೆ. ಶಂಬೂಕ ತಪಸ್ಸು ಮಾಡುವಾಗ ರಾಮ ಬಾಣಬಿಟ್ಟು ಕೊಂದು ಹಾಕುತ್ತಾನೆ. ಇದನ್ನು ಕುರಿತು ವಿವಾದ ಎದ್ದಿತ್ತು. ಆದರೆ ಕುವೆಂಪುರವರು 'ಶೂದ್ರ ತಪಸ್ವಿ'ಯ ಮೂರನೇ ಆವೃತ್ತಿಗೆ ಮುನ್ನುಡಿ ಬರೆಯುತ್ತಾ:

"ನಾನು ಬರೆದ ಶೂದ್ರ ತಪಸ್ವಿ ನಾಟಕ ಬ್ರಾಹ್ಮಣ ವಿರೋಧಿ ಎಂದು ಕೆಲವರು ತೆಗಳಿದರು. ಇನ್ನು ಕೆಲವರು ಬ್ರಾಹ್ಮಣ ವಿರೋಧಿ ಅನ್ನೊ ಕಾರಣಕ್ಕೇನೆ ಹೊಗಳಿದರು. ಇಬ್ಬರೂ ನನ್ನ ಕೃತಿಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೇ ಅನ್ಯಾಯ ಮಾಡಿದರು."

ಎಂದು ಹೇಳುತ್ತಾ ವಿವಾದಕ್ಕೆ ತೆರೆ ಎಳೆದಿದ್ದರು. ಹೀಗೆ ಇವು ಚರ್ಚೆಯ ಮಟ್ಟಕ್ಕೆ ಮಾತ್ರ ನಿಲ್ಲದೇ ನಿಷೇಧದ ಮಟ್ಟಕ್ಕೆ ಹೋಗಿದ್ದರೆ ನಮಗೆ ಮಾಸ್ತಿ ಮತ್ತು ಕುವೆಂಪುರವರ ಅಮೂಲ್ಯ ಕೃತಿಗಳು ಸಿಗುತ್ತಿರಲಿಲ್ಲ.

ಒಂದು ಕೃತಿಯ ನಿಷೇಧವನ್ನು ಸಾರಾಸಗಟಾಗಿ ವಿರೋಧಿಸುವಾಗ ಕೆಲವು ಪ್ರಶ್ನೆಗಳು ಏಳುತ್ತವೆ. ದುರುದ್ದೇಶಪೂರ್ವಕವಾಗಿಯೇ ಒಂದು ಕೃತಿಯನ್ನು ರಚನೆ ಮಾಡಿದರೆ ಏನು ಮಾಡಬೇಕು? ನನ್ನ ಪ್ರಕಾರ ಆ ಕೃತಿ ಸೃಜನಶೀಲವಾಗಿದ್ದರೆ ಆ ಕುರಿತು ಚರ್ಚೆ ಮಾಡಬೇಕು. ಆ ಕೃತಿಯು ದುರುದ್ದೇಶವನ್ನು ಬಯಲಿಗೆಳೆದು ವಿರೋಧಿಸಬೇಕೆ ಹೊರತು ನಿಷೇಧ ಪರಿಹಾರ ಅಲ್ಲ.

ಕೆಲವರು ದುರುದ್ದೇಶಪೂರ್ವಕವಾಗಿಯೇ ಕೃತಿ ರಚನೆ ಮಾಡುತ್ತಾರೆ. ತಮ್ಮ ಧರ್ಮವನ್ನು ಎಷ್ಟು ಹೊಗಳಿಕೊಂಡರೂ ಚಿಂತೆ ಇಲ್ಲ. ಆದರೆ ಪರಧರ್ಮೀಯರನ್ನು ಅಮಾನುಷವಾಗಿ ಚಿತ್ರಿಸುವುದು ಕೇವಲ ಸಂವಿಧಾನ ವಿರೋಧಿ ಅಲ್ಲ ಮಾನವ ವಿರೋಧಿ ಕೂಡ.

ಇತಿಹಾಸವನ್ನೇ ತಿರುಚುವುದು, ಜಾತಿವಾದ-ಕೋಮುವಾದಗಳನ್ನು ಬಿತ್ತಿ ಬೆಳೆಸುವ ರೀತಿಯಲ್ಲಿ ಕೃತಿ ರಚನೆ ಮಾಡಿದರೆ ಏನು ಮಾಡಬೇಕು? ನನ್ನ ಪ್ರಕಾರ ಆಗಲೂ ನಿಷೇಧ ಒಂದು ಶಾಶ್ವತ ಪರಿಹಾರವಲ್ಲ. ಅಂತಹ ವಿಚಾರಗಳನ್ನು ಅಲ್ಲಗಳೆಯುವ, ಅವು ತಪ್ಪೆಂದು ತೋರಿಸುವ ಮತ್ತು ಅಂತಹ ಕೃತಿಯ ಹಿಂದಿನ ದುರುದ್ದೇಶಗಳನ್ನು ಬಯಲಿಗೆಳೆಯುವ ಕೃತಿಗಳು ಹೊರಬರಬೇಕು. ಆ ಮೂಲಕ ತಿರುಚಲ್ಪಟ್ಟ ವಿಚಾರಗಳನ್ನು ಪರಿಷ್ಕರಿಸಬೇಕು. ಲೇಖಕನಿಗೆ ಸಾಮಾಜಿಕ ಜವಾಬ್ದಾರಿ ಎಂಬುದೊಂದಿದ್ದರೆ ಇಂತಹ ವಿವಾದಗಳೇ ಏಳುವುದಿಲ್ಲ.


ಇದು ಕೇವಲ ಸಂವಿಧಾನಾತ್ಮಕ ಸಮಸ್ಯೆಯೂ ಅಲ್ಲ. ಇದನ್ನು ಕೇವಲ ಕಾನೂನಿನ ಕಣ್ಣಿನಿಂದ ಮಾತ್ರ ನೋಡುವ ಅಗತ್ಯವೂ ಇಲ್ಲ. ನನ್ನ ಪ್ರಕಾರ ನಮ್ಮದು ಫ್ಯೂಡಲ್ ಡೆಮಾಕ್ರಸಿ. ಇಲ್ಲಿ ಚುನಾವಣೆಯೊಂದೇ ಪ್ರಜಾತಂತ್ರದ ಅಂತಿಮ ಸಾಧನ-ಸಾಧನೆ ಅಂತ ನಂಬಿಸಲಾಗಿದೆ. ಸಂವಿಧಾನಾತ್ಮಕ ಹಕ್ಕುಗಳು ಅರಿವು-ಅನುಭವಕ್ಕೆ ಬಾರದಂತೆ ಬದುಕುತ್ತಿರುವ ಕೋಟ್ಯಂತರ ಜನ ನಮ್ಮಲ್ಲಿದ್ದಾರೆ. ನನ್ನ ಉದಾಹರಣೆಯನ್ನೇ ತಗೊಳ್ಳಿ. ನಾನು ನಮ್ಮ ಊರಿನಲ್ಲಿದ್ದಾಗ ಈ ಯಾವ ಹಕ್ಕುಗಳೂ ನನ್ನ ಅನುಭವಕ್ಕೆ ಬಂದಿರಲಿಲ್ಲ. ನಾನು ಓದಿ, ಸಂಬಳ ಪಡೆಯುವಂತಾಗಿ ನನ್ನ ವರ್ಗ ಬದಲಾವಣೆಯಾದಾಗ ಮಾತ್ರವೇ ಆ ಹಕ್ಕುಗಳ ಅನುಭವ ನನಗಾಗತೊಡಗಿದ್ದು. ಎಲ್ಲರಿಗೂ ಆ ಹಕ್ಕುಗಳು ಅನುಭವಕ್ಕೆ ಬಂದಾಗ ಮಾತ್ರ ಅದು ನಿಜವಾದ democracy ಆಗಲು ಸಾಧ್ಯ. ಆದರೆ ನಮ್ಮದು ನಾಗರಿಕರಿಗೆ ಹಕ್ಕುಗಳೇ ಅರಿವು-ಅನುಭವಕ್ಕೆ ಬಾರದ ಫ್ಯೂಡಲ್ ಪ್ರಜಾಸತ್ತೆ. ಈಗ ಅದರೊಂದಿಗೆ ಬಂಡವಾಳವಾದವೂ ಸೇರಿಕೊಂಡು ಒಂದು ರೀತಿಯ ಹೈಬ್ರಿಡ್ ಆಗಿಹೋಗಿದೆ.

'ಧರ್ಮಕಾರಣ'ದಂತಹ ಕೃತಿಗಳ ನಿಷೇಧಗಳನ್ನು ಒಳಗೊಂಡಂತೆ ಸುಪ್ರೀಮ್‌ಕೋರ್ಟ್ ಇತ್ತೀಚೆಗೆ ನೀಡಿರುವ ಕೆಲವು ತೀರ್ಪುಗಳು ನಿಜಕ್ಕೂ ಆತಂಕಕಾರಿಯಾಗಿವೆ. ಭಾರತದ ಪ್ರಜಾತಂತ್ರ ವ್ಯವಸ್ಥೆಯ ಬುಡಕ್ಕೆ ಕೊಡಲಿ ಇಟ್ಟಂತೆ ಕಾಣುತ್ತಿವೆ. ಓಬಿಸಿ ಮೀಸಲಾತಿ ಕುರಿತಂತೆ, CET ಕುರಿತಂತೆ ಅದು ನೀಡಿರುವ ತೀರ್ಪುಗಳನ್ನು ಗಮನಿಸಿದರೆ ಕೋರ್ಟಿನ ಪ್ರತಿಗಾಮಿತನದ ದರ್ಶನವಾಗುತ್ತದೆ. ಸಾಮಾಜಿಕ ಕಾಳಜಿ ಎಂಬುದು ಕೋರ್ಟುಗಳ ಮಟ್ಟಿಗೆ ಕೊನೆ ಬೆಂಚಿಗೆ ಸೇರಿದ ವಿಚಾರವಾಗಿದೆ. ಇವೆಲ್ಲವುಗಳನ್ನು ಗಮನಿಸಿದಾಗ ನ್ಯಾಯಾಂಗದ ವಿಶ್ವಾಸಾರ್ಹತೆಯ ಪ್ರಶ್ನೆ ಕೂಡ ಉದ್ಭವವಾಗುತ್ತದೆ.

ಇನ್ನೊಂದೆಡೆಗೆ ಪ್ರಭುತ್ವವೂ ದಿನೇದಿನೇ ಪ್ರತಿಗಾಮಿಯಾಗುತ್ತಾ ಅದೂ ಪ್ರಜಾತಂತ್ರದ ಮೇಲೆ ಹಲ್ಲೆ ನಡೆಸುತ್ತಿದೆ. ಪೊಳ್ಳು ಎನ್‌ಕೌಂಟರ್‌ನಲ್ಲಿ ಹೋರಾಟಗಾರರನ್ನು ಕೊಂದು law and order ಅನ್ನು ಎತ್ತಿಹಿಡಿಯುವುದಕ್ಕೆ ಹೀಗೆ ಮಾಡಲಾಯಿತು ಎಂಬ ಹಣೆಪಟ್ಟಿ ಹಚ್ಚುವುದು ಇದಕ್ಕೊಂದು ನಿದರ್ಶನ. ಹೋರಾಟಗಾರರನ್ನು fake encounter ಮೂಲಕ ಬಾಯ್ಮುಚ್ಚಿಸುವುದು, ಬರಹಗಾರರನ್ನು 'ಕೃತಿ ನಿಷೇಧ'ದ ಮೂಲಕ ಬಾಯ್ಮುಚ್ಚಿಸುವುದು ಅದರ ಪರಿಪಾಠವಾಗಿ ಹೋಗಿದೆ. ಅಷ್ಟರಮಟ್ಟಿಗೆ ಪ್ರಭುತ್ವವು ಕ್ರೂರವಾಗುತ್ತಿದೆ. ಹೀಗೆ ನ್ಯಾಯಾಂಗ ಮತ್ತು ಕಾರ್ಯಾಂಗ ಎರಡೂ ಪ್ರಜಾತಂತ್ರದ ಮೇಲೆ ಹಲ್ಲೆ ನಡೆಸುತ್ತಿರುವ ಈ ಸಂದರ್ಭದಲ್ಲಿ ಸ್ವಾತಂತ್ರ್ಯ ಪರಿಕಲ್ಪನೆ, ನ್ಯಾಯಾಂಗದ ವಿಶ್ವಾಸಾರ್ಹತೆ, State Power ನ ಇತಿಮಿತಿಗಳು-ಮುಂತಾದವುಗಳನ್ನು ಕುರಿತ ಗಂಭೀರ ಚರ್ಚೆ ಹಿಂದೆಂದಿಗಿಂತಲೂ ಇಂದು ತುರ್ತಿನದಾಗಿದೆ. ಈ ನಿಟ್ಟಿನಲ್ಲಿ 'ಧರ್ಮಕಾರಣ'ದ ನಿಷೇಧ ಒಂದು ನೆಪ ಮಾತ್ರ.


ಕಡಲ ತಡಿಯ ಉಳ್ಳಾಲದಲ್ಲಿ ರಾಜಕಾರಣಿಗಳ ಕೊರೆತಕ್ಕೆ ಕಸರತ್ತು!

ನೇತ್ರಾವತಿ ನದಿಯು ಅರಬ್ಬೀ ಸಮುದ್ರವನ್ನು ಸಂಗಮಿಸುವ ಉಳ್ಳಾಲ ಪ್ರತೀ ಮಳೆಗಾಲದಲ್ಲೂ ನೆನಪಿಗೆ ಬರುವುದು ಕಡಲ ಕೊರೆತ ಮೂಲಕ. ಬೇಸಿಗೆಯಲ್ಲಿ ಕಾದ ಬಾಣಲೆಯಂತಾಗುವ ಉಳ್ಳಾಲದಲ್ಲೀಗ ಫರೀದರ ತೆರವಾದ ಸ್ಥಾನಕ್ಕೆ ಮರು ಚುನಾವಣೆಗೆ ದಿನಾಂಕ ಘೋಷಣೆಯಾಗುತ್ತಲೇ ರಾಜಕಾರಣಿಗಳ ಕೊರೆತಕ್ಕೆ ಅಖಾಡ ಸಿದ್ಧವಾಗುತ್ತಿದೆ. ಮುಸ್ಲಿಮರ ಸಂಖ್ಯಾ ಬಾಹುಳ್ಯವಿರುವ ಇಲ್ಲಿ ಕಾಂಗ್ರೆಸ್‌ಗೆ ಗೆಲುವು ಸುಲಭ. ಕರಾವಳಿಯಲ್ಲಿ ಕಮ್ಯೂನಲ್ ಟೆನ್ಶನ್ ಹುಟ್ಟಿಕೊಂಡಾಗಲೂ ಅದರ ಕಾವು ತೀವ್ರವಾಗುವುದು ಕೂಡಾ ಉಳ್ಳಾಲದಲ್ಲಿಯೇ ಆದ್ದರಿಂದ ಅಲ್ಲಿ ಬಹುಸಂಖ್ಯಾತ ಮುಸ್ಲಿಮರ ಅಭದ್ರ ಬದುಕೇ ಕಾಲಕಾಲಕ್ಕೆ ಬರುವ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಬಂಡವಾಳ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್‌ಗಾಗಿ ಕಣಚ್ಚೂರು ಮೋನು, ಕೋಡಿಬಾಲ್ ಇಬ್ರಾಹಿಂ ಮತ್ತು ಯು.ಟಿ. ಖಾದರ್ ನಡುವೆ ಭಾರೀ ಹಣಾಹಣಿ ನಡೆದು ಹೈಕಮಾಂಡ್‌ಗೆ ಪೀಕಲಾಟ ಕೊಟ್ಟಿತು. ಕೊನೆಗೆ ಇದು ಇತ್ಯರ್ಥವಾಗದೇ ಸಿಟ್ಟಿಂಗ್ ಎಂ.ಎಲ್.ಎ ಫರೀದ್‌ಗೆ ಸೀಟು ಕೊಟ್ಟು ಕೈತೊಳೆದುಕೊಂಡು ಕಾಂಗ್ರೆಸ್ ಹೈಕಮಾಂಡ್ ಈ ಒಂದು ಮರು ಚುನಾವಣೆಯ ಪರಿಸ್ಥಿತಿಗೆ ಉಳ್ಳಾಲವನ್ನು ದೂಡಿತ್ತು. ಇದೀಗ ಇಲ್ಲಿ ಶುರುವಿಟ್ಟಿರುವುದೇ ಸೀಟು ಗಿಟ್ಟಿಸಿಕೊಳ್ಳುವ ಕಸರತ್ತು. ಕಾಂಗ್ರೆಸ್‌ಗೆ ತೊಂದರೆ ಕೊಡಲೆಂದೇ [illegible] ಮುಸ್ಲಿಂ ಲೀಗ್ ಸಿ. ಜಮಾಲ್ [illegible]ಯೆಂದು ಈಗಾಗಲೇ ಘೋಷಿಸಿದೆ.



ಇದು ಸಾಲದ್ದಕ್ಕೆ ಸಲಫಿ ಪಂಗಡದ ಲೀಡರ್ ಇಸ್ಮಾಯಲ್ ಶಾಫಿ ತಾನು ಪಕ್ಷೇತರ ಅಭ್ಯರ್ಥಿಯೆಂದು ಟೊಂಕ ಕಟ್ಟಿ ನಿಂತು, ಕಾಂಗ್ರೆಸ್ಸಿಗರಿಗೆ ಭಯ ಹುಟ್ಟಿಸಲು ತೊಡಗಿದ್ದಾನೆ. ಉಳ್ಳಾಲದಲ್ಲಿ ಸುನ್ನಿಗಳ ವಿರುದ್ಧವಿರುವ ಸಲಫಿಗಳ ಕಮ್ಮಿಯೆಂದರೂ 10,000 ಮತಗಳಿವೆ. ಇವು ಕಾಂಗ್ರೆಸ್‌ಗೆ ಇಡುಗಂಟು. ಆದ್ದರಿಂದ ತನ್ನ ಕಾಲಬುಡಕ್ಕೆ ಕಾಂಗ್ರೆಸ್ಸಿಗರು ಬಂದೇ ಬರುತ್ತಾರೆ ಎನ್ನುವ ಲೆಕ್ಕಾಚಾರ ಶಾಫಿಯದ್ದು. ಬಿಜೆಪಿಯಿಂದ ಈ ಹಿಂದೆ ಅಭ್ಯರ್ಥಿಯಾಗಿದ್ದ ಭಜರಂಗಿ ಪುಂಡ ಚಂದ್ರಶೇಖರ್ ಉಚ್ಚಿಲನೇ ಮತ್ತೆ ಕ್ಯಾಂಡಿಡೇಟ್ ಆಗುವ ಲಕ್ಷಣವಿದೆ. ಆದರೆ ಅದ್ಯಾಕೋ ಬೆಂಗಳೂರು ಮೂಲದ ಸೌಂದರ್ಯ ರಮೇಶ್ ಎಂಬಾಕೆಯ ಹೆಸರೂ ಕೇಳಿಬರುತ್ತಿದೆ. ಈಗಾಗಲೇ ಉಳ್ಳಾಲದ ಮಹಿಳೆ ಸುಷ್ಮಾ ಜನಾರ್ದನ್ ಜಿಪಂ ಅಧ್ಯಕ್ಷೆಯಾಗುವುದು ಬಿಜೆಪಿಯಿಂದ ಮತ್ತೆ ಮಹಿಳಾ ಕ್ಯಾಂಡಿಡೇಟ್ ಕಣಕ್ಕಿಳಿಯುವುದಕ್ಕೆ ತೊಡಕಾಗಿದೆ.

ಇನ್ನು ಜೆಡಿಎಸ್‌ನ ವಿಷ್ಯ. ಮೊನ್ನೆ ಮೊನ್ನೆಯಷ್ಟೇ ಮುಖ್ಯಮಂತ್ರಿ ಕುಮಾರ ಸ್ವಾಮಿ ಉಳ್ಳಾಲದ ಅತ್ತಿಮೋಳ್ ಮನೆಯಲ್ಲಿ ವಾಸ್ತವ್ಯ ಹೂಡಿದ್ದು, ಕುಮಾರಣ್ಣನಿಗೆ ಅಂಟಿಕೊಂಡೇ ಓಡಾಡಿ, ಕೊನೆಗೆ ಪತ್ರಕರ್ತರ ಭೋಜನಕ್ಕೆಂದು ಕೊಟ್ಟ ಬಿಲ್ಲಿನ ಚಿಲ್ಲರೆ ಹಣಕ್ಕೂ ಕೈ ಚಾಚಿದ ಜಿ. ಮೊಹಮ್ಮದ್ ಎಂಬಾತನ ಹೆಸರು ಕೂಡಾ ಕ್ಯಾಂಡಿಡೇಟ್‌ಗಳ ಪಟ್ಟಿಯಲ್ಲಿ ಇದೆ. ಹೈದರ್ ಪರ್ತಿಪ್ಪಾಡಿ, ಫಾರೂಕ್ ಉಳ್ಳಾಲರ ಹೆಸರೂ ಕೇಳಿಬರುತ್ತಿವೆ. ರಾಜ್ಯದಲ್ಲಿ ಭಾವಿ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಮುಸ್ಲಿಂರ ನಿಷ್ಠುರ ಕಟ್ಟಿಕೊಳ್ಳಲು ತಯಾರಿಲ್ಲದ ಜೆಡಿಎಸ್ ಉಳ್ಳಾಲದ ಎರಡನೇ ಬಹುಸಂಖ್ಯಾತ ಬಿಲ್ಲವ ಮತದಾರರ ಪ್ರತಿನಿಧಿ ಗಂಗಾಧರ ಉಳ್ಳಾಲರಿಗೆ ಸೀಟು ಕೊಡುವುದು ಸೂಕ್ತ ಎಂದು ಚಿಂತಿಸುತ್ತಿದೆ. ಉಳ್ಳಾಲದಲ್ಲಿ ಬಿಜೆಪಿಗೆ ಜೆಡಿಎಸ್ ಸ್ಪರ್ಧಿಸಿದರೇನೇ ಸುಲಭ. ಜಾತ್ಯತೀತ ಓಟುಗಳು ಇಬ್ಭಾಗವಾಗಿ ಕಾಂಗ್ರೆಸ್ ಮತ ಬ್ಯಾಂಕ್‌ಗೆ ಕನ್ನ ಕೊರೆದಷ್ಟು ಬಿಜೆಪಿಗೆ ಲಾಭ.



ಕಾಂಗ್ರೆಸ್‌ನಲ್ಲಿ ಕುದುರೆ ವ್ಯಾಪಾರ

ಗೆಲ್ಲುವ ಕುದುರೆ ಕಾಂಗ್ರೆಸ್‌ನಲ್ಲಂತೂ ಟಿಕೆಟ್ ಆಕಾಂಕ್ಷಿಗಳ ದಂಡೇ ಕಾಣಿಸುತ್ತಿದೆ. ಈ ಪೈಕಿ ತಕ್ಷಣಕ್ಕೆ ಕಂಡುಬರುವ ಹೆಸರು ಯು.ಟಿ.ಖಾದರ್‌ನದ್ದು. ಫರೀದರ ಅಧಿಕಾರಾವಧಿಯಲ್ಲಿ ತಂದೆಯ ದೈಹಿಕ ಅಶಕ್ತತೆಯನ್ನೇ ಬಂಡವಾಳ ಮಾಡಿಕೊಂಡು ಅನಧಿಕೃತ ಶಾಸಕನಂತೆ ಮೆರೆದದ್ದು ಯು.ಟಿ. ಖಾದರ್‌ನ ಜಾಣ್ಮೆ. ಯುವ ಕಾಂಗ್ರೆಸ್, ಸೇವಾದಳಗಳ ಮೂಲಕ ಕಾಂಗ್ರೆಸ್ ಪಕ್ಷದಲ್ಲಿ ಸಾಕಷ್ಟು ಜನಪರಿಚಿತರಾದ ಖಾದರ್ ಉಳ್ಳಾಲದಲ್ಲಿ ಶಾಸಕ ಫರೀದರಿಗಿಂತಲೂ ಹೆಚ್ಚು ಪ್ರಚಲಿತರಾಗಿದ್ದವರು. ಈತನ ಅಭ್ಯರ್ಥಿತನಕ್ಕೆ ತಂದೆಯ ಸಿಂಪಥಿಯ ಜೊತೆಗೆ ಜನಾರ್ದನ ಪೂಜಾರಿಯ ಶ್ರೀರಕ್ಷೆಯೂ ಇದೆ. ಖಾದರ್‌ಗೆ ಮಗ್ಗುಲ ಮುಳ್ಳಾಗಿ ಇಲ್ಲಿ ಕಾಣಿಸಿಕೊಂಡಿರುವವರೆಂದರೆ ಶುಂಠಿಕೊಪ್ಪ ಇಬ್ರಾಹಿಂ. 2009ರ ಹೊತ್ತಿಗೆ ಕ್ಷೇತ್ರ ಪುನರ್ ವಿಂಗಡಣೆಯಾಗಿ ವಿಟ್ಲ ಕ್ಷೇತ್ರವೇ ಮಾಯವಾಗುವುದರಿಂದ ಶುಂಠಿಕೊಪ್ಪಗೆ ಉಳ್ಳಾಲದಲ್ಲಿ ಸ್ಥಾನ ಪಡೆಯುವುದು ಅನಿವಾರ್ಯ. ಆದ್ದರಿಂದಲೇ ಏನೇ ಬೆಲೆ ತೆತ್ತಾದರೂ ಸರಿ ಸೀಟು ನನಗೇ ಸಿಗಬೇಕೆಂಬ ಛಲದಲ್ಲಿ ಸೂಟ್‌ಕೇಸ್ ಹಿಡಿದು ದೆಹಲಿಯಲ್ಲಿ ಆಂಟನಿ ಸುತ್ತ ಶುಂಟಿಕೊಪ್ಪ ಅಂಡಲೆಯುತ್ತಿರುವುದು ಉಳ್ಳಾಲದಲ್ಲಿ ಸುದ್ದಿಯಾಗಿದೆ.

ಇದೀಗ ತಾನೇ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷನಾಗಿರುವ ಅಹ್ಮದ್‌ಬಾವ, ಮಂತ್ರಿ ಮುನಿಯಪ್ಪ, ಕೇರಳದ ರಮೇಶ್ ಚೆನ್ನಿತ್ತಾಲ, ವೀರಪ್ಪ ಮೊಯ್ಲಿಯವರ ಒಲವು ಗಿಟ್ಟಿಸಿಕೊಂಡು ನಾನು ಒಬ್ಬ ಕ್ಯಾಂಡಿಡೇಟ್ ಎನ್ನುವ ಕದರಿನಲ್ಲಿ ಓಡಾಡುತ್ತಿದ್ದಾರೆ. ಸಿ.ಎ. ರಹೀಂ ಬ್ಲೇಸಿಯಸ್ ಡಿಸೋಜಾರನ್ನು ಹಿಡಿದು ಸೀಟಿಗಾಗಿ ಪ್ರಯತ್ನಿಸುತ್ತಿದ್ದಾರೆ. ಇನ್ನೋರ್ವ ಟಿಕೆಟ್ ಮಹತ್ವಾಕಾಂಕ್ಷಿ ಕಣಚ್ಚೂರು ಮೋನು ತನ್ನ ಟಿಂಬರ್ ಕನೆಕ್ಷನ್‌ನಿಂದ ಮೂಡಿಗೆರೆ ಮೋಟಮ್ಮ, ಸಗೀರ್ ಅಹ್ಮದ್ ಮೂಲಕ ಕಸರತ್ತಿನಲ್ಲಿ ತೊಡಗಿದ್ದಾರೆ.

ಅದೇ ಹೊತ್ತಿಗೆ ಅಸ್ಸರಣ್ಣ ಉಳ್ಳಾಲದಲ್ಲಿ ಸೀಟು ಗೊಡುವ ಭರವಸೆ ನೀಡಿದ ನಂತರವೇ ಕಾಂಗ್ರೆಸ್‌ಗೆ ಬಂದ ಮುದಿ ರಾಜಕಾರಣಿ ಬಿ.ಎ. ಮೊಹಿಯುದ್ದೀನ್ ಕೂಡಾ ಟಿಕೆಟ್ ಆಕಾಂಕ್ಷಿಗಳ ಪಟ್ಟಿಯಲ್ಲಿದ್ದಾರೆ. ಮನಪಾದ ಉಪ ಮೇಯರ್ ಸಲೀಂ, ಕೋಡಿಬಾಲ್ ಇಬ್ರಾಹಿಂ ಕೂಡ ಆಕಾಂಕ್ಷಿಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದು ಕಾಂಗ್ರೆಸ್‌ನಲ್ಲಿ ಕುದುರೆ ವ್ಯಾಪಾರ ಭರದಲ್ಲಿ ಸಾಗುತ್ತಿದೆ.

-ಪ್ರಕಾಶ್ ಪಿಂಟೋ

ಬಿಜೆಪಿ ಯುವ ಮೋರ್ಚಾ ಭ್ರಷ್ಟರ ಕೈಗೆ

ರಾಜ್ಯ ಬಿಜೆಪಿ ಮುಖಂಡರಾದ ಯಡಿಯೂರಪ್ಪ, ಈಶ್ವರಪ್ಪ ಕಟ್ಟಾನಾಯ್ಡು, ಅಶೋಕ್ ಇತ್ಯಾದಿ ದೇಶಭಕ್ತರೆಲ್ಲಾ ಕರ್ನಾಟಕವನ್ನು ನುಂಗಿ ನೀರು ಕುಡಿಯುತ್ತಿರುವ ವಿದ್ಯಮಾನ ಒಂದು ಕಡೆಯಾದರೆ, ಮತ್ತೊಂದೆಡೆ ಚಾರಿತ್ರಹೀನರು, ಖದೀಮ ಕಳ್ಳರೆಲ್ಲಾ ಈಗ ಬಿಜೆಪಿ ಯುವ ಮೋರ್ಚಾದ ಹೊಸ ಲೀಡರ್‌ಗಳಾಗಿ ಅವತರಿಸಿಬಿಟ್ಟಿದ್ದಾರೆ. ಈ ಯುವ ಮೋರ್ಚಾದವರ ಭೂ ಕಬಳಿಕೆ, ಹಲ್ಕಟ್ ವ್ಯವಹಾರಗಳನ್ನು ನೋಡುತ್ತಿದ್ದರೆ ಯಾರಿಗಾದರೂ ಮೂರ್ಛೆ ಬಂದು ಬೀಳಬೇಕು ಎಂಬಂತಿದೆ.

ನೋ ಎಂಟ್ರಿ ಮಟ್ಟಣ್ಣ

ಬಾಂಬ್ ಎಸ್‌ಐ ಗಿರೀಶ್ ಮಟ್ಟಣ್ಣನವರ್ ಈಗ ಯುವ ಮೋರ್ಚಾದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾನೆ. ಇದಕ್ಕೆ ಮೊದಲು ಚಿಕ್ಕಮಗಳೂರಿನ ಹಿಂದೂ ವೀರ, ಅಪ್ರತಿಮ ದೇಶಭಕ್ತ ಶಾಸಕ ಸಿ.ಟಿ. ರವಿ ಯುವ ಮೋರ್ಚಾ ನಾಯಕನಾಗಿದ್ದ. ಈ ರವಿ ಶಾಸಕನಾದ ಮೇಲೆ ಹಿಂದೂ ಧರ್ಮೋದ್ಧಾರದ ರೀಲು ಬಿಡುವುದನ್ನು ಬಿಟ್ಟು ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ದಂಧೆ ಶುರುವಿಟ್ಟುಕೊಂಡಿದ್ದ. ಸಕ್ರಮ, ಅಕ್ರಮ ಹೀಗೆ ಸಿಕ್ಕ ಭೂಮಿಯನ್ನೆಲ್ಲಾ ಗುಳುಂ ಮಾಡಿ ದುಡ್ಡು ಮಾಡುವುದರಲ್ಲಿ ಹೊಸ ವಿಕ್ರಮ ಸ್ಥಾಪಿಸಿಬಿಟ್ಟ. ಈ ರವಿ ದೇವನಹಳ್ಳಿಯ ಬೊಮ್ಮವಾರದಲ್ಲಿ ಅನಾಮತ್ತು 100 ಎಕರೆ ಸರ್ಕಾರಿ ಜಮೀನು ಕದ್ದು ಬೇಲಿ ಹಾಕಿಕೊಂಡಿದ್ದಾನೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಯುವ ಮೋರ್ಚಾ ಅಧ್ಯಕ್ಷ ದೇವನಹಳ್ಳಿ ನಾಗೇಶ್ ಎಂಬ ಇನ್ನೊಬ್ಬ ಖದೀಮನ ಕೈವಾಡವೂ ಇದರಲ್ಲಿದೆ.




ಈ ಬೊಮ್ಮವಾರ ಭೂ ಕಬಳಿಕೆ ಬಗ್ಗೆ ಬರೆಯಬೇಕೆಂದರೆ ಅದೇ ಇನ್ನೊಂದು ಭಾರೀ ಹಗರಣವಾಗಲಿವೆ. ಅದಿರಲಿ, ಸಿ.ಟಿ. ರವಿ ಅವಧಿ ಮುಗಿದನಂತರ ಈಗ ಯುವ ಮೋರ್ಚಾಗೆ ಗಿರೀಶ್ ಮಟ್ಟಣ್ಣನವರ್ ಅಧ್ಯಕ್ಷನಾಗಿದ್ದಾನೆ. ಈ ಪೆದ್ದು ಬಾಲಕ ಶಾಸಕರ ಭವನದಲ್ಲಿ ಪಟಾಕಿ ಹಚ್ಚಲು ಹೋಗಿ ಅದು ಠುಸ್ ಎಂದಿತ್ತಲ್ಲ, ಅವತ್ತೇ ಬೆಂಗಳೂರಿನ ಗಲ್ಲಿಗಳಲ್ಲಿ ವರ್ಲ್ಡ್ ಫೇಮಸ್ ಆಗಿದ್ದ ಮಟ್ಟಣ್ಣ ಕೆಲಸ ಕಳೆದುಕೊಂಡು ಉಪ್ಪಿನಕಾಯಿ ಮಾರಲು ಶುರುಮಾಡಿದ್ದ.

ಅದೇ ಗಿರೀಶ್ ಮಟ್ಟಣ್ಣ ಈಗ ಕೋಟ್ಯಂತರ ರೂಪಾಯಿಗಳ ವ್ಯವಹಾರ ನಡೆಸುತ್ತಿರುವ ನಂದಿ ಕನ್‌ಸ್ಟ್ರಕ್ಷನ್ ಕಂಪನಿಯ ಪಾರ್ಟನರ್ ಆಗಿ ಬಿಟ್ಟಿದ್ದಾನೆ. ಈ ನಂದಿ ಕಂಪನಿ ವ್ಯವಹಾರದೊಳಗೆ ಯಡಿಯೂರಪ್ಪನ ಕಿಲಾಡಿ ಮಗ ವಿಜಯೇಂದ್ರ, ನಂದೀಶ್ ರೆಡ್ಡಿ ಪಾಲುದಾರರಾಗಿದ್ದಾರೆ. ಬಹುಶಃ ಬಾಂಬ್ ಬಾಲಕ ಗಿರೀಶ್ ಇವರಿಬ್ಬರ ಆಸ್ತಿ ವಹಿವಾಟುಗಳ ಕಾವಲುಗಾರನಿರಬೇಕು. ಈ ಗಿರೀಶನ ತಮಾಷೆ ಏನೆಂದರೆ ರಾಜ್ಯ ಬಿಜೆಪಿ ಯುವ ಮೋರ್ಚಾದ ಅಧ್ಯಕ್ಷನಾಗಿದ್ದರೂ ಸಹ, ಬಿಜೆಪಿ ಅಧಿಕಾರದಲ್ಲಿದ್ದಾಗಲೂ ಸಹ ಅವನು ವಿಧಾನಸೌಧ, ಶಾಸಕರ ಭವನದೊಳಕ್ಕೆ ಕಾಲಿಡುವಂತಿಲ್ಲ, ಪಟಾಕಿ ಕೇಸಿದೆಯಲ್ಲ, ಆ ಕಾರಣಕ್ಕೆ. ಬೆಂಗಳೂರಿನ ಆರ್‌ಪಿಸಿ ಲೇಔಟಿನಲ್ಲಿ ಭರ್ಜರಿ ಮನೆ ಖರೀದಿಸಿರುವ ಗಿರೀಶ್ ಮಟ್ಟಣ್ಣ ಅಷ್ಟು ದುಡ್ಡು ಹೇಗೆ ಒಟ್ಟು ಮಾಡಿದ ಎಂಬ ಗುಟ್ಟು ರಟ್ಟು ಮಾಡುವವರ್‍ಯಾರು?


ನಾಗೇಶ್


ಹರೀಶ್



ಶ್ರೀನಿವಾಸ

ಹಿಂಬಾಲಕರಿಲ್ಲದ ನಾಯಕ ಹರೀಶ

ಬೃಹತ್ ಬೆಂಗಳೂರು ನಗರ ಬಿಜೆಪಿಯ ಅಧ್ಯಕ್ಷನಾಗಿರುವ ಹರೀಶನದ್ದು ಇನ್ನೊಂದು ಕತೆ. ಇವನು ಹೆಸರಿಗೆ ನಾಯಕ. ಆದರೆ ಹಿಂಬಾಲಕರೇ ಇಲ್ಲ, ಸಂಸದ ಅನಂತ್ ಕುಮಾರ್ ಎಂಪಿ ಫಂಡಿನಿಂದ ಮಂಜೂರು ಮಾಡುತ್ತಿದ್ದ ಕಾಮಗಾರಿಗಳ ಕಾಂಟ್ರಾಕ್ಟ್ ಮಾಡಿಮಾಡಿಯೇ ದುಂಡಗಾಗಿದ್ದಾನೆ. ಬಿಜೆಪಿಯ ಬ್ಯಾನರ್-ಪೋಸ್ಟರ್ ಸಪ್ಲೆಯರ್ ಸುಬ್ಬಣ್ಣನ ಬೆಂಬಲವಿರುವ ಹರೀಶ್ ನೇರ ನಡವಳಿಕೆಯ ಮನುಷ್ಯ. ಸಿ.ಟಿ. ರವಿ, ಗಿರೀಶ್ ಮಟ್ಟಣ್ಣನಂತೆ ಹಿಂದೂ ಧರ್ಮ, ದೇಶೋದ್ಧಾರದ ಯಾವ ನಾಟಕವನ್ನು ಆಡದೆ ದುಡ್ಡು ಹೊಡೆಯುವ ಒಂದೇ ಗುರಿ ಇಟ್ಟುಕೊಂಡಿರುವ ಬಿಜೆಪಿಯ ಉದಯೋನ್ಮುಖ ನಾಯಕನೀತ. ಮುಂದೆ ನಾಗಪ್ಪ ವಾರ್ಡಿನಿಂದ ಕಾರ್ಪೊರೇಷನ್ನಿಗೆ ಸ್ಪರ್ಧಿಸಲು ರೆಡಿಯಾಗುತ್ತಿದ್ದಾನೆ. ಕಂತೆಗೆ ತಕ್ಕ ಬೊಂತೆ ಎಂಬಂತೆ ಹರೀಶನ ಜೊತೆಗೆ ಪ್ರಧಾನ ಕಾರ್ಯದರ್ಶಿಯಾಗಿ ಗಣೇಶ ನೇಮಕ ಆಗಿದ್ದಾನೆ. ಇವನು ಹರೀಶನ ತರ ಸಿಂಗಲ್ ಬಾಡಿ ಲೀಡರ್. ಅಂದರೆ ಹಿಂದಿಲ್ಲ, ಮುಂದಿಲ್ಲ, ಹಿಂಬಾಲಕರಿಲ್ಲದ ಲೀಡರ್ ಇವನು. ಸಂಸದ ಬಸವರಾಜ ಪಾಟೀಲ್ ಯತ್ನಾಳರ ಹೆಸರೇಳಿಕೊಂಡು ಅಂಡಲೆಯುತ್ತಿರುತ್ತಾನೆ. ಹೆಸರಿಗೆ ಒಂದು ಪ್ರೆಸ್ ಏನೋ ಇದೆ. ಈ ಗಣೇಶನ ಬಗ್ಗೆ ಬಿಜೆಪಿಯೊಳಗೇ ಒಂದು ಸಪರೇಟಾದ ಗಾದೆ ಮಾತೇ ಇದೆ: "ಸ್ಮಶಾನಕ್ಕೆ ಹೋದ ಹೆಣ, ಗಣೇಶನ ಕೈಗೆ ಹೋದ ಹಣ ಎರಡೂ ವಾಪಸ್ ಬರಲ್ಲ" ಅನ್ನೋ ಮಾತದು. ಗಣೇಶನಿಗೆ ಓ ಅಂದರೆ ಠೋ ಅನ್ನಕ್ಕೆ ಬರಲ್ಲ, ಅನ್ನೋದು ಇಡೀ ಬಿಜೆಪಿಗೆ ಗೊತ್ತಿದ್ದರೂ ಅವನೀಗ ಯುವ ಮೋರ್ಚಾ ನಾಯಕ.

ನಗರ ಜಿಲ್ಲೆ ಭೂಗಳ್ಳರು

ಬೆಂಗಳೂರು ನಗರ ಜಿಲ್ಲೆಯ ಯುವ ಮೋರ್ಚಾ ನಾಯಕತ್ವ ಈಗ ಅಷ್ಟೇನು ಯುವಕನಲ್ಲದ ಎಲ್. ಶ್ರೀನಿವಾಸ್ ಕೈಗೆ ಹೋಗಿದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಬಿದ್ದ ಭಾರಿ ಮಳೆಯ ಅನಾಹುತಗಳ ಖುದ್ದು ಪರಿಶೀಲನೆಗೆ ಮುಖ್ಯಮಂತ್ರಿ ಕುಮಾರಸ್ವಾಮಿಯೇ ಹೋಗಿದ್ದರಲ್ಲ, ಅವತ್ತು ಅಲ್ಲಿ ಸೇರಿದ್ದ ಎರಡು ಸಾವಿರದಷ್ಟು ಜನ ತಿರುಗಿಬಿದ್ದು ಗಲಾಟೆ ಮಾಡಿಬಿಟ್ಟರು. ಸ್ಥಳದಲ್ಲಿದ್ದ ಸಚಿವ ಅಶೋಕ್ 'ನಿಮ್ಮನ್ನೆಲ್ಲಾ ಜೈಲಿಗೆ ಹಾಕುಸ್ತೀನಿ' ಅಂತಾ ಬೆದರಿಸಿದರೂ ಜನ ಲೆಕ್ಕಿಸದೆ ಗಲಾಟೆ ಮಾಡಲು ಈ ಎಲ್. ಶ್ರೀನಿವಾಸನೇ ಕಾರಣ. ಕಣ್ಣಿಗೆ ಕಾಣುವ ಯಾವ ಸರ್ಕಾರಿ ಜಮೀನನ್ನು ಬಿಡದೆ ಬೇಲಿ ಸುತ್ತಿ ಸೈಟು ಮಾಡಿ ಮಾರುವ ಶ್ರೀನಿವಾಸ ಓರ್ವ ಪ್ರತಿಭಾವಂತ ಭೂಗಳ್ಳ. ಇವನು ಈಗಾಗಲೇ ಚಿಕ್ಕಲ್‌ಸಂದ್ರದ ಸರ್ಕಾರಿ ಕೆರೆ ಜಾಗವನ್ನು ನುಂಗಿ ನೀರನ್ನೆಲ್ಲಾ ಕುಡಿದು ಸೈಟು ಮಾಡಿ ಮಾರಿಕೊಂಡಿದ್ದಾನೆ. ಅಲ್ಲೇ ಇನ್ನೊಂದು ಸರ್ಕಾರಿ ಜಾಗ ತನ್ನದೆಂದು ಹೇಳಿಕೊಂಡು ವಿಜಯಾನಂದ, ದುರ್ಗಾ ಟ್ರಾವೆಲ್ಸ್‌ನವರ ಬಸ್‌ಗಳನ್ನು ನಿಲ್ಲಿಸಲು ಜಾಗ ನೀಡಿ ತಿಂಗಳಿಗೆ 70 ಸಾವಿರ ಬಾಡಿಗೆ ಎಣಿಸಿಕೊಳ್ಳುತ್ತಿದ್ದಾನೆ. ಈಗ್ಗೆ ಹನ್ನೆರಡು ವರ್ಷಗಳ ಹಿಂದೆ ಬರೀ ಹಾಲು ಮಾರಿಕೊಂಡು ಸೈಕಲ್‌ನಲ್ಲಿ ಓಡಾಡಿಕೊಂಡಿದ್ದ ಶ್ರೀನಿವಾಸನಿಗೆ ಒಮ್ಮೆ ದೇಶಭಕ್ತಿ ಉಕ್ಕೇರಿ ಬಂದು ಯಾವಾಗ ಬಿಜೆಪಿ ಸೇರಿಕೊಂಡನೊ ಈಗ 20 ಕೋಟಿ ಕುಳ ಆಗಿದ್ದಾನೆ. ಇವನ ಅಣ್ಣ ಆಂಜಿ ಹಾಲು ವ್ಯಾಪಾರ ಬಿಟ್ಟು ಇಪ್ಪತ್ನಾಲ್ಕು ಗಂಟೆಯೂ ಆಲ್ಕೋಹಾಲು ಅಮಲಿನಲ್ಲಿರುತ್ತಾನೆ. 1999 ರಲ್ಲಿ ಶ್ರೀನಿವಾಸ ಕೌನ್ಸಿಲರ್ ಆದೇಟಿಗೆ ಇಡೀ ಫ್ಯಾಮಿಲಿಯೇ ಗೆಟಪ್ ಆಗಿ ಹೋಯಿತು. ಬರೀ ಪದ್ಮನಾಭನಗರವೊಂದರಲ್ಲೇ ಇವನಿಗೆ ಐದು ಬಂಗಲೆಗಳಿವೆ.


ಮಟ್ಟಣ್ಣ

ಇವನಿಗೆ ಪಾರ್ಕ್ ಸೂರಿ ಅಂತಾ ಇನ್ನೊಬ್ಬ ಚೇಲಾ ಇದ್ದಾನೆ. ಇತ್ತೀಚಿನವರೆಗೂ ಆಟೋ ಓಡಿಸುತ್ತಿದ್ದ ಸೂರಿಗೆ ತನ್ನ ಬರ್ತಡೇಯನ್ನು ತಾನೇ.... ತಾನೊಬ್ಬನೇ ಸೆಲಬ್ರೇಟ್ ಮಾಡಿಕೊಳ್ಳುವ ಚಟವೂ ಇದೆ. ಹೆಸರಿಗೆ ಬಿಜೆಪಿ ಯುವ ಮೋರ್ಚಾ ಅಂತಾ ಹೇಳಿಕೊಳ್ಳುತ್ತಾನಾದರೂ ನಕಲಿ castrol oil ತಯಾರಿಕೆಯೇ ಇವನ ಅಸಲಿ ದಂಧೆ. ತಮಿಳುನಾಡಿನಿಂದ ನಕಲಿ ಸರಕು ತರಿಸಿ ಬೆಂಗಳೂರು ಸುತ್ತಾಮುತ್ತಾ oil ಸಪ್ಲೈ ಕೊಡುತ್ತಾನೆ. ಈ ಅಕ್ರಮ ದಂಧೆಯ ಲೇಬಲ್‌ಗಳೆಲ್ಲಾ ಕದಿರೇನಹಳ್ಳಿಯ ವಿಕಾಸ್ ಎಂಟರ್‌ಪ್ರೈಸಸ್‌ನ ಪ್ರೆಸ್‌ನಲ್ಲಿ ಪ್ರಿಂಟಾಗುತ್ತಿವೆ. ಪೊಲೀಸರೊಮ್ಮೆ ಇಣುಕಿ ನೋಡಿದರೆ ಇವನದ್ದು ಒಂದು ಒಳ್ಳೇ ಕ್ರಿಮಿನಲ್ ಕೇಸಾಗಬಲ್ಲದು.

ಇವನೇ ಕಾಮಾಕ್ಯ ಟಾಕೀಸ್ ಎದುರಿರುವ ನಾಲ್ಕು ಎಕರೆ ಸರ್ಕಾರಿ ಜಾಗ ನುಂಗಲು ಯತ್ನಿಸುತ್ತಿದ್ದಾಗ ಪತ್ರಿಸುತ್ತಿದ್ದ ಒಬ್ಬ ಪತ್ರಕರ್ತನಿಗೆ, ಇನ್ನೊಬ್ಬ ಮಾಫಿಯಾ ಡಾನ್‌ಗೆ ಸ್ವಲ್ಪ ಜಮೀನು ಬಿಟ್ಟುಕೊಡುವುದಾಗಿಯೂ ಆಸೆ ತೋರಿಸಿದ್ದ.

ಇಂಥ ಘನಕಾರ್ಯಗಳ ಸರದಾರನನ್ನು ಸನ್ಮಾನ್ಯ ಸದಾನಂದ ಗೌಡರು ಯುವ ಮೋರ್ಚಾ ಎಂಬ ಮೋರಿಯೊಳಗೆ ತಂದು ಪ್ರತಿಷ್ಠಾಪಿಸಿದ್ದಾರೆ. ಕೊಳೆತು ಗಬ್ಬು ನಾರುತ್ತಿರುವ ಈ ಪಾರ್ಕ್ ಸೂರಿ ಈಗ ಬೆಂಗಳೂರಿನ ಬಿಜೆಪಿ ಯುವ ಮುಖಂಡರಲ್ಲೊಬ್ಬ.

ನಾಗೇಶನ ನಾನಾ ವೇಶ

ಬೆಂಗಳೂರು ಗ್ರಾಮಾಂತರ ಜಿಲ್ಲಾಧ್ಯಕ್ಷ ನಾಗೇಶ್ ಮೊದಲಿಗೆ ಬಿದಿರು ಬುಟ್ಟಿ ಹೆಣೆದು ಮಾರುತ್ತಾ ಶ್ರಮಜೀವಿಯಾಗಿದ್ದ. ಆದರೆ ಯಾವತ್ತೂ ಕುಳಿತು ಉಣ್ಣುವ ಪುರೋಹಿತರ ಪಕ್ಷ ಸೇರಿದನೋ ಅವತ್ತಿನಿಂದಲೇ ರಾಕ್ಷಸನಾಗಿ ಬದಲಾಗಿಬಿಟ್ಟ. ಅಲ್ಪಸ್ವಲ್ಪ ಪುಢಾರಿಗಿರಿ ಮಾಡಿಕೊಂಡು ದೇವನಹಳ್ಳಿಯ ವಾರ್ಡ್ ನಂಬರ್ 13 ರಿಂದ ಗೆದ್ದು ಒಮ್ಮೆ ಪುರಸಭೆ ಕೌನ್ಸಿಲರ್ ಆದ ನೋಡಿ ನಾಗೇಶ ಹೆಡೆಬಿಚ್ಚಿ ಕುಂತ. ಕಾಂಗ್ರೆಸ್ ಕ್ಯಾಂಡಿಡೇಟ್‌ನನ್ನೇ ಕಿಡ್‌ನ್ಯಾಪ್ ಮಾಡಿಸಿ ಎಲೆಕ್ಷನ್ ಗೆದ್ದಿದ್ದ ನಾಗೇಶ್ ತನ್ನನ್ನು ಬೆಳೆಸಿದ್ದ ನಾರಾಯಣಗೌಡರಿಗೂ ಕೈಕೊಟ್ಟು ವಂಚಿಸಿದ್ದ. ಈಗ ಅರವಿಂದ ಲಿಂಬಾವಳಿ ಶಿಷ್ಯನಂತೆ ಓಡಾಡುತ್ತಿದ್ದಾನೆ.

ಈ ನಾಗೇಶ್ ಹುಟ್ಟಾ ಬಾಯಿಬಡುಕ. ಜನಾರ್ದನ ರೆಡ್ಡಿ, ಸಿ.ಟಿ. ರವಿಗೆಲ್ಲಾ ದೇವನಹಳ್ಳೀಲಿ ನಾನೇ ಜಮೀನು ಕೊಡಿಸಿದ್ದು. ಈಗ ಲಿಂಬಾವಳಿಗೂ ನಾಲ್ಕು ಎಕರೆ ಅಡ್ಜಸ್ಟ್ ಮಾಡಿಸಿದ್ದೀನಿ ಎಂದೆಲ್ಲಾ ಪ್ರಚಾರ ಮಾಡಿಕೊಂಡು ತಿರುಗುತ್ತಿರುತ್ತಾನೆ. 'ಲಿಂಬಾವಳಿಗೆ 20 ಕೋಟಿ ರೂ. ಲಾಭ ಮಾಡಿಕೊಟ್ಟೆ' ಎಂಬ ನಾಗೇಶನ ಡೈಲಾಗ್ ನಿತ್ಯ ಸೂರ್ಯೋದಯವಾಗುವಷ್ಟೇ ಗ್ಯಾರಂಟಿ. ಇತ್ತೀಚಿನವರೆಗೂ ಬುಟ್ಟಿ ಹೆಣೆಯುತ್ತಿದ್ದ ಅರೆ ಬಡತನದಿಂದ ಬಂದಿರುವ ನಾಗೇಶ್ ಈಗ 100 ಕೋಟಿಗೆ ತೂಗುತ್ತಾನೆ.

ಯುವ ಮೋರ್ಚಾದ ಹೊಸ ಪದಾಧಿಕಾರಿಗಳ ನೇಮಕ ಆಗಿ 3 ತಿಂಗಳಾಗಿದೆ. ಇತ್ತೀಚೆಗೆ ಯುವ ಮೋರ್ಚಾದ ಪರಾಕ್ರಮಿ ನಾಯಕ ನಾಗೇಶ್ ಯುವ ಮೋರ್ಚಾ ಸಮ್ಮೇಳನ ಮಾಡಬೇಕೆಂದು 1 ಕೋಟಿಗೂ ಹೆಚ್ಚು ಸಂಗ್ರಹಿಸಿ ಮೊಸಳೆ ನುಂಗುವಂತೆ ನುಂಗಿ ಬಿಟ್ಟಿದ್ದಾನೆ.

ಇವರೊಂದಿಗೆ ರಾಜ್ಯ ಉಪಾಧ್ಯಕ್ಷರಾಗಿ ಮೋಹನ್ ಶೆಟ್ಟಿ, ರಾಬೀನ್ ದೇವಯ್ಯ, ಶಿವರಾಜ್ ಇನ್ನು ಮುಂತಾದವರೂ ಯುವ ಮೋರ್ಚಾ ಪದಾಧಿಕಾರಿಗಳಾಗಿದ್ದಾರೆ.

ಈ ಯುವ ನಾಯಕರ ಹಿನ್ನೆಲೆ, ಸಾಹಸಗಳನ್ನೆಲ್ಲಾ ಕೇಳುತ್ತಿದ್ದರೆ ಮುಂದೆ ಬಿಜೆಪಿ ನಾಶ ಮಾಡಲು ಇವರೇ ಸಾಕು ಎನಿಸುವಂತಿದೆ.

-ವರದಿಗಾರ



MTR-ಲಾಕ್‌ಔಟ್

ಅನ್ನ ನೀಡಿದ ಕಾರ್ಮಿಕರು ಅರೆಹೊಟ್ಟೆಯಿಂದ ಬೀದಿಗೆ

ಹೌದು. ತಮ್ಮ ಬೆವರು ರಕ್ತ ಹರಿಸಿ ಉತ್ಕೃಷ್ಟ ದರ್ಜೆಯ ಆಹಾರ ಪದಾರ್ಥಗಳನ್ನು ಉತ್ಪಾದಿಸಿಕೊಟ್ಟಿದ್ದ MTR ಕಂಪೆನಿಯ ಕಾರ್ಮಿಕರು ಇಂದು ಅರೆಹೊಟ್ಟೆಯಿಂದ ಬೀದಿಗೆ ಬಂದಿದ್ದಾರೆ. ಮೊನ್ನೆ ಮೇ 4 ರಂದು MTR ಕಂಪನಿಯ ಆಡಳಿತ ಮಂಡಳಿ ಕಾರ್ಮಿಕರಿಗೆ ಯಾವ ಮುನ್ಸೂಚನೆಯನ್ನೂ ನೀಡದೆ ಕಾನೂನುಬಾಹಿರವಾಗಿ ಕಂಪೆನಿಯನ್ನು ಮುಚ್ಚಿ ಹಾಕಿದೆ. ಅಷ್ಟೇ ಅಲ್ಲದೆ, ಸುಮಾರು 24 ಗಂಟೆಗಳ ಕಾಲ ಕಾರ್ಮಿಕರನ್ನು ಫ್ಯಾಕ್ಟರಿಯ ಒಳಗೆ ಕೂಡಿ ಹಾಕಿ ಅನ್ನ, ನೀರು ಹೊದಿಗೆ-ಏನನ್ನೂ ಕೊಡದೆ ಸತಾಯಿಸುವ ಮೂಲಕ ಕಂಪೆನಿಯನ್ನು ತಮ್ಮ ಬೆವರು ಹರಿಸಿ ಕಟ್ಟಿ ಬೆಳೆಸಿದ ಕಾರ್ಮಿಕರಿಗೆ ಮರೆಯಲಾಗದ ಉಡುಗೊರೆಯನ್ನು ನೀಡಿದೆ! ಬೊಮ್ಮಸಂದ್ರದಲ್ಲಿರುವ ಆಹಾರ ಉತ್ಪಾದನಾ ಕಾರ್ಖಾನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 900 ಕಾರ್ಮಿಕರನ್ನು ಒಳಗೊಂಡಂತೆ ದೇಶಾದ್ಯಂತ ಇರುವ ಸುಮಾರು 5000 ಕಾರ್ಮಿಕರು ಇದರಿಂದಾಗಿ ಬೀದಿಗೆ ಬಂದಂತಾಗಿದೆ.

1924 ರಲ್ಲಿ ಒಂದು ಸಣ್ಣ ದೋಸೆ ಕ್ಯಾಂಪ್ ಆಗಿ ಉದಯಿಸಿದ MTR 1991 ರಲ್ಲಿ ತನ್ನದೇ ಆದ ಫ್ಯಾಕ್ಟರಿಯನ್ನು ಪ್ರಾರಂಭಿಸಿತು. ನಂತರ 1996 ರಲ್ಲಿ MTR ಫುಡ್ಸ್ ಲಿಮಿಟೆಡ್ ಕಂಪೆನಿಯಾಗಿ ಪರಿವರ್ತನೆಗೊಂಡು, ಉತ್ಕೃಷ್ಟ ದರ್ಜೆಯ ಆಹಾರೋತ್ಪನ್ನಗಳನ್ನು ತಯಾರಿಸಲಾರಂಭಿಸಿತು. ಕೆಲವು ನೂರು ರೂಪಾಯಿಗಳಲ್ಲಿ ಪ್ರಾರಂಭವಾದ ಹೋಟೆಲ್ ಇಂದು 450 ರೂ. ಕೋಟಿ ಬಂಡವಾಳದ ಬೃಹತ್ ಕಂಪೆನಿಯಾಗಿ ಬೆಳೆದು ನಿಂತಿತು. ಬೊಮ್ಮಸಂದ್ರದಲ್ಲಿರುವ ಕಾರ್ಖಾನೆಯಲ್ಲಿ ಇಂದು 12 ಡಿವಿಜನ್‌ಗಳಿವೆ. MTR-Ready to eat, ಸಾಂಬಾರ್ ಪುಡಿ, ಐಸ್‌ಕ್ರೀಮ್, ಶಾವಿಗೆ, ಪ್ರಿಂಟಿಂಗ್, ಉಪ್ಪಿನಕಾಯಿ-ಹೀಗೆ ಒಂದೊಂದು ಪದಾರ್ಥಕ್ಕೆ ಒಂದೊಂದು ಡಿವಿಜನ್. ಇವೆಲ್ಲದರ ಕಾರ್ಯದಕ್ಷತೆಯೂ ತುಂಬಾ ಹೆಚ್ಚಿದೆ. ಇದರ ಉತ್ಪನ್ನಗಳು ಭಾರತದ ಸೈನ್ಯಕ್ಕೂ, ವಿದೇಶಕ್ಕೂ ಕಳಿಸಲ್ಪಡುವುದರಿಂದ ಭಾರಿ ಬೇಡಿಕೆ ಇದೆ. ಇದರ ಯಶಸ್ಸನ್ನು ಕಂಡು ಭಾರ್ಗವ ಪ್ರಶಸ್ತಿ, 'ಆಹಾರ ಚಕ್ರವರ್ತಿ' ಪ್ರಶಸ್ತಿ ಮುಂತಾದ ಪುರಸ್ಕಾರಗಳೂ ದೊರೆತಿವೆ. MTR ಯಶಸ್ವಿಯಾಗಿ ಮುನ್ನಡೆಯುತ್ತಿರುವುದನ್ನು ಕಂಡು ನಾರ್ವೆಯ ಒರ್ಕ್ಲಾಎಂಬ ಕಂಪನಿ MTR ನ್ನು ಖರೀದಿಸಿಯೇ ಬಿಟ್ಟಿತು.

ಕಂಪೆನಿ ಕಟ್ಟಿದ ಕಾರ್ಮಿಕರ ಬವಣೆ

MTR ನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಕಟ್ಟಿ ಬೆಳೆಸಿದುದರಲ್ಲಿ ಅಲ್ಲಿನ ಕಾರ್ಮಿಕರ ರಕ್ತ-ಬೆವರು ಅಡಗಿದೆ. ಅವರು ಎರಡೂವರೆ ವರ್ಷಗಳ ಹಿಂದೆ ತಮ್ಮದೇ ಯೂನಿಯನ್ ಮಾಡಿಕೊಂಡು ಸಂಘಟಿತರಾಗುವ ಮೊದಲು ಅವರ ಕಷ್ಟ ಹೇಳತೀರದು. ಅಷ್ಟು ವರ್ಷಗಳ ಕಾಲ ಅವರು ಪಡೆದ ಅತೀ ಹೆಚ್ಚಿನ ಇನ್‌ಕ್ರಿಮೆಂಟ್ ಎಂದರೆ 175 ರೂಪಾಯಿಗಳು ಮಾತ್ರ! ಒಂದು ವರ್ಷದಿಂದ ಹಿಡಿದು 20 ವರ್ಷ ಸರ್ವೀಸ್ ಆಗಿರುವವರೆಲ್ಲರ ಮೂಲ ವೇತನ ಒಂದೇ, ಅದೂ 1109 ರೂಪಾಯಿಗಳು ಮಾತ್ರ!! ಕಾರ್ಮಿಕರಿಗೆ ನ್ಯಾಯಯುತವಾಗಿ ಸಿಗಬೇಕಿದ್ದ ಯಾವ ಸೌಕರ್ಯಗಳನ್ನೂ ಕೊಡದೆ ದನಗಳಂತೆ ದುಡಿಸಿಕೊಳ್ಳಲಾಯ್ತು. ಕಂಪೆನಿಯ ವ್ಯವಸ್ಥಾಪಕ ನಿರ್ದೇಶಕನಾಗಿರುವ ಉಡುಪಿ-ಕುಂದಾಪುರ ಮೂಲದ ಪಿ. ಸದಾನಂದಮಯ್ಯ ಜಾತಿಯಾಧಾರಿತ ತಾರತಮ್ಯದಿಂದ ಬಂದವನು; ವೇತನ ನೀಡುವಾಗ 'ವೈಯಕ್ತಿಕ ವೇತನ' ಎಂಬ ಹೊಸ ಕಾಲಂನ್ನೇ ಸೃಷ್ಟಿಸಿಕೊಂಡು ತನಗೆ ಬೇಕಾದವರಿಗೆ ಮಾತ್ರ ಅದನ್ನು ನೀಡುತ್ತಾ ಕಾರ್ಮಿಕರನ್ನು ಹತೋಟಿಯಲ್ಲಿಟ್ಟುಕೊಂಡ ನಿಸ್ಸೀಮ. ಇದಕ್ಕೂ ಹೀನಾಯವಾದದ್ದೆಂದರೆ ಉತ್ಕೃಷ್ಟ ದರ್ಜೆಯ ಆಹಾರ ಉತ್ಪಾದಿಸುವ ಕಾರ್ಮಿಕರಿಗೆ ಕನಿಷ್ಠ ದರ್ಜೆಯ, ತಿನ್ನಲು ಅಯೋಗ್ಯವಾದ ಆಹಾರ ನೀಡಿದ್ದು. ರಫ್ತಾಗಿದ್ದ ಆಹಾರ ಪೊಟ್ಟಣಗಳು ತಿರಸ್ಕೃತಗೊಂಡು ವಾಪಾಸ್ಸಾದಾಗ, ಅವಧಿ ಮುಗಿದ ಪೊಟ್ಟಣಗಳು ಮರಳಿ ಬಂದಾಗ, ಅಂತಹ ಹುಳು ಹಿಡಿದ ಆಹಾರವನ್ನೇ ಈತ ಕಾರ್ಮಿಕರಿಗೆ ತಿನ್ನಿಸುತ್ತಿದ್ದ!


ಸದಾನಂದ ಮಯ್ಯ


ಕಂಪೆನಿಯಲ್ಲಿ ಕೆಲಸ ಮಾಡುವ ಕಾರ್ಮಿಕರಲ್ಲಿ ಬಹುತೇಕರು ಅನಕ್ಷರಸ್ಥರು ಅಥವಾ ಅಲ್ಪಸ್ವಲ್ಪ ಓದಿಕೊಂಡವರು. ಅವರು ತಮ್ಮ ಮೇಲಿನ ದೌರ್ಜನ್ಯ ಶೋಷಣೆಗಳನ್ನು ಎಂದೂ ಪ್ರತಿಭಟಿಸಿದವರಲ್ಲ, ಏನೋ ಒಂದು ಕೆಲಸ ಅಂತ ಇದೆಯಲ್ಲಾ ಎಂದು ದನಗಳಂತೆ ದುಡಿದವರು. ಇವರ ಅಜ್ಞಾನ, ಅನಕ್ಷರತೆ ಹಾಗೂ ಮುಗ್ಧತೆಯನ್ನು ಚೆನ್ನಾಗಿ ಬಳಸಿಕೊಂಡ ಸದಾನಂದಮಯ್ಯ ಕಾರ್ಮಿಕರನ್ನು ಹಿಂಡಿ ಹಿಪ್ಪೆ ಮಾಡಿದ. ಯಾವಾಗ ಕಂಪೆನಿಯೊಳಗೆ ಹೊಸ ಯುವಕರು ಕಾರ್ಮಿಕರಾಗಿ ಬಂದರೋ ಸದಾನಂದ ಮಯ್ಯನ ಶೋಷಣೆಯನ್ನು ಪ್ರಶ್ನಿಸತೊಡಗಿದರು. ಎರಡೂವರೆ ವರ್ಷಗಳ ಹಿಂದೆ ಯೂನಿಯನ್ ಕೂಡ ಕಟ್ಟಿಕೊಂಡರು. ಹಲವಾರು ಬಾರಿ ಆಡಳಿತ ಮಂಡಳಿಯೊಂದಿಗೆ ಚರ್ಚಿಸಿ ಕೊನೆಗೆ ಒಂದು ವೇತನ ಒಪ್ಪಂದವನ್ನು ಮಾಡಿಕೊಂಡರು. ಅದರ ಅವಧಿ ಇನ್ನೂ ಮುಗಿಯದಿರುವಾಗಲೇ ಈಗ ಕಂಪೆನಿಯನ್ನು ಲಾಕ್‌ಔಟ್ ಎಂದು ಘೋಷಣೆ ಮಾಡಲಾಗಿದೆ.

ನೋಟೀಸು ನೀಡದ ಆಡಳಿತಮಂಡಳಿ

ಯಾವುದೇ ಕಂಪೆನಿಯನ್ನು ಲಾಕ್‌ಔಟ್ ಮಾಡುವಾಗ 1948 ರ ಕೈಗಾರಿಕೆಗಳ ವಿವಾದ ಕಾಯಿದೆಯ ಪ್ರಕಾರ ಮುಂಚಿತವಾಗಿ ಕಾರ್ಮಿಕರಿಗೆ ನೋಟೀಸ್ ನೀಡಬೇಕು. ಆದರೆ MTR ನ್ನು ಲಾಕ್‌ಔಟ್ ಮಾಡುವ ಮುನ್ನ ನೋಟೀಸ್ ಜಾರಿ ಮಾಡುವುದಿರಲಿ, ಕನಿಷ್ಠ ಅವರಿಗೆ ವಿಚಾರವನ್ನು ತಿಳಿಸದೆ ಗೌಪ್ಯವಾಗಿ ವ್ಯವಹಾರ ಮಾಡಿ ದಿಢೀರ್ ಎಂದು ಮುಚ್ಚಿ ಹಾಕಿದ್ದಾರೆ. ಮೇ 4 ರಂದು ರಾತ್ರಿ 12 ಗಂಟೆಯ ಸುಮಾರಿಗೆ ಟೆಕ್ನಿಕಲ್ ಡೈರೆಕ್ಟರ್ ಪ್ರಕಾಶ್‌ರಾವ್, ಪ್ಲಾಂಟ್ ಮ್ಯಾನೇಜರ್ ಉದಯಕುಮಾರ್, ಸ್ಪೆಷಲ್ ಆಫೀಸರ್ ನಿತ್ಯಾನಂದ, ಎಂಡಿಯ ಪಿಎ ಸುರೇಂದ್ರಬಾಬು ಮುಂತಾದವರು ಹೆಬ್ಬಗೋಡಿ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ನಾಗರಾಜ್ ಮತ್ತು 20 ಜನ ಪೊಲೀಸರೊಂದಿಗೆ ಕಾರ್ಖಾನೆಗೆ ನುಗ್ಗಿ ರಾತ್ರಿ ಪಾಳಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದ 40 ಜನ ಕಾರ್ಮಿಕರಿಗೆ "ಕಂಪೆನಿ ಲಾಕ್‌ಔಟ್ ಆಗಿದೆ, ನೀವಾಗಿಯೇ ಹೊರ ಹೋಗದಿದ್ದರೆ, ಪೊಲೀಸರನ್ನು ಕರೆ ತಂದಿದ್ದೇವೆ, ಕೈಕಾಲು ಮುರಿದು ಹೊರಹಾಕುತ್ತಾರೆ" ಎಂದು ಬೆದರಿಸಿದ್ದಾರೆ. ಡಿವಿಜನ್‌ಗಳಿಂದ ಹೊರಬಂದು, ಮುಖ್ಯದ್ವಾರ ದಾಟದಂತೆ ಕಾರ್ಮಿಕರನ್ನು ಒಳಗಡೆಯೇ ಕೂಡಿ ಹಾಕಿ ಬಿಡುಗಡೆ ಮಾಡಲಾಗಿದೆ. ಅಲ್ಲಿಯತನಕ MTR ನ್ನು ಕೊಂಡುಕೊಂಡ ನಾರ್ವೆಯ ಕಂಪೆನಿ ಅದನ್ನು ಸಂಪೂರ್ಣ ಯಾಂತ್ರೀಕರಣಗೊಳಿಸುವ ಹುನ್ನಾರದ ಮೊದಲ ಭಾಗ ಇದು.


-ಕುಮಾರ್ ಬುರಡಿಕಟ್ಟಿ

ಮುಂಗಾರು ತಂಡದ ಮುಂಗಾಟ


ಯೋಗರಾಜ್ ಭಟ್

ಮುಂಗಾರು ಟೀಂನವರ ಪ್ರಕಾರ ಒಬ್ಬ ಕೃಷ್ಣಪ್ಪನ್ನ ಬಿಟ್ಟು ಉಳಿದವರೆಲ್ಲರೂ ಮುಂಗಾರಿನ ಯಶಸ್ಸಿಗೆ ಕಾರಣರಾಗಿದ್ದರು. ಮುಂಗಾರು ಹಿಟ್ ಆದ ಬೆನ್ನ ಹಿಂದೆಯೇ ದುಡ್ಡಿಗಾಗಿ ಈ ಮುಸುಕಿನ ಗುದ್ದಾಟ ಸ್ಫೋಟಗೊಂಡು 50 ನೇ ದಿನದ ಸಂತೋಷಕೂಟ ರಿಜಾಯ್ಸ್‌ನಲ್ಲಿ ಸಿಂಪಲ್ಲಾಗಿ ನಡೆಯಿತು. 100 ನೇ ದಿನದ ಸಮಾರಂಭ ಆರ್ಡಿನರಿ ಎನಿಸುವಂತಹ ಗ್ರೀನ್‌ಹೌಸಿನಲ್ಲಿ ಆಯಿತು. ಅಷ್ಟೊತ್ತಿಗೆ ಕೃಷ್ಣಪ್ಪ-ಯೋಗರಾಜ್-ಗಣೇಶ್ ನಡುವೆ ಪ್ರೀತಿ ವಿಶ್ವಾಸದ ಸಂಬಂಧ ಕರಗೇ ಹೋಗಿತ್ತು. 'ಮುಂಗಾರು ಮಳೆ' ಭರ್ಜರಿಯಾಗೇ ಬಿದ್ದಿದ್ದರೂ ಬೆಳೆದದ್ದು ಮಾತ್ರ ವೈಮನಸ್ಸಿನ ಬೆಳೆಯಾಯಿತು.




ನಿರ್ಮಾಪಕ ಕೃಷ್ಣಪ್ಪ

'ಅನಿಸುತಿದೆ ಯಾಕೊ ಇಂದು
ಈ ಯಶಸ್ಸಿಗೆ ಕಾರಣ ನಾನೇ ಎಂದು'

-ಅಂತಾ ಮುಂಗಾರು ಮಳೆ ಟೀಂನ ಪ್ರತಿಯೊಬ್ಬರೂ ತೋಡಿರಾಗದಲ್ಲಿ ಆಲಾಪನೆ ಮಾಡುತ್ತಿದ್ದರೆ ಚಿತ್ರದ ನಿರ್ಮಾಪಕ ಕೃಷ್ಣಪ್ಪ ಮಾತ್ರ "ನೆನೆದುಕೊಂಡ್ರು ಒಮ್ಮೆ ನನ್ನ, ಕಾಸ್ ಕೊಡಲ್ಲ ಈಗ ಸುಂಸುಮ್ನೆ" ಎಂದು ದರ್ಬಾರಿ ರಾಗದಲ್ಲಿ ಹೇಳಿಬಿಟ್ಟಿದ್ದಾರೆ.

ಕನ್ನಡ ಸಿನಿಮಾ ಇತಿಹಾಸದ ಸೂಪರ್ ಡ್ಯೂಪರ್ ಹಿಟ್ ಸಿನಿಮಾ 'ಮುಂಗಾರು ಮಳೆ'ಯ ಲೇಟೆಸ್ಟ್ ಎಪಿಸೋಡು ಇದು.

'ಹತ್ತಾರು ಕೋಟಿ ರೂಪಾಯಿ ಲಾಭ ಬಂದರೂ ಕೃಷ್ಣಪ್ಪ ಕೈಯೆತ್ತಿ ಲಾಭದ ಒಂದು ರೂಪಾಯಿಯನ್ನು ಕೊಡುತ್ತಿಲ್ಲ' ಎಂಬ ಕೊರಗು ನಿರ್ದೇಶಕ ಯೋಗರಾಜ್ ಭಟ್‌ರದು. ಆದರೆ 'ಒಪ್ಪಂದದ ಪ್ರಕಾರ ಕೊಡಬೇಕಾದ್ದನ್ನೆಲ್ಲಾ ಕೊಟ್ಟಮೇಲೂ ಇದೆಂತಾ ಚೌಕಾಸಿ ವ್ಯಾಪಾರ ನಿಮ್ಮದು' ಅಂತಾ ಕೃಷ್ಣಪ್ಪನ ತಣ್ಣನೆಯ ಪ್ರತಿಕ್ರಿಯೆ.

'ನಾನು' ಎಂಬ ಎರಡಕ್ಷರದ ಒಂದು ಜುಜುಬಿ ಪದವೇ ಮುಂಗಾರು ಮಳೆಯ ಟೀಂ ನಡುವೆ ಆಷಾಢದ ಗಾಳಿಯಂತೆ ಬೀಸತೊಡಗಿದೆ. ಇದ್ದಕ್ಕಿದ್ದಂತೆ ಯಾರಿಗಾದರೂ ಕೋಟಿ ರೂಪಾಯಿ ಲಾಟರಿ ಹೊಡೆದರೆ 'ನನಗೂ ಒಂಚೂರು ಕೊಡಬಾರದಾ' ಅಂತಾ ನೆಂಟರೂ, ಸ್ನೇಹಿತರು ಲೋಭ, ಅಸೂಯೆಯಿಂದ ನಿರೀಕ್ಷಿಸುವಂತೆಯೇ ಇವತ್ತು ಮುಂಗಾರು ಮಳೆಯ ನಿರ್ದೇಶಕ, ಹೀರೋ, ಕ್ಯಾಮರಾಮೆನ್ ಹಾಗೂ ಟೀಂನವರೆಲ್ಲಾ ಕೃಷ್ಣಪ್ಪನವರತ್ತ ಮುಖ ಮಾಡಿ ನಿಂತುಕೊಂಡಿದ್ದಾರೆ.

ಆದರೆ ಕೃಷ್ಣಪ್ಪ ಇದುವರೆಗೂ ತುಟಿ ಎರಡು ಮಾಡಿಲ್ಲ, ಅಷ್ಟೇ ಅಲ್ಲ, ಅವರ ಈ ನಿಲುವಿನಲ್ಲಿ ತಪ್ಪೂ ಇಲ್ಲ ಎಂಬುದೇ ವಿಶೇಷ. 'ಮುಂಗಾರು ಮಳೆ' ನೋಡಿ ಖುಷ್ ಆಗಿದ್ದ ಜನ ಮಾತ್ರ ಚಿತ್ರತಂಡದ ಸದಸ್ಯರೇ ಇವತ್ತು ಹಣಕ್ಕಾಗಿ ಕತ್ತೆ ಕಿರುಬಗಳಂತೆ ಕಚ್ಚಾಡಿಕೊಳ್ಳುತ್ತಿರುವುದನ್ನು ನೋಡಿ ಉರುಳಾಡಿಕೊಂಡು ನಗುತ್ತಿದ್ದಾರೆ.

ದುಡ್ಡಿಗಾಗಿ ಕಿತ್ತಾಟ

ಈ ರಂಪಾಟಗಳು ಬೆಳೆಯಲು ಪತ್ರಿಕೆಗಳು, ಕೆಲ ಸಿನಿಮಾ ಪತ್ರಕರ್ತರು ಹಾಗೂ ಸ್ವತಃ ನಿರ್ದೇಶಕ ಯೋಗರಾಜ್ ಭಟ್‌ರೇ ನೇರ ಕಾರಣ.

'ಮುಂಗಾರು' ಕ್ಲಿಕ್ ಆಗಿದ್ದೇ ನನ್ನಿಂದ, ನಾನು ಅಲ್ಲಿ ಶಾಟ್ ತೆಗೆಸಿದೆ, ಕ್ಯಾಮರಾ ಇಲ್ಲಿ ಇಡಿಸಿದೆ, ಎಲ್ಲಿಂದಲೋ ಒಂದು ಮೊಲ ತರಿಸಿದೆ... ನಾನ್ ಹಾಗೆ ಮಾಡಿದೆ, ನಾನ್ ಹೀಗೆ ಮಾಡಿದೆ ಎಂದು ಮುಂಗಾರು ಹಿಟ್ ಅನ್ನಿಸಿದ ದಿನ ಶುರುವಾದ ಭಟ್ಟರ ಜಂಭದ ಪ್ರವರ ಈಗಲೂ ನಿಂತಿಲ್ಲ. ಇದಕ್ಕೆ ಕೆಲ ಪತ್ರಿಕೆಗಳೂ ಕುಮ್ಮಕ್ಕು ಕೊಡುತ್ತಾ ಬಂದಿದ್ದವು. ಇದರಿಂದ ಭಟ್ಟರಿಗೆ ಸ್ವಲ್ಪ ತಲೆ ಸುತ್ತು ಬಂತೇನೊ. 'ಬೇರೆ ಕನ್ನಡ ನಿರ್ದೇಶಕರೆಲ್ಲಾ ತಗಡು ಸಿನಿಮಾ ತೆಗೀತ್ತಿದ್ರು, ನಾನು ಮುಂಗಾರು ಮಾಡಿದೆ, ಹಿಟ್ ಆಯ್ತು' ಅಂತಾ ಪುಂಗಿ ಬೇರೆ ಊದಿಕೊಂಡಿದ್ದರು.

ಮಾತು ಮನೆ ಕೆಡಿಸಿತು


'ಮುಂಗಾರು' ಸರಿಸುಮಾರು 30 ಕೋಟಿ ರೂಪಾಯಿಗಳ ಲಾಭದ ಮಳೆ ಸುರಿಸಲಿದೆ ಎಂಬ ಅಂದಾಜಿದೆ. ಒಂದೂವರೆ ಕೋಟಿ ಖರ್ಚಾಗಿದ್ದ ಸಿನಿಮಾ ಇದು. ನಿರ್ದೇಶಕ ಯೋಗರಾಜ್, ಹೀರೋ ಗಣೇಶ್ ಹಾಗೂ ಕ್ಯಾಮರಾಮೆನ್ ಕೃಷ್ಣ ಬರೀ ಯಶಸ್ಸಿನ ಬಗ್ಗೆ ಸಂತೋಷಪಟ್ಟುಕೊಂಡು ಓಡಾಡಿಕೊಂಡಿದ್ದರೆ ಸಾಕಿತ್ತು, ಕೃಷ್ಣಪ್ಪನೆ ತಮಗೆ ಬರುತ್ತಿರುವ ರೂಪಾಯಿ ಲಾಭದಲ್ಲಿ ಕನಿಷ್ಠ ಒಂದಾಣೆಯನ್ನಾದರೂ ಇವರಿಗೆಲ್ಲಾ ಹಂಚಿರುತ್ತಿದ್ದರೇನೊ. ಆದರೆ ಮೊದಲೇ ಹೇಳಿದಂತೆ 'ನಾನು' ಎಂಬ ಶನಿ ಅಷ್ಟರಲ್ಲಿ ಈ ಟೀಂನ ಹೆಗಲೇರಿಬಿಟ್ಟಿದ್ದ. ಟೀಂಗೆ ನಿರ್ಮಾಪಕ ಸಾಕ್ಷಾತ್ ಕೃಷ್ಣಪ್ಪನೇ ಮರೆತುಹೋಗಿದ್ದ. ಅವತ್ತು ಅವರೆಲ್ಲರ ಬಗ್ಗೆ ಮನಸ್ಸು ಕಹಿ ಮಾಡಿಕೊಂಡು ಹೋದ ಕೃಷ್ಣಪ್ಪ ಈಗ ಯಾರಿಗೂ ಮಣೆ ಹಾಕುತ್ತಿಲ್ಲ.

ಅಷ್ಟರಲ್ಲಿ ಏನಾಗಿತ್ತೆಂದರೆ 'ಕೃಷ್ಣಪ್ಪ ಹೀರೋ ಗಣೇಶ್‌ಗೆ ಬಂಗಲೆ-ಕಾರು ಕೊಡಿಸ್ತಾರಂತೆ. ಯೋಗರಾಜ್ ಭಟ್‌ಗೆ ಎಷ್ಟೋ ಲಕ್ಷ ಕೊಡಲಿದ್ದಾರಂತೆ' ಎಂಬ ರೂಮರ್‌ಗಳು ಗಾಂಧಿನಗರದ ಉದ್ದಗಲಕ್ಕೂ ಕೇಳಿಬರತೊಡಗಿದ್ದವು. ಕೆಲ ಪತ್ರಿಕೆಗಳ ಸಿನಿಮಾ ವರದಿಗಾರರೂ ಇಂತಹ ರೂಮರ್‌ಗಳನ್ನು ಹಬ್ಬಿಸಿದರು.

ವಾಸ್ತವದಲ್ಲಿ ಇವೆಲ್ಲಾ ಫಲಾನುಭವಿಗಳ ನಿರೀಕ್ಷೆಗಳಾಗಿದ್ದವೇ ವಿನಃ ನಿಜವಾಗಿರಲಿಲ್ಲ ಅಥವಾ ನಿಜವಾಗುತ್ತಿತ್ತೇನೊ ಆದರೆ ಈಗ ಬರೀ ನಿರೀಕ್ಷೆಯಾಗೇ ಉಳಿದುಹೋಗಿದೆ.

ಮೊದಲೇ ಹೇಳಿದಂತೆ ಇದಕ್ಕೆ ಕೃಷ್ಣಪ್ಪ ಸುತಾರಾಂ ಕಾರಣ ಅಲ್ಲ, ಬದಲಾಗಿ ಗಾಂಧಿನಗರದ ಕೆಲ ಪಂಡಿತರು ಹಾಗೂ ಪತ್ರಕರ್ತರು ಸೇರಿಕೊಂಡು "ಕೃಷ್ಣಪ್ಪ ತಮ್ಮ ಹಣದ ಗಂಟನೊಂದಿಗೆ ಹೀಗೀಗೆ ಸಾಗಿ ಬರಬೇಕು, ಯಾರ್ಯಾರಿಗೆ ಎಷ್ಟೆಷ್ಟು ಲಾಭ ಹಂಚಬೇಕು" ಎಂದು ತಾವೇ ತೀರ್ಮಾನಿಸಿದ್ದೇ ಕಾರಣವಾಗಿತ್ತು. ಇವರು ಹೇಳಿದಂತೆ ಕೃಷ್ಣಪ್ಪ ಕುಣಿಯಲಿಲ್ಲಾ ಎಂದು ಈಗ ಸಲ್ಲದ ಕಿತಾಪತಿ ಶುರು ಮಾಡಿ ಮಂಗಾಟ ಆಡುತ್ತಿದ್ದಾರೆ ಅಷ್ಟೇ.


ಮುಂಗಾರು ಯಶಸ್ಸಿಗೆ ನಾನೇ ಕಾರಣ ಎಂದು ಟಾಂಟಾಂ ಬಾರಿಸಿಕೊಂಡು ತಿರುಗುತ್ತಿರುವ ಯೋಗರಾಜ್ ಭಟ್ "ಇದೊಂದು ಟೀಂವರ್ಕ್", ನಿರ್ಮಾಪಕ ಕೃಷ್ಣಪ್ಪನವರ ಸಹಕಾರ ಧೈರ್ಯವೂ ಕಾರಣ ಅಂತಾ ಬಿಂಬಿಸಿದಿದ್ದರೆ ಫಲಿತಾಂಶ ಬೇರೆಯೇ ಇರುತ್ತಿತ್ತು. ಏಕೆಂದರೆ ಇದೇ ಯೋಗರಾಜ್ 'ಮಣಿ' ಹಾಗೂ 'ರಂಗ



ಎಸ್‌ಎಸ್‌ಎಲ್‌ಸಿ' ಎಂಬ ತೋಪು ಸಿನಿಮಾ ನಿರ್ದೇಶಿಸಿ ಕೆಟ್ಟ ಹೆಸರು ಪಡೆದಿದ್ದರು. ಯಾವ ನಿರ್ಮಾಪಕನೂ ಭಟ್‌ರ ಹೊಸ ಪ್ರಾಜೆಕ್ಟ್ ಬಗ್ಗೆ ಆಸಕ್ತಿ ತೋರಿಸಿರಲಿಲ್ಲ, ಆಗ ಗಣೇಶ್ ಮುಂಗಾರು ಕತೆ ಕೇಳಿ ತಾವೇ ಕೃಷ್ಣಪ್ಪನವರನ್ನು ಕಂಡು ಒಪ್ಪಿಸಿ ಯೋಗರಾಜ್‌ಗೂ ನಿರ್ದೇಶನದ ಛಾನ್ಸ್ ಕೊಡಿಸಿದ್ದರು. ಅವತ್ತು ಕೃಷ್ಣಪ್ಪ ಹೇಳಿದ್ದಿಷ್ಟೆ: "ಗಣೇಶ್ ನಮ್ಮೂರಿನ ಹುಡುಗ, ನನಗೆ ಗೊತ್ತಿರೋನು, ನನಗೆ ಈ ಸಿನಿಮಾದಿಂದ ಹಣ ನಷ್ಟವಾದರೂ ಚಿಂತೆ ಇಲ್ಲ, ಇಷ್ಟೇಟಾದಿ ಕಳೆದುಕೊಂಡೆ ಅಂದುಕೊಳ್ಳುತ್ತೇನೆ, ಆದರೆ ಒಳ್ಳೇ ಸದಭಿರುಚಿ ಸಿನಿಮಾ ಮಾಡಿ" ಎಂದಿದ್ದರು. ಈತ ಎಂತಾ ಜಂಟಲ್‌ಮ್ಯಾನ್ ಅಂದರೆ ಚಿತ್ರೀಕರಣ ನಡೆಯುತ್ತಿದ್ದಾಗ ಒಂದು ದಿನವೂ ಹೋಗಿ ಯಾರಿಗೂ ಕಿರಿಕಿರಿ ಮಾಡಿರಲಿಲ್ಲ, ಶೂಟಿಂಗ್‌ಗೆ ಬೇಕಾದ ಹಣ-ಪರಿಕರ ಒದಗಿಸಿ ತಮ್ಮ ಪಾಡಿಗೆ ತಾವು ಸುಮ್ಮನಿದ್ದರು. ಸಿನಿಮಾ ರೆಡಿಯಾದ ಮೇಲೆ ವಿತರಕರು ಸಿಗದೇ ಹೋದಾಗ ತಾವೇ 20 ಪ್ರಿಂಟ್ ಹಾಕಿಸಿ ರಿಲೀಸ್ ಮಾಡಿದ್ದರು. ಏಕೆಂದರೆ ಯೋಗರಾಜ್ ಭಟ್‌ಗಾಗಲಿ, ಗಣೇಶ್‌ಗಾಗಲಿ ಅವರ ಹೆಸರಿನಿಂದಲೇ ಚಿತ್ರ ಖರೀದಿಯಾಗುವಂತಹ ಹವಾ ಆಗಿನ್ನೂ ಇರಲಿಲ್ಲ, ಆಮೇಲೆನಾಯಿತೆಂಬುದು ಈಗ ಇತಿಹಾಸ ಬಿಡಿ. 'ಮುಂಗಾರು' ಈಗ 120 ಪ್ರಿಂಟ್‌ಗಳೊಂದಿಗೆ ಕರ್ನಾಟಕದಾದ್ಯಂತ ಇನ್ನು ಹಣದ ಹೊಳೆ ಸುರಿಸುತ್ತಲೇ ಇದೆ.

ಈ ಮಧ್ಯೆ ಕ್ಯಾಮರಾಮೆನ್ ಕೃಷ್ಣ 'ನಾನು ಜೋಗ್ ತೋರಿಸಿರೋದನ್ನ ನೋಡಲೆಂದೇ ಜನ ಬರುತ್ತಿದ್ದಾರೆ' ಎಂಬ ಡೈಲಾಗ್ ಹೇಳಿಕೊಂಡು ತಿರುಗುತ್ತಿದ್ದಾರೆ.

ಒಟ್ಟಿನಲ್ಲಿ ಮುಂಗಾರು ಟೀಂನವರ ಪ್ರಕಾರ ಒಬ್ಬ ಕೃಷ್ಣಪ್ಪನ್ನ ಬಿಟ್ಟು ಉಳಿದವರೆಲ್ಲರೂ ಮುಂಗಾರಿನ ಯಶಸ್ಸಿಗೆ ಕಾರಣರಾಗಿದ್ದರು. ಮುಂಗಾರು ಹಿಟ್ ಆದ ಬೆನ್ನ ಹಿಂದೆಯೇ ಈ ಮುಸುಕಿನ ಗುದ್ದಾಟ ಸ್ಫೋಟಗೊಂಡು 50 ನೇ ದಿನದ ಸಂತೋಷಕೂಟ ರಿಜಾಯ್ಸ್‌ನಲ್ಲಿ ಸಿಂಪಲ್ಲಾಗಿ ನಡೆಯಿತು. 100 ನೇ ದಿನದ ಸಮಾರಂಭ ಆರ್ಡಿನರಿ ಎನಿಸುವಂತಹ ಗ್ರೀನ್‌ಹೌಸಿನಲ್ಲಿ ಆಯಿತು. ಅಷ್ಟೊತ್ತಿಗೆ ಕೃಷ್ಣಪ್ಪ-ಯೋಗರಾಜ್-ಗಣೇಶ್ ನಡುವೆ ಪ್ರೀತಿ ವಿಶ್ವಾಸದ ಸಂಬಂಧ ಕರಗೇ ಹೋಗಿತ್ತು. 'ಮುಂಗಾರು ಮಳೆ' ಭರ್ಜರಿಯಾಗೇ ಬಿದ್ದಿದ್ದರೂ ಬೆಳೆದದ್ದು ಮಾತ್ರ ವೈಮನಸ್ಸಿನ ಬೆಳೆಯಾಯಿತು.



ಅವತ್ತು ಗ್ರೀನ್‌ಹೌಸಿಗೆ ಬೇಕಂತಲೇ ಲೇಟಾಗಿ ಬಂದ ಯೋಗರಾಜ್ ಕೆಲ ಹೊತ್ತಿನಲ್ಲೇ ಎದ್ದು ಹೋದರು. ಗಣೇಶ್ ಕೂಡ ಲೇಟಾಗಿ ಬಂದು ಬೇರೆ ಕೆಲಸವಿದೆ ಎನ್ನುತ್ತಾ ಅರ್ಜೆಂಟಾಗೇ ಹೋದರು.

ಇದೇ ಯೋಗರಾಜ್ ಹಾಗೂ ಗಣೇಶ್ ಮುಂಗಾರಿನ ಮುಹೂರ್ತದ ದಿನ ರಾತ್ರಿ ಹನ್ನೆರಡಾದರೂ ಪತ್ರಕರ್ತರ ಜೊತೆ ಹರಟೆ ಹೊಡೆಯುತ್ತಾ ಕಾಲ ಕಳೆದಿದ್ದನ್ನು ನೋಡಿದ್ದವರಿಗೆ ತಂಡದ ನಡುವೆ ವೈಮನಸ್ಸು ಬೆಳೆದಿದೆ ಎಂಬುದು ಅರ್ಥವಾಗಿತ್ತು.

ಇವರ ಅವತಾರಗಳನ್ನೆಲ್ಲಾ ನೋಡಿ ಕೃಷ್ಣಪ್ಪನಿಗೆ ಈಗ ರೇಗಿ ಹೋಗಿದೆ. "ನಾನು ಹೊಸ ಸಿನಿಮಾ ಮಾಡ್ತೀನಿ, ಆದರೆ ಅವಕಾಶ ಇರದವರಿಗೆ, ಸೋತಿರುವವರಿಗೆ ಮಾತ್ರ ಅವಕಾಶ" ಎಂದು ಡಿಕ್ಲೇರ್ ಮಾಡಿಬಿಟ್ಟಿದ್ದಾರೆ. ಮುಂಗಾರು ಹಿಟ್ ಆದಕೂಡಲೇ ಯೋಗರಾಜ್‌ಗೆ ಹೊಸ ಕತೆ ರೆಡಿ ಮಾಡಿಕೊಳ್ಳಲು ಹೇಳಿ ಮೂರು ಲಕ್ಷ ಅಡ್ವಾನ್ಸ್ ಕೊಟ್ಟಿದ್ದರು. ಅವರಿಗೆ ಗಣೇಶ್ ಹಾಗೂ 'ದುನಿಯಾ' ಹೀರೋ ವಿಜಯ್ ಕಾಂಬಿನೇಷನ್ನಿನಲ್ಲಿ ಹೊಸ ಸಿನಿಮಾ ಮಾಡುವ ಯೋಚನೆ ಇತ್ತು. ಆದರೆ ಗಣೇಶ್ 'ಈಗ ಡೇಟ್ ಇಲ್ಲ' ಎಂದನಂತೆ. 'ಆಯ್ತು ನೀನು ಫ್ಲಾಪ್ ಆದ ಮೇಲೆ ಮತ್ತೆ ಬಾ, ಆಗ ಛಾನ್ಸ್ ಕೊಡ್ತೀನಿ' ಅಂದರಂತೆ ಕೃಷ್ಣಪ್ಪ. ಅವರ ಹೊಸ ಸಿನಿಮಾದಲ್ಲಿ ಯೋಗರಾಜ್ ಹಾಗೂ ಗಣೇಶ್ ಇರಲ್ಲಾ ಅನ್ನೋದಂತೂ ಈಗ ಗ್ಯಾರಂಟಿಯಾಗಿದೆ.

'ಸಿಕ್ಸರ್' ಸಿನಿಮಾ ನಿರ್ದೇಶಕ ಶಶಾಂಕ್ ಹಾಗೂ ಅವರದ್ದೇ ಟೀಂಗೆ ಕೃಷ್ಣಪ್ಪ ತಮ್ಮ ಹೊಸ ಸಿನಿಮಾ ರೆಡಿ ಮಾಡುವ ಜವಾಬ್ದಾರಿ ಕೊಡುತ್ತಿದ್ದಾರೆ.

ಅದೇನೆ ಆಗಲಿ, ಕೃಷ್ಣಪ್ಪನವರು ಕನ್ನಡ ಸಿನಿಮಾ ಇತಿಹಾಸದಲ್ಲೇ ಯಾರು ಗಳಿಸಿರದಷ್ಟು ಲಾಭ ಮಾಡಿದ್ದಾರೆ. ಕನಿಷ್ಠ ಮುಂಗಾರಿನ 25 ನೇ ವಾರದ ಕಾರ್ಯಕ್ರಮವನ್ನಾದರೂ ಅರೇಂಜ್ ಮಾಡಿ ಎಲ್ಲರನ್ನೂ ಖುಷಿಯಾಗಿಡಲಿ. ಸರಿ ಅನ್ನಿಸಿದರೆ ತಮಗೆ ತೋಚಿದಷ್ಟು ಪ್ರಮಾಣದ ಲಾಭವನ್ನು ಇತರರಿಗೂ ನೀಡಲಿ. ಕೇವಲ ಔದಾರ್ಯದ ಕಾರಣಕ್ಕಾಗಲ್ಲ, ಬದಲಾಗಿ ಒಂದು ಒಳ್ಳೆಯ ಸೂಪರ್ ಹಿಟ್ ಸಿನಿಮಾ ಕೊಟ್ಟು ಟೀಂನವರಿಗೆ ಇನ್ನು ಮುಂದಾದರೂ Team Spirit ನ ಮಹತ್ವ ಗೊತ್ತಾಗಲಿ ಅಂತಾ.

ಕೊನೆಯದಾಗಿ ಮುಂಗಾರು ಟೀಂನವರು ಒಂದು ವಿಚಾರ ನೆನಪಿಟ್ಟುಕೊಳ್ಳಲಿ. ಇವತ್ತು ಸಿನಿಮಾ ಗೆದ್ದಿತೆಂದು ಲಾಭದಲ್ಲಿ ಪಾಲು ಕೇಳುತ್ತಿದ್ದೀರಿ, ಆದರೆ ಅಕಸ್ಮಾತ್ ಸಿನಿಮಾ ತೋಪಾಗಿದ್ದಿದ್ದರೆ ನಷ್ಟಕ್ಕೆ ತಲೆ ಕೊಡುತ್ತಿದ್ದೀರಾ?


ಇಲ್ಲಾ ತಾನೆ!

ಕೃಷ್ಣಪ್ಪ ಎಲ್ಲರಿಗೂ ಒಪ್ಪಿಕೊಂಡಷ್ಟು ಸಂಭಾವನೆ ಕೊಟ್ಟಿದ್ದಾರೆ. ಈಗ ಚಿತ್ರ ಗೆದ್ದಿದೆ, ಹಾಗಂತ ನಾನೇ ಗೆಲ್ಲಿಸಿದ್ದು ಲಾಭ ಹಂಚುತ್ತಾರೆ, ಕಾರು ಬಂಗಲೆ ಕೊಡುತ್ತಿದ್ದಾರೆಂದು ಪುಕಾರು ಹಬ್ಬಿಸಿ, ಆಮೇಲೆ ಜಿಪುಣ ಏನೂ ಕೊಡಲಿಲ್ಲ ಅಂತಾ ಅಪಪ್ರಚಾರ ಮಾಡುವ ಬದಲಾಗಿ ದೀಸೆಂಟಾಗಿದ್ದರೆ ಚೆನ್ನಾ ಅಲ್ಲವೆ.

ಮಾತು ಮನೆ ಕೆಡಿಸಿತು

ತೂತು ಒಲೆ ಕೆಡಿಸಿತು ಅನ್ನೋ ಗಾದೆ ಮಾತಿನ ಅರ್ಥ ಎಲ್ಲರಿಗೂ ಆಗಬೇಕಿದೆ.

ಕೃಷ್ಣಪ್ಪನವರು ನೀಡಿರುವ ಜಾಹೀರಾತು




ಪತ್ರಿಕಾ ಜಾಹೀರಾತು ಹಾಗೂ ಕೃಷ್ಣಪ್ಪನ ದುಡುಕು

ಈಗಿನ 'ಮುಂಗಾರು ಮಳೆ'ಯ ಪತ್ರಿಕಾ ಜಾಹೀರಾತುಗಳನ್ನು ನೀವು ಗಮನಿಸಿದ್ದೀರಾ. ಅದರಲ್ಲಿ ಈಗ ಯಾವ ಊರಿನ ಯಾವ ಟಾಕೀಸ್‌ನಲ್ಲಿ ಮುಂಗಾರು ಪ್ರದರ್ಶನವಿದೆ ಎಂಬ ವಿವರವಿದೆಯೇ ವಿನಃ ನಟ ನಟಿಯರ ಒಂದು ಸ್ಟೀಲ್ ಫೋಟೋ ಕಾಣುತ್ತಿಲ್ಲ. ಒಬ್ಬ ಕೃಷ್ಣಪ್ಪನವರು ಬಿಟ್ಟು! ಇದಕ್ಕೆ 120 ಥಿಯೇಟರ್‌ಗಳ ಹೆಸರು ಹಾಕಬೇಕಲ್ಲ ಎಂಬ ಕಾರಣ ಒಂದಾದರೆ ತಮ್ಮ ಟೀಂ ಬಗ್ಗೆ ಕೃಷ್ಣಪ್ಪನಿಗಿರುವ ಕೋಪವೂ ಇನ್ನೊಂದು ಕಾರಣವಾಗಿದೆ.

ಇಂಥದ್ದೇ ಜಗಳವೊಂದು 'ಅಮೆರಿಕಾ ಅಮೆರಿಕಾ' ಬಂದಾಗಲೂ ಹುಟ್ಟಿಕೊಂಡಿತ್ತು. ನಿರ್ಮಾಪಕ ನಂದ ಕುಮಾರ್ ನಟ-ನಿರ್ದೇಶಕರ ಮೇಲೆ ಸಿಟ್ಟಿಗೆದ್ದು ಅವರನ್ನೆಲ್ಲಾ ಮೂಲೆಗೆ ತಳ್ಳಿ ತಾನೇ ಎದ್ದುಕಾಣುವಂತಹ ಪೋಸ್ಟರ್ಸ್ ಮಾಡಿಸಿ ಕರ್ನಾಟಕದ ತುಂಬಾ ಅಂಟಿಸಿದ್ದರು. ಕೃಷ್ಣಪ್ಪ ಈಗ ತಮ್ಮದೇ ರೀತಿಯಲ್ಲಿ ಗಣೇಶ್-ಯೋಗರಾಜ್‌ಗೆ ಜಾಹೀರಾತಿನಿಂದ ಗೇಟ್ ಪಾಸ್ ಕೊಡಿಸಿದ್ದಾರೆ.

ದುನಿಯಾ ಸೂರಿ ಲಕ್




ಮುಂಗಾರಿನ ನಿರ್ದೇಶಕ ಯೋಗರಾಜ್‌ಗಿಂತಾ ಇನ್ನೊಂದು ಹಿಟ್ ಚಿತ್ರ ದುನಿಯಾದ ನಿರ್ದೇಶಕ ಸೂರಿಯ ಲಕ್ ಚೆನ್ನಾಗಿದೆ. ಅವರಿಗೆ ದುನಿಯದ ನಿರ್ಮಾಪಕರು ಮಾತಾಡಿದ್ದ ಫೀಸ್ ಅಲ್ಲದೆ 40 ಲಕ್ಷ ರೂಪಾಯಿ ಹೆಚ್ಚಿಗೆ ಕೊಟ್ಟು ಖುಷಿಪಡಿಸಿದ್ದಾರೆ. ಅದಕ್ಕೆ ಸೂರಿಯ ಸಂಯಮದ ವರ್ತನೆಯೂ ಕಾರಣ ಬಿಡಿ. ದುನಿಯಾದ ಯಶಸ್ಸಿಗೆ ನಾನೊಬ್ಬನೇ ಕಾರಣ ಅಂತಾ ಸೂರಿ ಎಲ್ಲೂ ಹೇಳಿಕೊಂಡಿರಲಿಲ್ಲ.

ಯೋಗರಾಜ್‌ರ ಬ್ಯಾಡ್‌ಲಕ್ ಎಷ್ಟೆಂದರೆ ಮುಂಗಾರಿನ ತೆಲುಗು ರಿಮೇಕ್ ಹಕ್ಕನ್ನು ನಾಗಾರ್ಜುನ 1 ಕೋಟಿಗೆ ಕೊಂಡಿದ್ದಾರೆ. ಯೋಗರಾಜ್ ಕೃಷ್ಣಪ್ಪ ಜೊತೆ ಈ ವಿಚಾರಗಳ ಬಗ್ಗೆ ಒಪ್ಪಂದ ಮಾಡಿಕೊಂಡಿರಲಿಲ್ಲವಾದ ಕಾರಣ 1 ಕೋಟಿ ಪೂರ್ತಿ ಕೃಷ್ಣಪ್ಪನ ಕೈ ಸೇರಿದೆ. ಇಲ್ಲದಿದ್ದರೆ ರೀಮೇಕ್ ರೈಟ್ಸ್‌ನಿಂದಲಾದರೂ ಕನಿಷ್ಠ 40 ಲಕ್ಷ ಯೋಗರಾಜ್‌ಗೆ ಬರಬೇಕಿತ್ತು. ಇದಕ್ಕೂ ಕೃಷ್ಣಪ್ಪ ಹೊಣೆ ಅಲ್ಲ. ನಿರ್ದೇಶನದ ಛಾನ್ಸ್ ಸಿಕ್ಕರೆ ಸಾಕೆಂದು ಕಾಯುತ್ತಿದ್ದ ಯೋಗರಾಜ್‌ರ ದುಡುಕುತನವೇ ಅದಕ್ಕೆ ಕಾರಣ.



ರಾಜಕೀಯ ಬಿಡಿ ಚಿತ್ರಗಳು

ಕೋ-ಜಾ ಇರಲಿ, ಯಡ್ಡಿ ಬೇಡ




ದೇವೇಗೌಡ-ಕಾಂಗ್ರೆಸ್ ನಡುವಿನ ಪುನರ್ ಮೈತ್ರಿಯ ಸಾಧ್ಯತೆ ಈಗ ಕ್ಷೀಣಿಸಿದೆ. ಅದಕ್ಕಿಂತಾ ಮಜಾ ಸಂಗತಿ ಏನೆಂದರೆ ಇನ್ನಾರು ತಿಂಗಳ ನಂತರ ಯಡಿಯೂರಪ್ಪ ಮುಖ್ಯಮಂತ್ರಿ ಆಗುವ ಸಾಧ್ಯತೆಯೂ ಈಗ ಕಮ್ಮಿಯಾಗಿದೆ!

ದೇವೇಗೌಡರ ಹೊಸ ಚದುರಂಗದಾಟವೇ ಇದಕ್ಕೆ ಕಾರಣ.

ಬಜೆಟ್ ನನ್ನದು, ರೈತರ ಸಾಲಮನ್ನಾ ನನ್ನ ಕೊಡುಗೆ. ಸಾರಾಯಿ-ಲಾಟರಿ ನಿಷೇಧ ನಾನೇ ಮಾಡಿದ್ದು.... ಹೀಗೆ ಸಮ್ಮಿಶ್ರ ಸರ್ಕಾರದ ಹೇಳಿಕೊಳ್ಳಬಹುದಾದ ಸಾಧನೆಗಳೆಲ್ಲವೂ 'ನನ್ನದೇ ಕೊಡುಗೆ' ಎನ್ನುತ್ತಾ ಯಡ್ಡಿ ವಿಕಾಸ ಯಾತ್ರೆ ಹೊರಟಿದ್ದರಲ್ಲಾ, ಗೌಡರಿಗೆ ಕೋಪ ಬಂದಿದ್ದೇ ಆವಾಗ.

ಕಾಂಗ್ರೆಸ್-ಜೆಡಿಎಸ್ ಮೈತ್ರಿ ವಿಚಾರ ಮತ್ತೆ ಕೇಳಿಬಂದಿದ್ದೇ ಈ ಹಿನ್ನೆಲೆಯಲ್ಲಿ. ಇದರಿಂದ ಗಾಬರಿಯಾದ ಬಿಜೆಪಿ ಹೈಕಮಾಂಡ್ ಯಡ್ಡಿಯನ್ನು ದೆಹಲಿಗೆ ಕರೆಸಿ 'ಸದ್ಯಕ್ಕೆ ಬಾಯಿ ಮುಚ್ಚಿಕೊಂಡಿರಿ, ಜಾಸ್ತಿ ತಲಹರಟೆ ಮಾಡಬೇಡಿ' ಎಂದು ಹೇಳಿ ಕಳಿಸಿದೆ. ಬಿಜೆಪಿ ನಾಯಕರನ್ನು ಖುಷಿಪಡಿಸಲು ಯಡ್ಡಿ ಒಂದಷ್ಟು ಹಣ ತೆಗೆದುಕೊಂಡು ಹೋಗಿ "ಉತ್ತರ ಪ್ರದೇಶದ ಎಲೆಕ್ಷನ್ ಖರ್ಚಿಗೆಂತಲೂ ಕೊಟ್ಟು ಬಂದಿದ್ದಾರೆ. ಅಲ್ಲಿಂದ ಬಂದವರೇ ನೇರ ಗೌಡರನ್ನು ಕಂಡು ಪರಮ ಶರಣಾಗತಿ ವ್ಯಕ್ತಪಡಿಸಿ ಬಂದಿದ್ದಾರೆ.

ಇತ್ತ ದೇವೇಗೌಡ ತಮ್ಮ ಬತ್ತಳಿಕೆಯಿಂದ ಇನ್ನೊಂದು ಬಾಣ ತೆಗೆದು ಬಿಟ್ಟಿದ್ದಾರೆ.



ಅದು "ದಳ-ಬಿಜೆಪಿ ಮೈತ್ರಿ ಮುಂದುವರೆಯಲಿ, ಆದರೆ ಯಡಿಯೂರಪ್ಪ ಮುಂದಿನ ಮುಖ್ಯಮಂತ್ರಿಯಾಗಲು ನಮ್ಮ ಒಪ್ಪಿಗೆ ಇಲ್ಲ" ಎಂಬ ಬಾಂಬ್ ಅದು.

ಗೌಡರ ಈ ತಂತ್ರಕ್ಕೆ ಎರಡು ಗುರಿ ಇದೆ.

ಒಂದು ಯಡ್ಡಿಯನ್ನು ಪಳಗಿಸಿ ಬಾಲ ಕಟ್ ಮಾಡುವುದು. ಇನ್ನೊಂದು ಬಿಜೆಪಿಯೊಳಗೇ ಇರುವ ಯಡ್ಡಿ ವಿರೋಧಿ ಬಣದವರಿಗೆ ಕುಮ್ಮಕ್ಕು ಕೊಡುತ್ತಾ ಬಿಜೆಪಿಯೊಳಗಿನ ಸಿವಿಲ್ ವಾರ್ ಜೀವಂತವಾಗಿಟ್ಟು ದುರ್ಬಲಗೊಳಿಸುವುದು!

ಗೌಡರ ತಲೆಗೆ ಬೆಲೆ ಇದೆ ಅಲ್ಲವಾ?

ಕೊಲ್ಲೂರು ಮುಕಾಂಬೆ ಬೆಂಗಳೂರು ರಾಧಾ ರಂಬೆ

ಅನಿತಾ ಕುಮಾರಸ್ವಾಮಿ ಮೊನ್ನೆ ಕೊಲ್ಲೂರಿಗೆ ಹೋಗಿ ಮುಕಾಂಬಿಕೆ ದೇವಿ ದರ್ಶನ ಮಾಡಿ ವಿಶೇಷ ಪೂಜೆ ಸಲ್ಲಿಸಿ ಬಂದಿದ್ದಾರೆ. ಕುಮಾರಸ್ವಾಮಿ ಇತ್ತೀಚೆಗೆ ಸಿನಿಮಾ ನಟಿಯರ ವಶೀಕರಣಕ್ಕೆ ಒಳಗಾಗಲು ಅವರ ಶತ್ರುಗಳು ಮಾಡಿಸಿರುವ ಮಾಟ-ಮಂತ್ರಗಳೇ ಕಾರಣ ವಿನಃ ಅದರಲ್ಲಿ ಕುಮಾರಣ್ಣನ ತಪ್ಪೇನೂ ಇಲ್ಲ ಎಂದು ಪಾಪಾ ಅನಿತಾರನ್ನೇ ನಂಬಿಸಲಾಗಿದೆ. ಅಸಲಿ ತಮಾಷೆ ಏನೆಂದರೆ ಅತ್ತ ಅನಿತಾ ಕೊಲ್ಲೂರು ಮುಕಾಂಬಿಕೆ ದರ್ಶನಕ್ಕೆ ಹೋದರೆ ಇತ್ತ ಎಚ್‌ಡಿಕೆ ಬೆಂಗಳೂರಿನ ರಾಧಿಕಾ ರಂಬೆಯ ದರುಶ(ಯ)ನಕ್ಕೆ ಹೋಗಿದ್ದು ಅವತ್ತು ಅದೇ ಸಮಯಕ್ಕೆ ವಿದೇಶಿ ನಿಯೋಗವೊಂದರ ಜೊತೆ ಸಿಎಂ ಭೇಟಿ ಇತ್ತು. ಆದರೆ ಕುಮಾರಸ್ವಾಮಿ ಅವರ ಭೇಟಿಗೆ ಬರಲಿಲ್ಲ. ಕೊನೆಗೆ ದೊಡ್ಡಗೌಡರಿಗೆ ಇದು ಗೊತ್ತಾಗಿ ಗನ್‌ಮ್ಯಾನ್ ಕೃಷ್ಣೇಗೌಡನನ್ನು ತರುಬಿ ತಮ್ಮ ಪುತ್ರರತ್ನನನ್ನು ಎಳೆತರಿಸಿದರಂತೆ.

ಪಾಪ, ಈ ವಯಸ್ಸಿನಲ್ಲೂ ಮಕ್ಕಳ ಮೇಲೆ ಒಂದು ಕಣ್ಣು ಇಡಲೇಬೇಕಾದ ದುಃಸ್ಥಿತಿ ಗೌಡರದ್ದು. ಆದರೆ ಯಾರೇ ಕೂಗಾಡಲಿ, ಊರೇ ಹೋರಾಡಲಿ ನಿನ ನೆಮ್ಮದಿಗೆ ಭಂಗವಿಲ್ಲ...ಮ್ಮ ನಿನಗೆ ಸಾಟಿ ಇಲ್ಲ... ಎಂಬ ಹಾಡಿನಂತೆ ಕುಮಾರಸ್ವಾಮಿ ಅಲುಗದೇ ಮುಂದೆ ಸಾಗುತ್ತಿದ್ದಾರೆ. ಈ ಮಧ್ಯೆ ಕುಮಾರಸ್ವಾಮಿ ಹೊಸ ಸಿನಿಮಾ ನಿರ್ಮಿಸಲಿದ್ದು ಟಚ್ ಕಬಾಬ್ ರಾಧಿಕಾಗೆ ಅದರಲ್ಲಿ ಎರಡನೇ ನಾಯಕಿ ಪಟ್ಟವಂತೆ... ನಿಜ ಜೀವನದಲ್ಲಿದ್ದಂತೆಯೇ ಆಯಿತು ಬಿಡಿ.

ಮಚ್ಚ ಮಂಜನ ಕೊಲೆಗೆ ಪ್ರತೀಕಾರವಾಗಿ ನಮ್ಮ ದುಷ್ಮನ್‌ಗಳ ಪೈಕಿ ಯಾರೇ ಸಿಕ್ಕರೂ ಅವನನ್ನು ಕತ್ತರಿಸಿ ಹಾಕು ಎಂದು ಎಲ್ಲರೂ ಪೆದ್ದಗುಂಡನನ್ನು ಛೂ ಬಿಟ್ಟರು. ಓಡಾಡಲು ಗಾಡಿ, ಖರ್ಚಿಗೆ ದುಡ್ಡು, ಹತ್ಯೆಗೆ ಲಾಂಗು, ಕಾಂಟ್ಯಾಕ್ಟಿಗೆ ಮೊಬೈಲು ಎಲ್ಲವೂ ಸಿಕ್ಕಿತೆಂದರೆ ಪೆದ್ದಗುಂಡನನ್ನು ಕೇಳಬೇಕೇ? ಯಾವುದೇ ಅಳುಕಿಲ್ಲದೇ ಬೇಟೆಗೆ ನಿಂತುಬಿಟ್ಟಿದ್ದ ಪೆದ್ದಗುಂಡ.

ಬೇಟೆಗೆ ನಿಂತ ಪೆದ್ದಗುಂಡ


ಜೈಲು ಕಂಬಿಗಳ ಮರೆಯಲ್ಲಿದ್ದುಕೊಂಡೇ ಮಚ್ಚಿನ ...ತ್ತ ಸಾವಿನ ಜಾಲ ಹರಡಿದ್ದ ತಿಮ್ಮೇನಹಳ್ಳಿ ಸೂರಿ ...ವಾಗಿ ತಿಂಗಳೊಳಗೇ ತಮ್ಮಯ್ಯನ ಕೊಲೆ ಕೇಸಿನಿಂದ ...ಬಿಡುಗಡೆಯಾದ. ಜೈಲಿಂದ ಹೊರಬಿದ್ದವನೇ ...ಗರಬಾವಿ, ಕೆಂಗೇರಿ ಉಪನಗರ, ಮಾಳಗಾಳ ...ರಿಯಾಗಳಲ್ಲಿ ಕಂತಕಂತ ಲ್ಯಾಂಡಿಗೇ ಕೈಯಿಡ ...ತೊಡಗಿದ. ಆ ಹೊತ್ತಿಗೆ ಚೆಟ್ಟಿಸಕಣ್ಣು ರಾಜೇಂದ್ರನನ್ನು ...ಂದು ಜೈಲು ಸೇರಿದ್ದ ಸೈಲೆಂಟ್ ಸುನೀಲನಿಗಿದ್ದ ...ಖ್ಯಾತಿಗೆ ತೀರ ವಿರುದ್ಧವಾಗಿ ...ಲ್ಲಿಯಲ್ಲಿದ್ದದ್ದು ಸೂರಿಯ ಹೆಸರೆ!

ಸೂರಿ ಅಂಡರ್‌ವರ್ಲ್ಡ್‌ನ ...ೊಸ ಧೂಮಕೇತುವಿನಂತೆ ...ಜೃಂಭಿಸುತ್ತಿದ್ದ ಕಾಲವದು.

ಸಾವು ಸದ್ದಿಲ್ಲದೇ ಹಿಂಬಾಲಿಸು ...ರುವುದು ಆತನಿಗೆ ಗೊತ್ತಿಲ್ಲ ...ದಿದ್ದಲ್ಲ. ಆದರೆ ಅದು ಪೆದ್ದಗುಂಡನ ರೂಪದಲ್ಲಿ ...ರಬಹುದೆಂಬ ನಿರೀಕ್ಷೆ ಮಾತ್ರ ಆತನಿಗಿರಲಿಲ್ಲ. ಏಕೆಂದರೆ ...ಆ ಹೊತ್ತಿಗಾಗಲೇ ಪೊಲೀಸ್ ಕಮೀಷನರ್ ನೀಲಂ ...ಅಚ್ಯುತರಾವ್ ಪೆದ್ದಗುಂಡನನ್ನು ಗಡಿಪಾರು ಮಾಡಿ ...ದೇಶ ಹೊರಡಿಸಿದ್ದಾಗಿತ್ತು. ಮಚ್ಚಿನ ಪರಮಾಪ್ತ ...ಕೋತಿರಾಮ, ತುರೆ ಸತೀಶ, ಯದುಗಿರಿ, ಕಲಗಚ್ಚು ...ಣಿ ಮುಂತಾದವರೆಲ್ಲ ಮಂಡ್ಯ ಕೃಷ್ಣನ ಕೊಲೆ ಕೇಸಿನಲ್ಲಿ ...ಜೈಲು ಸೇರಿದ್ದರು. ಬೈಚಕುಪ್ಪೆ ಜಾನಿ, ಹಂಡೆ ಕುಮಾರ, ...ಮಾರೇನಹಳ್ಳಿ ಜಗ್ಗ ಮುಂತಾದವರೆಲ್ಲ ಮಚ್ಚಿನ ...ಕಾರಣಕ್ಕಾಗಿಯೇ ಜೈಲು ಪಾಲಾಗಿದ್ದರಲ್ಲ; ಅವರು ...ಹೊರಬರುವ ತನಕ ತಾನು ಸೇಫು ಎಂದೇ ಲೆಕ್ಕ ...ಹಾಕಿದ ಸೂರಿಗೆ ಬದುಕುಳಿಯಬೇಕೆಂದರೆ ದುಡ್ಡು ...ಬೇಕು, ದುಡ್ಡಿಗಾಗಿ ಲ್ಯಾಂಡ್‌ಡೀಲ್‌ಗೆ ಕೈಹಾಕಲೇಬೇಕಾದ ...ಅನಿವಾರ್ಯತೆ. ಎಲ್ಲಕ್ಕೂ ಮಿಗಿಲಾಗಿ ತನ್ನ ಬಳಿ ...ರಿವಾಲ್ವರ್ ಇರುವ ತನಕ ದುಷ್ಮನ್ ತನ್ನ ಹತ್ತಿರ ...ಸುಳಿಯಲಾರ ಎಂಬ ವಿಪರೀತ ಆತ್ಮವಿಶ್ವಾಸ.


ಅದಕ್ಕೆ ತಕ್ಕಂತೆ ತುಮಕೂರು ಜೈಲಿನಲ್ಲಿದ್ದ ಕೊರಂಗು ...ಸೀಲೆ ಸೂರಿಯ ಬಂಟರಾದ ಗೋರಿಲ್ಲಾ ಮತ್ತು ...ಕೋಟ್ಲು ಪ್ರಕಾಶ ಸೇರಿಕೊಂಡು ಹಲ್ಲೆ ನಡೆಸಿಬಿಟ್ಟರು. ...ಸೂರಿಯ ವಿರುದ್ಧ ಕೊರಂಗು ವಿಪರೀತ ಕುದಿಯ ...ತೊಡಗಿದ. ಗೋಪಾಲಯ್ಯ, ಪಾಯ್ಸನ್ ರಾಮ, ...ಮುಲಾಮ, ಜೇಕೆ ಸೀನ ಇತ್ಯಾದಿ ತನ್ನ ಅಸಾಧ್ಯ ...ವೈರಿಗಳೆಲ್ಲರ ಕೊಂಡಿಯಂತಿರುವ ...ಸೂರಿಯನ್ನೇ ಮೊದಲು ತೆಗೆದು ...ಬಿಡುವುದು ಆತನ ತುರ್ತು ...ಅನಿವಾರ್ಯವಾಗಿ ಹೋಗಿತ್ತು.

ಅದಕ್ಕೆ ಆತ ಆಯ್ದುಕೊಂಡವನೇ ...ಸಣ್ಣಕ್ಕಿ ಬೈಲಿನ ಪೆದ್ದಗುಂಡ!




ವೆಂಕಟಸ್ವಾಮಿ ಆತನ ಹುಟ್ಟು ...ಹೆಸರು. ಮಚ್ಚು ಬೀಸಿದನೆಂದರೆ ...ಎದುರಿನವನ ತಲೆ ಹೋಳಾಗಬೇಕು. ...ವೀರೇಶ ಟಾಕೀಸ್ ಎದುರು ನಡೆದ ...ಬಯಲು ರವಿಯ ಕೊಲೆ ಮತ್ತು ...ಮಚ್ಚಿನ ಜೊತೆಗಿದ್ದು ಆತ ಮಾಡಿದ ...ಹಾವಳಿಗಳಿಂದಾಗಿ ಕಮಲಾನಗರ, ...ಕಾಮಾಕ್ಷಿಪಾಳ್ಯ, ಬಸವೇಶ್ವರನಗರ, ತಿಮ್ಮೇನಹಳ್ಳಿ ...ಏರಿಯಾಗಳಲ್ಲಿ ಆತನ ಹೆಸರಿಗೊಂದು ಟೆರ್ರರ್ ...ವ್ಯಾಪ್ತಿಯಾಗಿತ್ತು. ಈತನ ತಂದೆ ಗುರುಸ್ವಾಮಿ ಮಾಗಡಿ ...ರೋಡ್ ತಾವರೆಕೆರೆಯ ಬೈಚಗುಪ್ಪೆಯಲ್ಲಿ ಪ್ಲಂಬರ್ ...ಕೆಲಸ ಮಾಡಿಕೊಂಡಿದ್ದ. ಈತನ ತಾಯಿ ಡಿ ಗ್ರೂಪ್ ...ನೌಕರಾಳಿ ಸರ್ಕಾರಿ ಕೆಲಸದಲ್ಲಿದ್ದಾಳೆ. ಅಕ್ಕ ಗಾರ್ಮೆಂಟ್ ...ಕೆಲಸಕ್ಕೆ ಹೋಗುತ್ತಾಳೆ. ಈತನಿಗೊಬ್ಬ ಅಣ್ಣನೂ ಇದ್ದಾನೆ. ...ಕುಟ್ಟಾ ಕುಡುಕ.

ಮೂಲತಃ ಬೋವಿ ಜಾತಿಯ ವೆಂಕಟಸ್ವಾಮಿ ...ಉರ್ಫ್ ಪೆದ್ದಗುಂಡ ಏಳನೇ ತರಗತಿಯ ತನಕ ...ಕಮಲಾನಗರದ ಸರ್ಕಾರಿ ಶಾಲೆಗೆ ಹೋದ. ಗಲ್ಲಿಯ ...ಪೋಕರಿ ಹುಡುಗರ ಸಂಗಕ್ಕೆ ಬಿದ್ದು ಸಣ್ಣಪುಟ್ಟ ...ಹೊಡೆದಾಟಗಳಲ್ಲಿ ಕಾಣಿಸಿಕೊಂಡ. ಆ ಹೊತ್ತಿಗೆ ...ಕಮಲಾನಗರದ ಪಡ್ಡೆ ಹುಡುಗರ ಹಿಂಡೊಂದಕ್ಕೆ ...ನಾಯಕನಂತಿದ್ದವನು ದಿನೇಶ. ಈತನ ಜೊತೆಬಿದ್ದು ...ಹೊಡೆದಾಟ, ರೋಲ್‌ಕಾಲ್, ಕುಡಿತಕ್ಕೆ ಒಗ್ಗಿದ ...ಪೆದ್ದಗುಂಡನನ್ನು ಅದೇ ಏರಿಯಾದ ಮಂಜ ಎಂಬಾತ ...ನಡುರಸ್ತೆಯಲ್ಲಿ ಅಟ್ಟಾಡಿಸಿ ಚುಚ್ಚಿಬಿಟ್ಟ. ಈ ಮಂಜ ...ಅದೇ ಕಮಲಾನಗರದ ಪುರುಷಿ ಉರ್ಫ್ ...ಪುರುಷೋತ್ತಮ ಎಂಬಾತನ ಶಿಷ್ಯ. ಆ ಹೊತ್ತಿಗೆ ...ಕಮಲಾನಗರದ ಮಟ್ಟಿಗೆ ಜೇಕೆ ಶಿಷ್ಯನಂತಿದ್ದವನು ...ಪುರುಷಿ ಒಬ್ಬನೆ. ಜೇಡರಹಳ್ಳಿ ಕೃಷ್ಣಪ್ಪ ತನ್ನ ವಿರುದ್ಧ ...ತಿರುಗಿಬಿದ್ದ ಲೇಬರ್ ಮಂಜನನ್ನು ಹೊತ್ತೊಯ್ದು ...ತಿಂಗಳುಗಳ ಕಾಲ ಬಳಿ ಕೈಕಾಲು ಜಜ್ಜಿ ಬಿಸಾಡಿದಾಗ, ...ಕೃಷ್ಣಪ್ಪನ ಜೊತೆ ದಾಕು ಮತ್ತು ಪುರುಷಿ ಎಂಬಿಬ್ಬರು ಪಡ್ಡೆಗಳಿದ್ದರಲ್ಲ; ಅವರೊಂದಿಗೆ ಪೆದ್ದಗುಂಡ ಚಿಕ್ಕದೊಂದು ಕಾರಣಕ್ಕೆ ಟಕ್ಕರ್ ತಂದುಕೊಂಡ.



ಅದೊಂದು ಯಃಕಶ್ಚಿತ್ ಕ್ರಿಕೆಟ್ ಜಗಳವಾಗಿತ್ತು. ಕ್ರಿಕೆಟ್ ಕಚ್ಚಾಟಕ್ಕೆ ಇಳಿದಿದ್ದ ಪುರುಷಿಯ ಶಿಷ್ಯ ಮಂಜನನ್ನು ಪೆದ್ದಗುಂಡ ಕ್ರಿಕೆಟ್ ಮೈದಾನದಲ್ಲೇ ಅಟ್ಟಾಡಿಸಿಕೊಂಡು ಹೊಡೆದ. ಆ ಹೊತ್ತಿಗಿನ್ನೂ ಪೆದ್ದಗುಂಡನಿಗೆ ಬರೇ ಹದಿನೈದು ವರ್ಷ. ಒದೆ ತಿಂದ ಮಂಜ ಆದಾಗಿ ವಾರಕ್ಕೆ ಐದಾರು ಮಂದಿ ಪೋಕರಿ ಹುಡುಗರನ್ನು ಕಲೆ ಹಾಕಿದ್ದೇ ಕಮಲಾನಗರದ 'ಡಿ' ಬಸ್‌ಸ್ಟಾಪ್ ಸಂದಿಯಲ್ಲಿ ಪೆದ್ದಗುಂಡನನ್ನು ನೀರುಗಾಯಿ ಮಾಡಿಬಿಟ್ಟ. ಈ ಹೊಡೆದಾಟವೇ ಪೆದ್ದ ಗುಂಡನನ್ನು ಮಚ್ಚಿನ ಗ್ಯಾಂಗ್ ಸೇರಿಕೊಳ್ಳುವಂತೆ ಮಾಡಿಬಿಟ್ಟಿತು. ಜೇಕೆ ತಂಡವ ಪುರುಷಿಯನ್ನು ಎದುರಿಸಬೇಕೆಂದರೆ ಅದಕ್ಕೆ ಮಚ್ಚನಂಥ ವರ ಬೆಂಬಲ ಬೇಕೇಬೇಕು. ಹಾಗೆ ಪೆದ್ದಗುಂಡನನ್ನು ಕರೆತಂದು ಮಚ್ಚಾ ಮಂಜನಿಗೆ ತಗುಲಿ ಹಾಕಿದ್ದು ಅದೇ ಸಣ್ಣಕ್ಕಿ ಬಯಲಿನ ಬಾಯಿಬಡ್ಕ ಸೀನ ಎಂಬಾತ.

ಮುಂದೆ ಮಚ್ಚಿನ ಪರಮಾಪ್ತ ತಿಮ್ಮೇನಹಳ್ಳಿ ತಮ್ಮಯ್ಯನ ಕೊಲೆ ಯಾದಾಗ ಅದಕ್ಕೆ ಪ್ರತೀಕಾರ ಹೇಳುವ ಹುಮ್ಮಸ್ಸಿನಲ್ಲಿ ವಿನಾಕಾರಣ, ತಮ್ಮಯ್ಯನ ಕೊಲೆಗೆ ಏನೇನೂ ಸಂಬಂಧವಿಲ್ಲದ ಬಯಲುರವಿಯನ್ನು ವೀರೇಶ ಟಾಕೀಸ್ ಎದುರು ಇದೇ ಪೆದ್ದಗುಂಡ, ಬಾಯಿ ಬಡುಕ ಸೀನ, ಹೊಟ್ಟೆರಾಮ, ಟೀಸಿ ರಾಜ, ಕ್ಯಾಪ್ಟನ್ ರಾಜ, ದಿನೇಶ ಮುಂತಾದವರು ಸೇರಿ ನಡುರಸ್ತೆಯಲ್ಲೇ ಕತ್ತರಿಸಿ ಕೊಂದರು. ಈ ಕೇಸಿನಲ್ಲಿ ಎರಡು ವರ್ಷ ಜೈಲಿನಲ್ಲಿದ್ದ ಪೆದ್ದಗುಂಡ ಹೊರಬಂದವನೇ ತನ್ನ ಮನೆಯನ್ನು ಗೊಲ್ಲರಹಟ್ಟಿಗೆ ಶಿಫ್ಟ್ ಮಾಡಿದ.


ತಿಮ್ಮೇನಹಳ್ಳಿ ಸೂರಿ

ಅದಕ್ಕೂ ಮುನ್ನ ಶ್ವೇತಾ ಎಂಬ ಮರಾಠರ ಹುಡುಗಿಯನ್ನು ಪೆದ್ದಗುಂಡ ಅನಾಮತ್ತಾಗಿ ಪಟಾಯಿಸಿಬಿಟ್ಟಿದ್ದ. ಈಕೆ ದೂರದ ಚಿಕ್ಕಮಗಳೂರಿನ ಹುಡುಗಿ. ಈಕೆಯ ಅಕ್ಕನ ಗಂಡ ಕಮಲಾನಗರದಲ್ಲಿ ಮನೆ ಮಾಡಿಕೊಂಡಿದ್ದ. ಗಂಡನ ಹಿಂಸೆಯೋ ಅಥವಾ ವಿಪರೀತ ಕಷ್ಟವೋ ತನ್ನ ಎರಡನೇ ಹೆರಿಗೆಯ ಹೊತ್ತಿಗೆ ಅಕ್ಕ ಮನೋರೋಗಿ ಯಾಗಿದ್ದಳು. ಆಕೆಯ ನೆರವಿಗೆಂದು ಬೆಂಗಳೂರಿಗೆ ಬಂದ ಶ್ವೇತಾ ನೀರಿಗೆಂದು ಅಲ್ಲಿನ ಕೊಳಾಯಿಯೊಂದರ ಬಳಿ ಬಂದಾಗೆಲ್ಲ ಪೆದ್ದಗುಂಡನ ಗ್ಯಾಂಗ್ ಹಾವಳಿಯಿಡುತ್ತಿತ್ತು. ವಿಧಿಯೇ ಇಲ್ಲದೆ ಶ್ವೇತಾ ಪೆದ್ದಗುಂಡನ ವಶವಾಗಿ ಹೋದಳು.

ವಿಚಿತ್ರವೆಂದರೆ ಅಕ್ಕನ ಹೆರಿಗೆಗೆಂದು ಬಂದಿದ್ದ ತಂಗಿಯನ್ನು ಮದುವೆಯೇ ಆಗದೆ ಮನೆಯೊಂದನ್ನು ಮಾಡಿಟ್ಟುಕೊಂಡಿದ್ದ ಪೆದ್ದಗುಂಡ ಎಂಥಾ ಕ್ರಿಮಿಯೆಂದರೆ ತನ್ನನ್ನೇ ನಂಬಿಕೊಂಡಿದ್ದ ಪ್ರೇಯಸಿಯನ್ನೂ ಲೆಕ್ಕಿಸದೇ ಬಯಲುರವಿ ಕೊಲೆ ಕೇಸಿನಲ್ಲಿ ಭಾಗಿಯಾಗಿದ್ದ!

ಎರಡು ವರ್ಷಗಳ ಕಾಲ ಜೈಲಿಗೆ ಬುತ್ತಿ ಹೊತ್ತಳು ಶ್ವೇತಾ. ಹೊರಬಂದವನು ಏನೇನೋ ಭಾದೆ ಬಿದ್ದು ಮದುವೆಯಾದ. ಇನ್ನು ರೌಡಿಸಂ ಮಾಡೋಲ್ಲ ಎಂದೇ ಹೆಂಡತಿಗೆ ಭಾಷೆ ಕೊಟ್ಟಿದ್ದ. ಅದನ್ನು ನಂಬಿದ ಶ್ವೇತಾಳ ತಂದೆ ಪೆದ್ದಗುಂಡನಿಗೊಂದು ಆಟೋರಿಕ್ಷಾ ಕೊಡಿಸಿಕೊಟ್ಟರು. ಶ್ವೇತಾಳ ತಮ್ಮನೂ ಅಷ್ಟಿಷ್ಟು ನೆರವಾಗಿದ್ದ. ಇಷ್ಟಾಗ್ಯೂ ಹಳೇ ಚಾಳಿ ಬಿಡದೇ ಬಯಲುರವಿಯ ತಮ್ಮನ ಗೆಳೆಯನೊಬ್ಬನ ಮೇಲೆ ಪೆದ್ದಗುಂಡ ದಾಳಿ ಮಾಡಿಬಿಟ್ಟ. ಬಸವೇಶ್ವರನಗರ ಪೊಲೀಸ್ ಇನ್ಸ್‌ಪೆಕ್ಟರ್ ಶಿವಲಿಂಗೇಗೌಡರು 2005 ರ ಸೆಪ್ಟೆಂಬರ್‌ನಲ್ಲಿ ಪೆದ್ದಗುಂಡನನ್ನು ಎಳೆದೊಯ್ದು ಎರಡನೇ ಬಾರಿ ಜೈಲಿಗೆ ಹಾಕಿದ್ದಾರೆ. ಆತನ ಮೇಲೊಂದು ರೌಡಿ ಶೀಟ್ ಕೂಡ ತೆರೆದಿದ್ದಾರೆ.


ಪೆದ್ದಗುಂಡನ ಹೆಂಡತಿ

ಯಾವತ್ತು ಪೆದ್ದಗುಂಡ ಜೈಲು ಹೊಕ್ಕಿ ಕೂತನೋ ಆದಾಗಿ ತಿಂಗಳಿಗೇ ಮಚ್ಚ ಕೊಲೆಯಾಗಿ ಹೋದ. ಆ ಕೊಲೆಗೆ ಪ್ರತೀಕಾರವಾಗಿ ಅದೇ ಹುಚ್ಚು ಹುಮ್ಮಸ್ಸಿನಲ್ಲಿ ಕೋತಿರಾಮ, ತುರೆ, ಕೋಳಿ ಶಿವಾ, ಮಹೇಂದ್ರ ಮುಂತಾದವರು ಸೇರಿ ಲಗ್ಗೆರೆಯ ರಿಯಲ್ ಎಸ್ಟೇಟ್ ಏಜೆಂಟ್ ಮಂಡ್ಯ ಕೃಷ್ಣನನ್ನು ಕೊಂದರಲ್ಲ; ಆಗಲೂ ಪೆದ್ದಗುಂಡ ಜೈಲಲ್ಲೇ ಇದ್ದ. ತಮಾಷೆಯೆಂದರೆ ಈ ಬಗ್ಗೆ ಏನೇನೂ ಪರಿವೆಯಿಲ್ಲದ ರಾಜಗೋಪಾಲನಗರದ ಇನ್ಸ್‌ಪೆಕ್ಟರ್ ಭೋಪಯ್ಯ ಪೆದ್ದಗುಂಡನನ್ನೂ ಮಂಡ್ಯ ಕೃಷ್ಣನ ಕೊಲೆ ಆರೋಪಿಗಳ ಪಟ್ಟಿಗೆ ಸೇರಿಸಿಬಿಟ್ಟಿದ್ದರು. ಮಂಡ್ಯ ಕೃಷ್ಣನ ಕೊಲೆಯಾದ ಮೂರನೇ ದಿನಕ್ಕೇ ಪೆದ್ದಗುಂಡ ಜೈಲಿಂದ ಹೊರಬಂದ.

ರಿವೇಂಜ್ ಕಿಲ್ಲಿಂಗ್ಸ್ 28

ರಾ. ಸೋಮನಾಥ್

ಈ ಬಾರಿ ಸುಮ್ಮನೇ ಬಂದಿರಲಿಲ್ಲ. ಗೋಪಾಲಯ್ಯನೋ ಅಥವಾ ಕಡಬಗೆರೆ ರಾಮನೋ ತೆಗೆದೇ ತೇಗೀತಿನಿ ಎಂದು ಮಾತುಕೊಟ್ಟೇ ಬಂದಿದ್ದ. ಹಾಗೇ ಬಂದವನನ್ನು ಬಸವೇಶ್ವರನಗರ ಪೊಲೀಸರು ಬಿಡಬೇಕಲ್ಲ; ಎಳೆದೊಯ್ದಿದ್ದೇ ಮಾಗಡಿ ರಸ್ತೆಯ ತಾವರೆಕೆರೆಯಿಂದ ಆಚೆ ಬಿಟ್ಟು ಅದರ ವೀಡಿಯೋ ಚಿತ್ರೀಕರಣ ಮಾಡಿ 'ಇನ್ನೊಂದು ವರ್ಷ ಬೆಂಗಳೂರಿನ ಒಳಕ್ಕೆ ಬಂದರೆ ಎನ್‌ಕೌಂಟರ್ ಮಾಡಿ ಬೀಸಾಕ್ತೀವಿ' ಅಂತಲೇ ಎಚ್ಚರಿಸಿದ್ದರು. ಇದೇ ವೇಳೆಗೆ ಕೊರಂಗು ಮತ್ತು ಕೋತಿ ರಾಮರನ್ನು ಸಿಸಿಬಿ ಇನ್ಸ್‌ಪೆಕ್ಟರ್‌ಗಳಾದ ರೇವಣ್ಣ ಮತ್ತು ನಂಜುಂಡೇಗೌಡರು ಆಂಧ್ರದಿಂದ ಹಿಡಿದು ತಂದು ಜೈಲಿಗೆ ಹಾಕಿದ್ದರು. ಸುಂಕದಕಟ್ಟೆಯಲ್ಲಿ ಹಂಡೆ ಕುಮಾರನ ಜೊತೆ ಕೇಸು ಹಾಕಿಸಿಕೊಂಡು ಮಾರೇನಹಳ್ಳಿ ಜಗ್ಗನೂ ಜೈಲಿಗೆ ಬಂದಿದ್ದ. ಇಟ್ಟಮಡು ಗ್ಯಾಂಗ್‌ವಾರ್ ಕತ್ರಿಗುಪ್ಪೆ ಲಿಂಗನೂ ಜೈಲುಪಾಲಾಗಿದ್ದ. ಇವರೆಲ್ಲರಿಗೂ ಹೇಳಿ ಮಾಡಿಸಿದಂತಿದ್ದದ್ದು ಚಿತ್ರದುರ್ಗ ಜೈಲು. ಅವರೆಲ್ಲರೂ ಸೇರಿ ಫೀಲ್ಡಿಗೆ ಬಿಟ್ಟಿದ್ದೇ ಈ ಪೆದ್ದಗುಂಡನ್ನ!

ಕೋತಿರಾಮನಿಗೆ ಗೋಪಾಲಯ್ಯ ಮತ್ತು ಮುಲಾಮನ ಮೇಲೆ ಹಗೆಯಿತ್ತು. ಇಟ್ಟಮಡುವಿನಲ್ಲಿ ಲಿಂಗ ತಲೆ ಎತ್ತಬೇಕೆಂದರೆ ಸೈಕಲ್ ರವಿ ಸಾಯಲೇಬೇಕಿತ್ತು. ಜಾನಿಗೆ ಕಡಬಗೆರೆಯ ಪಾಯ್ಸನ್ ರಾಮ ಮುಗಿಯಬೇಕಿತ್ತು. ಎಲ್ಲಕ್ಕೂ ಮೊದಲು ಸೂರಿಯ ತಲೆ ತೆಗೀತೀನಿ ಎಂದು ಕೊರಂಗು ಕ್ರೈಂಸ್ಟೋರಿಯ ರಿಪೋರ್ಟರ್ ರಾ. ಪ್ರವೀಣ್ ಮುಂದೆಯೇ ಆಣೆ ಪ್ರಮಾಣ ಮಾಡಿದ್ದ!

ನಮ್ಮ ದುಷ್ಮನ್‌ಗಳ ಪೈಕಿ ಯಾರೇ ಸಿಕ್ಕರೂ ಅವನನ್ನು ಕತ್ತರಿಸಿ ಹಾಕು ಎಂದು ಎಲ್ಲರೂ ಪೆದ್ದಗುಂಡನನ್ನು ಛೂ ಬಿಟ್ಟರು. ಓಡಾಡಲು ಗಾಡಿ, ಖರ್ಚಿಗೆ ದುಡ್ಡು, ಹತ್ಯೆಗೆ ಲಾಂಗು, ಕಾಂಟ್ಯಾಕ್ಟಿಗೆ ಮೊಬೈಲು ಎಲ್ಲವೂ ಸಿಕ್ಕಿತೆಂದರೆ ಪೆದ್ದಗುಂಡನನ್ನು ಕೇಳಬೇಕೆ?

ಇದೇ ಹೊತ್ತಿಗೆ ತುಮಕೂರು ಜೈಲಿನಿಂದ ಸುಜೀತ್ ಹೊರಬಿದ್ದ. ಮೂಲತಃ ತುಮಕೂರಿನವನಾದ ಈ ಸುಜೀತ್ ಮಹಾನ್ ಚಾಣಾಕ್ಷ. ಗಡಿಪಾರಿನ ಹಂಗಿಲ್ಲದೇ ತನ್ನ ಗರ್ಭಿಣಿ ಹೆಂಡತಿಯ ಬಗ್ಗೆ ಯಾವುದೇ ಅಳುಕಿಲ್ಲದೇ ಬೇಟೆಗೆ ನಿಂತ ಪೆದ್ದಗುಂಡನ ಮನಸ್ಥಿತಿಯೇ ಅಂಥಾದ್ದು. ಅದು ವಿಕೃತಿಯೋ ಅಥವಾ ಘಾತಕ ಹುಚ್ಚೋ ಬಲ್ಲವರ್ಯಾರು? ಒಟ್ಟಿನಲ್ಲಿ ಆತ ಕೊಲ್ಲಬೇಕು!

ಒಂದು ಟಾಟಾ ಸುಮೋ ಮತ್ತು ನಾಲ್ಕು ಮಂದಿ ಹುಡುಗರನ್ನು ಟೀಸಿ ರಾಜ ರೆಡಿ ಮಾಡಿ ಕೊಟ್ಟರೆ ಉಳಿದವರನ್ನೆಲ್ಲ ಪೆದ್ದಗುಂಡನೇ ಜಮೆ ಮಾಡಿದ್ದಾನೆ. ಎಲ್ಲಾ ಸೇರಿ ಇಪ್ಪತ್ತೈದು ಮಂದಿಯ ತಂಡ ಬೇಟೆಗೆ ಅಣಿಯಾಯಿತು. ಒಂದು ಕ್ವಾಲೀಸ್‌ನಲ್ಲಿ ಪೆದ್ದಗುಂಡ, ಸುಜಿ, ರೇವ ಮತ್ತು ಕತ್ರಿಗುಪ್ಪೆ ಸೀನ ಕೂತರೆ ಇನ್ನೆರಡು ಟಾಟಾ ಸುಮೋಗಳಲ್ಲಿ ಹತ್ತತ್ತು ಮಂದಿ ಹೊಸಾ ಹುಡುಗರಿದ್ದರು. ಸತತ ಮೂರು ದಿನಗಳ ಕಾಲ ಫೀಲ್ಡ್ ಮಾಡಿದರಾದರೂ ಕಡಬಗೆರೆ ರಾಮನಾಗಲಿ, ಗೋಪಾಲಯ್ಯ ಆಗಲಿ ಸಿಗಲೇ ಇಲ್ಲ. ಆದರೆ ಗೋಪಾಲಯ್ಯ ಮನೆ ಬಳಿ ರಾಜ ಅಂತ ಒಬ್ಬ ಹುಡುಗನನ್ನು ಪೆದ್ದಗುಂಡ ಹಾಕಿದ್ದನಲ್ಲ; ಆತನ ಕೈಗೊಂದು ಮೊಬೈಲನ್ನೂ ಕೊಡಿಸಿದ್ದ.


ಗೋಪಾಲಯ್ಯ ತನ್ನ ಗಾಡಿಯಲ್ಲಿ ಕೂತು ಇನ್ನೇನು ಹೊರಡಬೇಕೆನ್ನುವಷ್ಟರಲ್ಲಿ ಮೆಸೇಜ್ ಕೊಡುವುದು ಆತನ ಕೆಲಸ. ಹಾಗೇ ಡ್ಯೂಟಿಗೆ ನಿಂತಿದ್ದ ರಾಜು 'ಬೆಳಿಗ್ಗೆಯಿಂದಾನೂ ಗೋಪಾಲಯ್ಯ ಮನೆ ಮುಂದೇನೇ ಒಬ್ಬನೇ ಮಾತಾಡ್ತಾ ನಿಂತವ್ನೆ' ಎಂದು ಮಾಹಿತಿ ಕೊಟ್ಟ. ಇನ್ನೇನು ಪೆದ್ದಗುಂಡ ಮತ್ತು ಸುಜಿ ಬೈಕ್ ಒಂದನ್ನು ಹತ್ತಿ ಲಾಂಗ್ ಎತ್ತಿಕೊಂಡು ಗೋಪಾಲಯ್ಯನ ಮೇಲೆ ದಾಳಿಗೆ ಹೋಗಬೇಕೆನ್ನುವಷ್ಟರಲ್ಲಿ, ಮನೆ ಮುಂದೆ ನಿಂತಿದ್ದ ಗೋಪಾಲಯ್ಯನಿಗೆ ಫೋನ್ ಬಂತೆಂದು ಹೆಂಗಸರು ಕರೆದುಬಿಟ್ಟರು. ಇನ್ನೇನು ದಾಳಿ ಮಾಡಬೇಕೆನ್ನುವಷ್ಟರಲ್ಲಿ ಗೋಪಾಲಯ್ಯ ಮನೆ ಹೊಕ್ಕು ಬಚಾವಾಗಿಬಿಟ್ಟ.

ಇದು ತಿಮ್ಮೇನಹಳ್ಳಿ ಸೂರಿ ಹತ್ಯೆಯ ಹಿಂದಿನ ದಿನದ ಪೆದ್ದಗುಂಡನ ದಿನಚರಿ. ಅತ್ಯಂತ ಶ್ರದ್ಧೆಯಿಂದ, ಯಾವುದೇ ಅಳುಕಿಲ್ಲದೇ ಕೊಲ್ಲುವ ಕೆಲಸಕ್ಕೆ ನಿಂತುಬಿಟ್ಟಿದ್ದ ಪೆದ್ದಗುಂಡ.

(ಮುಂದುವರೆಯುವುದು)

ಹುಣಸೂರು: ದಲಿತರ ಸ್ಮಶಾನವನ್ನೇ ನುಂಗಿದ ನಟರಾಜ್

ದಲಿತರಿಂದ ಕಿತ್ತುಕೊಳ್ಳಲು ಏನೂ ಸಿಗದಿದ್ದಾಗ ಕೊನೆಗೆ ಅವರ ಸ್ಮಶಾನವನ್ನೇ ಕಿತ್ತುಕೊಂಡಿದ್ದಾರೆ ಎಂದರೆ ಏನೆನ್ನಬೇಕು? ಬದುಕಿದ್ದಾಗಲಂತೂ ದಲಿತರಿಗೆ ಈ ದೇಶದಲ್ಲಿ ನೆಮ್ಮದಿ ಇಲ್ಲ. ಈಗ ಸತ್ತ ಮೇಲೆ ಅವರ ಹೆಣ ಹೂಳಲು ಜಾಗವೂ ಇಲ್ಲ! ನಂಬಲು ತುಸು ಕಷ್ಟವಾದರೂ ಇದು ಹುಣಸೂರಿನಲ್ಲಿ ನಡೆದ ಸತ್ಯ.


ನಟರಾಜ್

ದಲಿತರ ಸ್ಮಶಾನವನ್ನು ನುಂಗಿ ನೀರು ಕುಡಿದ ಆ ಮಹಾತ್ಮನ ಹೆಸರು ಹನಗೋಡು ನಟರಾಜ್. ಒಂದು ದಿನ ಜೆಡಿ(ಎಸ್) ಕಾರ್ಯಕರ್ತನಂತೆ, ಇನ್ನೊಂದು ದಿನ ವಿವೇಕ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ನಾಯಕನಂತೆ, ಮತ್ತೊಂದು ದಿನ ಪತ್ರಕರ್ತನಂತೆ-ಹೀಗೆ ದಿನಕ್ಕೊಂದು ಚಹರೆ ಬದಲಾಯಿಸುವ ಈ ನಿಸ್ಸೀಮ ಹಣ-ಆಸ್ತಿ ಕಬಳಿಕೆಗೆ ಏನು ಮಾಡಲೂ ಸಿದ್ಧ. ಸಚಿವ ಜಿ.ಟಿ. ದೇವೇಗೌಡ ಇವನ ಬೆನ್ನ ಹಿಂದಿರುವುದರಿಂದ ಇವನ ಅವಾಂತರಗಳು ಎಲ್ಲೆ ಮೀರಿ ನಡೆಯುತ್ತಿವೆ. ಎಲ್ಲ ಕಡೆ ಕೆರೆದದ್ದು ಮುಗಿದಾಗ ಅವನ ಕಣ್ಣಿಗೆ ಬಿದ್ದದ್ದು ಹುಣಸೂರು ತಾಲ್ಲೂಕು ಹನಗೋಡು ಗ್ರಾಮದಲ್ಲಿನ ಸರ್ವೆ ನಂ 69ರಲ್ಲಿ ಇರುವ ಸುಮಾರು 4 ಎಕರೆ 6 ಗುಂಟೆಯಷ್ಟಿರುವ ದಲಿತರ ಸ್ಮಶಾನ. ವಾಸ್ತವದಲ್ಲಿ ಈ ಜಮೀನನ್ನು ಸರ್ಕಾರವೇ ದಲಿತರ ಸ್ಮಶಾನಕ್ಕಾಗಿ ನೀಡಿತ್ತು. ಆದರೆ ಈಗ ಅದು ಕಂತ್ರಿ ನಟರಾಜನ ತೋಟವಾಗಿ ಪರಿವರ್ತನೆಯಾಗಿದೆ.


ಜಿ.ಟಿ.ದೇವೇಗೌಡ

ನಟರಾಜನ ಈ ದುಷ್ಕೃತ್ಯವನ್ನು ಅನೇಕ ಪ್ರಗತಿಪರ ಸಂಘಟನೆಗಳು ಖಂಡಿಸಿದ್ದಾವಲ್ಲವೇ, ರಾಜ್ಯಪಾಲರಿಗೆ, ಗೃಹ ಸಚಿವರಿಗೆ, ಕಂದಾಯ ಮಂತ್ರಿಗಳಿಗೆ, ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ದಲಿತರಿಗಾದ ಅನ್ಯಾಯದ ಬಗ್ಗೆ ತಿಳಿಸಲಾಗಿದೆ. ಆದರೆ ಯಾರೂ ಅತ್ತ ಗಮನಹರಿಸದಿರುವುದು ಅವರ ದಲಿತ ವಿರೋಧಿ ಭಾವಕ್ಕೆ ಹಿಡಿದ ಕನ್ನಡಿಯಾಗಿದೆ.

ಈ ಬಗ್ಗೆ ತಹಶೀಲ್ದಾರ್ ಸತೀಶ್ ಕುಮಾರ್‌ನನ್ನು ಕೇಳಿದರೆ ದಲಿತರ ಸ್ಮಶಾನ ಕಬಳಿಕೆಯಾಗಿರುವುದು ನಿಜ. ಈ ಬಗ್ಗೆ ತನಿಖೆ ಮಾಡಿ ಮುಂದಿನ ಕ್ರಮಕ್ಕಾಗಿ ಮೇಲಾಧಿಕಾರಿ ಮತ್ತು ಸರ್ಕಾರಕ್ಕೆ ವರದಿ ಮಾಡಿರುವುದಾಗಿ ಸಿಂಪಲ್ ಉತ್ತರ ಕೊಟ್ಟು ಕೈ ತೊಳೆದುಕೊಳ್ಳುತ್ತಾರೆ.


ತಹಶೀಲ್ದಾರ್ ಸತೀಶ್ ಕುಮಾರ್

ದಲಿತರ ಸ್ಮಶಾನ ನಟರಾಜನ ತೋಟವಾಗಿ ಮಾರ್ಪಟ್ಟು, ಜನ ಅದನ್ನು ವಿರೋಧಿಸಿ ಬೊಬ್ಬೆ ಹಾಕುತ್ತಿದ್ದರೂ ಕೇಳಿಸಿಕೊಳ್ಳಲೂ ಈ ಅಧಿಕಾರಿಗಳು ತಯಾರಿಲ್ಲ ಎಂದರೆ ಅದಕ್ಕೆ ಪ್ರಧಾನವಾಗಿ ಎರಡು ಕಾರಣಗಳಿವೆ. ಒಂದನೆಯದು, ಅದು ದಲಿತರ ಸ್ಮಶಾನವಾಗಿರುವುದು. ಅದೇ ಮೇಲ್ಜಾತಿಯವರ ಸ್ಮಶಾನವನ್ನು ದಲಿತರು ಕಬಳಿಸಿದ್ದರೆ ಇಷ್ಟು ಹೊತ್ತಿಗಾಗಲೇ ದಲಿತರ ಹೆಣಗಳು ಬಿದ್ದಿರುತ್ತಿದ್ದವು. ಜಿಲ್ಲಾಧಿಕಾರಿ, ತಹಶೀಲ್ದಾರ್, ಮಂತ್ರಿಗಳಾದಿಯಾಗಿ ಬಂದು ಮೇಲ್ಜಾತಿಯವರ ಪರ ನಿಲ್ಲುತ್ತಿದ್ದರು. ಈಗ ಕಬಳಿಕೆಯಾಗಿರುವುದು ದಲಿತರ ಸ್ಮಶಾನವಾದ್ದರಿಂದ ಅದಕ್ಕೆ ಯಾರೂ ಕಿವಿಗೊಡದಿರುವುದು ಅವರ ಜಾತಿವಾದಿ ರಾಜಕೀಯಕ್ಕೆ ಹಿಡಿದ ಕನ್ನಡಿಯಾಗಿದೆ. ಅಲ್ಲದೇ ಇದು ಸಂವಿಧಾನ ವಿರೋಧಿ ಕೂಡ. ಇನ್ನು ಎರಡನೇ ಕಾರಣ ಎಂದರೆ ಜಿ.ಟಿ.ದೇವೇಗೌಡ ಎಂಬ ದಲಿತ ವಿರೋಧಿ ಸಚಿವ ನಟರಾಜನ ಹಿಂದಿರುವುದು. ಆ ಜಮೀನಿನಲ್ಲಿ ಸಚಿವರಿಗೆ ಎಷ್ಟು ಪರ್ಸೆಂಟೇಜ್ ಸಿಕ್ಕಿದೆಯೋ ಗೊತ್ತಿಲ್ಲ. ಆದರೆ ಈ ವಿಚಾರದಲ್ಲಿ ಅವರು ನಟರಾಜನನ್ನು ಬೆಂಬಲಿಸುತ್ತಿರುವುದನ್ನು ನೋಡಿದರೆ ಆ ಅನುಮಾನ ಬರದೇ ಇರಲಾದರು. ಇದರಿಂದ ಅಧಿಕಾರಿಗಳೂ ದಲಿತರಿಗೆ ನ್ಯಾಯ ಒದಗಿಸುವ ಗೋಜಿಗೆ ಹೋಗಿಲ್ಲ.

ಒಟ್ಟಿನಲ್ಲಿ ಜನರಲ್ಲಿ ಇದರ ವಿರುದ್ಧ ಕೋಪ ಹೆಪ್ಪುಗಟ್ಟುತ್ತಿದೆ. ಯಾವಾಗ ಸ್ಫೋಟಗೊಳ್ಳುತ್ತೋ ಗೊತ್ತಿಲ್ಲ. ಮುಂದೊಂದು ದಿನ ದಲಿತರೆಲ್ಲ ಒಟ್ಟಾಗಿ ನಟರಾಜನ ಬಟ್ಟೆ ಬಿಚ್ಚಿ, ಚಪ್ಪಲಿ ಹಾರ ಹಾಕಿ ಇಡೀ ಹುಣಸೂರು ತಾಲ್ಲೂಕಿನಿಂದಲೇ ಓಡಿಸಿದರೂ ಆಶ್ಚರ್ಯವಿಲ್ಲ.

-ವರದಿಗಾರ

ದೇವನಹಳ್ಳಿ: ಪೊಲೀಸರ ಎದುರೇ ದಲಿತರ ಮೇಲೆ ಹಲ್ಲೆ

ಬೆಂಗಳೂರಿನ ಸೆರಗಿನಲ್ಲಿರುವ ದೇವನಹಳ್ಳಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಹಸಿರು ನಿಶಾನೆ ಸಿಗುತ್ತಿದ್ದಂತೆ ಆ ಭಾಗದ ರೈತರು, ದಲಿತರು ತಮ್ಮ ಭೂಮಿ ಕಳೆದುಕೊಂಡು ಬೀದಿಪಾಲಾಗುವ ಪ್ರಕ್ರಿಯೆಯೂ ಪ್ರಾರಂಭವಾಯಿತು. ಅಲ್ಲಿನ ಜಿಲ್ಲಾ ಪಂಚಾಯಿತಿ ಸದಸ್ಯ ಬಿ. ಮುನೇಗೌಡ ಎಂಬ ಭೂಗಳ್ಳ ಥೇಟ್ ದೇವನಹಳ್ಳಿಯ ಶಾಸಕನಂತೆ ಪೋಸು ನೀಡುತ್ತಾ ದಲಿತರ ಭೂಮಿಯನ್ನು ಮೋಸ ವಂಚನೆಗಳ ಮೂಲಕ ಕಿತ್ತುಕೊಂಡು ಅದೆಷ್ಟೋ ದಲಿತರನ್ನು ಬೀದಿಪಾಲು ಮಾಡಿ ಕೋಣನಂತೆ ಕೊಬ್ಬಿದ್ದಾನೆ. ತನ್ನ ಅನ್ಯಾಯ, ಮೋಸ, ವಂಚನೆಗಳನ್ನು ಪ್ರಶ್ನಿಸುವವರಿಗೆ ತಕ್ಕ ಶಾಸ್ತಿ ಮಾಡಲು ಪುಡಿ ಗೂಂಡಾಗಳ ದೊಡ್ಡ ದಂಡನ್ನೆ ಸಾಕಿಕೊಂಡಿದ್ದಾನೆ. ಪ್ರಶ್ನಿಸಿದವರನ್ನೆಲ್ಲಾ ತೋಳ್ಬಲ ಪ್ರದರ್ಶಿಸಿ ಬಗ್ಗು ಬಡಿಯುವ ಅವನ ಪ್ರವೃತ್ತಿಯನ್ನು ನೋಡಿದರೆ ಅವನು ರಾಜಕಾರಣಿಯೋ ಅಥವಾ ರೌಡಿಯೋ ಎಂಬ ಅನುಮಾನ ಬರದೇ ಇರಲಾರದು.

ಮೊನ್ನೆ ನಡೆದ ಒಂದು ಘಟನೆಯನ್ನೇ ನೋಡಿ. ಇವನ ದೌರ್ಜನ್ಯಗಳನ್ನು ಪ್ರತಿಭಟಿಸಿದ ಒಂದೇ ಕಾರಣಕ್ಕೆ ಕೃಷ್ಣಮೂರ್ತಿ ಎಂಬ ದಲಿತ ಮುಖಂಡನನ್ನು ಮತ್ತವರ ಕುಟುಂಬವನ್ನೂ ಹಿಗ್ಗಾಮುಗ್ಗಾ ಥಳಿಸಿ ಮಾರಣಾಂತಿಕ ಹಲ್ಲೆ ನಡೆಸಿದೆ ಮುನೇಗೌಡನ ರೌಡಿ ಗ್ಯಾಂಗ್. ಕೃಷ್ಣಮೂರ್ತಿ ಮಾಡಿದ ತಪ್ಪೆಂದರೆ ಮುನೇಗೌಡ ದಲಿತರಿಂದ ಅನ್ಯಾಯವಾಗಿ ಕಬಳಿಸಿದ ಹತ್ತಾರು ಎಕರೆ ಜಮೀನನ್ನು ಬಿಡಿಸಿ ದಲಿತರಿಗೆ ಮರಳಿಸುವ ಸಲುವಾಗಿ ಕೋರ್ಟಿಗೆ ಹೋದದ್ದು. ಇದರಿಂದ ಕೆರಳಿದ ಮುನೇಗೌಡ ಕೃಷ್ಣ ಮೂರ್ತಿಯ ದನಿಯನ್ನು ಶಾಶ್ವತವಾಗಿ ಬಂದ್ ಮಾಡಲು ಮೊನ್ನೆ ಏಪ್ರಿಲ್ ಎರಡರಂದು ಮಧ್ಯಾಹ್ನ 3 ಗಂಟೆಯ ಹೊತ್ತಿಗೆ ಸುಮಾರು 20 ರಿಂದ 30 ಗೂಂಡಾಗಳಿರುವ ಗ್ಯಾಂಗನ್ನು ಛೂ ಬಿಟ್ಟಿದ್ದಾನೆ. ಈ ದಾಳಿ ಎಷ್ಟು ಭೀಕರವಾಗಿತ್ತೆಂದರೆ, ನೇರವಾಗಿ ಕೃಷ್ಣಮೂರ್ತಿಯ ಮನೆಗೆ ಬಂದ ಈ ಗ್ಯಾಂಗು ಕೃಷ್ಣಮೂರ್ತಿಯನ್ನು ಒಳಗೊಂಡಂತೆ ಇಡೀ ಕುಟುಂಬವನ್ನು ಮನೆಯೊಳಗೆ ಕೂಡಿ ಹಾಕಿ, ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದೆ. ಅವರನ್ನು ಬಿಡಿಸಿಕೊಳ್ಳಲು ಬಂದ ಸಾರ್ವಜನಿಕರಿಗೂ ಮಚ್ಚು, ರಾಡು ತೋರಿಸಿ ಭಯ ಭೀತರನ್ನಾಗಿ ಮಾಡಿದೆ.

ಇಂಥ ಪರಿಸ್ಥಿತಿಯಲ್ಲಿ ಹೇಗೋ ದೇವನಹಳ್ಳಿ ಪೊಲೀಸ್ ಸ್ಟೇಷನ್‌ಗೆ ಸುದ್ದಿ ಮುಟ್ಟಿಸುವಲ್ಲಿ ಕೃಷ್ಣಮೂರ್ತಿ ಯಶಸ್ವಿಯಾಗಿದ್ದಾರೆ. ಬಹಳ ತಡವಾಗಿ ಬಂದ 4-5 ಜನರ ಪೊಲೀಸ್ ತಂಡ ಹಲ್ಲೆ ನಡೆಸುವವರನ್ನು ಬಂಧಿಸುವುದನ್ನು ಬಿಟ್ಟು ಮೂಕಪ್ರೇಕ್ಷಕರಂತೆ ಹಲ್ಲೆಯನ್ನು ಸಿನಿಮಾ ನೋಡಿದಂತೆ ನೋಡುತ್ತಾ ನಿಂತಿದೆ. ಪೊಲೀಸರ ಎದುರಿಗೇ ಕೃಷ್ಣಮೂರ್ತಿಯವರ ಇಡೀ ಕುಟುಂಬ ಹಲ್ಲೆಗೊಳಗಾಗಬೇಕಾದ ದಾರುಣ ಸ್ಥಿತಿ ಬಂದೊದಗಿತು. ಮನೆಯಲ್ಲಿದ್ದ ಬೆಲೆಬಾಳುವ ವಸ್ತುಗಳು, ದಾಖಲೆ ಪತ್ರಗಳು, ಕೋರ್ಟಿಗೆ ಸಲ್ಲಿಸಬೇಕಿದ್ದ ದಾಖಲೆಗಳು- ಎಲ್ಲವೂ ಪೊಲೀಸರ ಎದುರಿನಲ್ಲೇ ಭಸ್ಮವಾದವು. ಸ್ವಲ್ಪ ಹೊತ್ತಿನ ನಂತರ ದೇವನಹಳ್ಳಿಯ ಪೊಲೀಸ್ ಸ್ಟೇಷನ್‌ನಿಂದ ಫೋನ್ ಬಂದ ಕೂಡಲೇ ಇದ್ದ 4-5 ಜನ ಪೊಲೀಸರೂ ಒಬ್ಬೊಬ್ಬರಾಗಿ ಹೊರಟುಹೋದರು. ಪೊಲೀಸ್ ಹಾಗೂ ಸಾರ್ವಜನಿಕರ ಎದುರಿಗೇ ಕೃಷ್ಣಮೂರ್ತಿಯ ಮನೆಯನ್ನು ಧ್ವಂಸ ಮಾಡಿ, ಆತನಿಗೆ ಜೀವ ಬೆದರಿಕೆ ಒಡ್ಡಿ ಅಲ್ಲಿಂದ ಗ್ಯಾಂಗ್ ಕಾಲ್ತೆಗೆದಿದೆ. ಇಷ್ಟಕ್ಕೂ, ಪೊಲೀಸರು ಅಲ್ಲಿಗೆ ಬಂದದ್ದು ಹಲ್ಲೆಗೊಳಗಾಗುತ್ತಿದ್ದವರಿಗೆ ರಕ್ಷಣೆ ನೀಡಲೋ ಅಥವಾ ಹಲ್ಲೆ ಮಾಡುತ್ತಿದ್ದವರಿಗೆ ರಕ್ಷಣೆ ನೀಡಲೋ


ಹಲ್ಲೆಗೊಳಗಾದ ಕೃಷ್ಣಮೂರ್ತಿಯವರ ಕುಟುಂಬ

ಗೊತ್ತಾಗಲಿಲ್ಲ! ನಂತರ ತೀರಾ ಗಂಭೀರವಾಗಿ ಗಾಯ ಗೊಂಡಿದ್ದ ಕೃಷ್ಣಮೂರ್ತಿ ಹಲ್ಲೆಯ ಹಿಂದಿನ ನಿಜವಾದ ವ್ಯಕ್ತಿಯಾದ ಜಿಲ್ಲಾ ಪಂಚಾಯತಿ ಸದಸ್ಯ ಬಿ. ಮುನೇಗೌಡನನ್ನೂ ಸೇರಿಸಿ ಕಂಪ್ಲೇಂಟ್ ನೀಡಲು ದೇವನಹಳ್ಳಿ ಪೊಲೀಸ್ ಸ್ಟೇಷನ್‌ಗೆ ಹೋಗಿದ್ದಾರೆ. ಆಗ ದೂರು ಸ್ವೀಕರಿಸದ ಪೊಲೀಸರು ಕೃಷ್ಣಮೂರ್ತಿಯ ವಿರುದ್ಧವೇ ಹರಿಹಾಯ್ದು ಮುನೇಗೌಡನ ಹೆಸರನ್ನು ಕಂಪ್ಲೇಂಟ್‌ನಲ್ಲಿ ಸೇರಿಸದಂತೆ ತಾಕೀತು ಮಾಡಿದ್ದಾರೆ. ಕೊನೆಗೂ ಮುನೇಗೌಡನ ಹೆಸರನ್ನು ತೆಗೆಸಿ ನಂತರ ಕಂಪ್ಲೇಂಟ್ ತೆಗೆದುಕೊಂಡಿದ್ದಾರೆ. ಆದರೆ ಹಲ್ಲೆ ನಡೆಸಿದವರೆಲ್ಲರೂ ರಾಜಾರೋಷ ವಾಗಿ ಓಡಾಡುತ್ತಿದ್ದಾರೆ. ಹಲ್ಲೆಗೊಳಗಾದವರು ಮಾತ್ರ ಜೀವ ಕೈಯಲ್ಲಿ ಹಿಡಿದುಕೊಂಡು ಬದುಕುವ ಹೀನಸ್ಥಿತಿಗೆ ದೂಡಲ್ಪಟ್ಟಿದ್ದಾರೆ.

ಒಟ್ಟಿನಲ್ಲಿ ದಲಿತರ ಮೇಲಿನ ದೌರ್ಜನ್ಯಗಳು ದೇಶದಲ್ಲಿ ದಿನೇದಿನೇ ಹೆಚ್ಚಾಗುತ್ತಿರುವ ಒಂದು ಸಂಕೇತವಿದು. ಪೊಲೀಸ್ ಪಡೆ ಹೀಗೆ ದಲಿತರ ಮೇಲೆ ಹಲ್ಲೆ ಮಾಡುವವರಿಗೆ ಬೆಂಗಾವಲಾಗಿ ನಿಲ್ಲುತ್ತಿರುವ ಬಗ್ಗೆ ದಲಿತರ ಉದ್ಧಾರದ ಬಗ್ಗೆ ಮೈಲುದ್ದ ಭಾಷಣ ಬಿಗಿಯುವ ಎಂ.ಪಿ. ಪ್ರಕಾಶ್ ಏನನ್ನುತ್ತಾರೆ?

-ವರದಿಗಾರ


ಕೊಳ್ಳಿ ಇಡುತ್ತಿರುವ ಮುತಾಲಿಕ್

ಹುಬ್ಬಳ್ಳಿ

ಪ್ರಮೋದ್ ಮುತಾಲಿಕ್ ಕುಂಡೆ ಮೇಲೆ ಕುರ ಎದ್ದಂತೆ ಆಡುತ್ತಿದ್ದಾನೆ. ಏಕೆಂದರೆ, ಬಹಳ ದಿನಗಳಿಂದ ಹುಬ್ಬಳ್ಳಿಯಲ್ಲಿ ಹಿಂದೂ-ಮುಸ್ಲಿಮರು ಯಾವ ಗಲಭೆಗಳೂ ಇಲ್ಲದಂತೆ ಒಂದಿಷ್ಟು ನೆಮ್ಮದಿಯಿಂದ ಬದುಕುತ್ತಿರುವುದು. ಎರಡೂ ಕೋಮಿನವರು ಸೌಹಾರ್ದಯುತವಾಗಿ ಬದುಕುತ್ತಾರೆಂದರೆ ಕೋಮುವಾದಿ ಚೆಡ್ಡಿಗಳಿಗೆ ಕುರ,ತುರಿಕೆ ಬರುವುದು ಸಹಜವೇ ಬಿಡಿ. ಹಾಗಾಗಿಯೇ ಅವರು ಒಂದಿಲ್ಲೊಂದು ಕ್ಯಾತೆ ತೆಗೆದು ಗಲಭೆ ಎಬ್ಬಿಸಲು ಸದಾ ಪ್ರಯತ್ನಿಸುತ್ತಿರುತ್ತಾರೆ.

ಪ್ರಾಯಶಃ ಈಗ ಹುಬ್ಬಳ್ಳಿಯಲ್ಲಿ ಗಲಭೆ ಎಬ್ಬಿಸುವುದಕ್ಕೆ ಬೇರೆ ಯಾವ ವಿಚಾರವೂ ಸಿಗಲಿಲ್ಲ ಅಂತ ಕಾಣುತ್ತೆ. ಹಾಗಾಗಿ ನಗರದ ವೀರಾಪುರ ಓಣಿಯ ಸರಕಾರಿ ಕನ್ನಡ ಗಂಡುಮಕ್ಕಳ ಶಾಲೆ ನಂ 4ರ ಶಾಲಾ ಮೈದಾನಕ್ಕೆ ಸಂಬಂಧಿಸಿದಂತೆ ವಿವಾದ ಸೃಷ್ಟಿಸಿ ಗಲಭೆಗೆ ಬುನಾದಿ ನಿರ್ಮಿಸಲು ಖುದ್ದು ಮುತಾಲಿಕನೇ ಹೊರಟಿದ್ದಾನೆ. ಇವನ ಮಂಗಾಟಕ್ಕೆ ಕಡಿವಾಣ ಹಾಕಲು ನಗರದ ಪ್ರಗತಿಪರರು, ಬುದ್ಧಿಜೀವಿಗಳು ಸಜ್ಜಾಗುತ್ತಿದ್ದಾರೆ.

ಹಿನ್ನೆಲೆ: ಹುಬ್ಬಳ್ಳಿಯ ವೀರಾಪುರ ಓಣಿಯಲ್ಲಿ ಒಂದು ಸರ್ಕಾರಿ ಕನ್ನಡ ಗಂಡುಮಕ್ಕಳ ಶಾಲೆ ನಂ. 4 ಇದೆ. ಈ ಶಾಲೆಗೆ ತನ್ನದೇ ಆದ ಚರಿತ್ರೆ ಇದೆ. 1885ರಲ್ಲಿಯೇ ಸ್ಥಾಪಿತವಾದ ಈ ಶಾಲೆ ಈವರೆಗೆ ಅನೇಕ ಮೇಧಾವಿಗಳನ್ನು, ಬುದ್ಧಿಜೀವಿಗಳನ್ನು, ಸ್ವಾತಂತ್ರ್ಯ ಹೋರಾಟಗಾರರನ್ನು ನಾಡಿಗೆ ಕೊಡುಗೆಯಾಗಿ ಕೊಟ್ಟಿದೆ. ಹಿರಿಯ ಕಾರ್ಮಿಕ ಧುರೀಣ ಹಾಗೂ ಸ್ವಾತಂತ್ರ್ಯ ಹೋರಾಟಗಾರ ದಿವಂಗತ ಎ.ಜೆ. ಮುಧೋಳ್, ಗೋವಾ ವಿಮೋಚನಾ ಚಳವಳಿಯಲ್ಲಿ ಮುಂಚೂಣಿಯಲ್ಲಿದ್ದ ದಿವಂಗತ ಜೆ.ಪಿ. ಜವಳಿ, ಇಂತಹ ಮಹನೀಯರಲ್ಲಿ ಕೆಲವರು. 1967ರಲ್ಲಿ ಅಂದಿನ ಸರ್ಕಾರ 20 ಗುಂಟೆ ಜಾಗ ಖರೀದಿಸಿ ಶಾಲೆಯನ್ನು ವಿಸ್ತರಿಸಿ ಸರಕಾರಿ ಕನ್ನಡ ಹೆಣ್ಣು ಮಕ್ಕಳ ಶಾಲೆಯನ್ನೂ ಪ್ರಾರಂಭಿಸಿತು. ಪ್ರಸ್ತುತವಾಗಿ ಈ ಶಾಲೆಯಲ್ಲಿ 1300 ವಿದ್ಯಾರ್ಥಿ-ವಿದ್ಯಾರ್ಥಿನಿಯರು ಓದುತ್ತಿದ್ದು 25 ಜನ ಶಿಕ್ಷಕ-ಶಿಕ್ಷಕಿಯರಿದ್ದಾರೆ.



ಭೂ ದಾಖಲೆಗಳ ಸಹಾಯಕ ನಿರ್ದೇಶಕರು(ನಗರ ಮೋಜಣಿ) ಸಲ್ಲಿಸಿದ ದಾಖಲೆಗಳ ಪ್ರಕಾರ ಸರ್ವೇ ನಂ.2553ರಲ್ಲಿ ಇರುವ 20 ಗುಂಟೆ ಜಾಗ ಮಾತ್ರ ಶಾಲೆಗೆ ಸೇರಿದ ಅಧಿಕೃತ ಆಸ್ತಿ. ಇದಕ್ಕೆ ಹೊಂದಿಕೊಂಡು ಇರುವ ಜಾಗ ಮೊದಲು ವೀರಭದ್ರಪ್ಪ ಬಾಳಿಕಾಯಿ ಎಂಬುವವರಿಗೆ ಸೇರಿದ ಹೊಲವಾಗಿತ್ತು, ಇದು ಸುಮಾರು ಒಂದೂವರೆ ಎಕರೆಯಷ್ಟಿದ್ದು ಇದನ್ನು ಹಂಚನಾಳ ಹಾಗೂ ನದಾಫ ಎನ್ನುವವರಿಗೆ ಶೆಟ್ಟಿ ಜಮೀನನ್ನೇ ಮಾರಾಟ ಮಾಡಲಾಯಿತು. ನಂತರ ಈ ಜಾಗವನ್ನು (ಸಿಟಿ ಸರ್ವೆ ನಂ. 2509/6, 2509/5, 2509/4) ಮಹಾನಗರ ಪಾಲಿಕೆ ಖರೀದಿಸಿತು. ಇದಕ್ಕೆ ಹೊಂದಿಕೊಂಡಿದ್ದ ಸಿಟಿ ಸರ್ವೆ ನಂ. 2509/2 ಹಾಗೂ 2509/3ರ ಜಾಗ ಪವಾರ್ ಎಂಬುವವರಿಗೆ ಸೇರಿದ್ದು ಅದನ್ನು ಮಹಾನಗರ ಪಾಲಿಕೆ ತನ್ನ ವಶಕ್ಕೆ ತೆಗೆದುಕೊಂಡು ಮಾಲೀಕರಿಗೆ ಪರಿಹಾರವನ್ನು ನೀಡಿತು. ಈಗ ಅದೆಲ್ಲಾ ಪಾಲಿಕೆಯ ಸ್ವತ್ತಾಗಿದ್ದರಿಂದ ಅದು ತನ್ನ ಜಾಗದಲ್ಲಿ ಮಾತ್ರವಲ್ಲ, ಶಾಲೆಯ ಜಾಗದಲ್ಲಿಯೂ ಪಾಯಿಖಾನೆ, ಮತ್ತಿತರ ಕಟ್ಟಡಗಳನ್ನು ಕಟ್ಟಿದೆ. ಅಲ್ಲದೆ ರಂಗಾಬುದ್ದಿ ಎಂಬ ಚೆಡ್ಡಿ ಪಾಲಿಕೆಯಲ್ಲಿ ಸದಸ್ಯನಾಗಿದ್ದ ಸಮಯದಲ್ಲಿ ತನ್ನ ಸ್ವಜಾತಿ ಬಂಧುವಿಗೆ ಶಾಲೆಗೆ ಸೇರಿದ ಜಾಗದಲ್ಲಿಯೇ ಮನೆ ಕಟ್ಟಿಸಿಕೊಟ್ಟ. ಇನ್ನೊಂದು ಪಕ್ಕದಲ್ಲಿ ದೇವಸ್ಥಾನ ತಲೆ ಎತ್ತಿತ್ತು. ಅದಕ್ಕೆ ಹೊಂದಿಕೊಂಡೇ ಗಂಗಯ್ಯ ಹಿರೇಮಠ್ ಎಂಬುವವನು ಗುಡಿಯಲ್ಲಿ ದಕ್ಷಿಣೆ ಎತ್ತುತ್ತಾ ಒಂದು ಗೋಡೌನ್ ನಿರ್ಮಿಸಿ ಉಸುಕು, ಜೆಲ್ಲಿ ಇಟ್ಟಿಗೆಗಳ ವ್ಯಾಪಾರ ಶುರು ಮಾಡಿಬಿಟ್ಟ. ಹೀಗೆ ಒಂದರ ಮೇಲೊಂದು ಕಟ್ಟಡ ಏಳುತ್ತಾ ಹೋದವು.

ಸರ್ವೆ ನಂ. 2509ರಲ್ಲಿ ರಾಯಚೂರಿನಿಂದ ಕೆಲಸ ಅರಸಿ ವಲಸೆ ಬಂದ ಅನೇಕ ಬಡ ಮುಸ್ಲಿಂ ಕುಟುಂಬಗಳು ವಾಸಿಸುತ್ತಿವೆ. ಸ್ವತಃ ಮುಧೋಳ್‌ರವರ ಕುಟುಂಬವೂ ಹೀಗೆ ವಲಸೆ ಬಂದದ್ದೆ. ಮುಸ್ಲಿಮರು ಹೀಗೆ ಸರ್ಕಾರಿ ಜಮೀನಿನಲ್ಲಿ ವಾಸಿಸುತ್ತಿರುವುದು ಚಡ್ಡಿಗಳಿಗೆ ಹೊಟ್ಟೆಯಲ್ಲಿ ಬೆಂಕಿ ಇಟ್ಟಂತಾಗಿ ಕೂಗಾಟ-ರೇಗಾಟ ಆರಂಭಿಸಿದ್ದಾರೆ. ಅವರು ವಾಸಿಸುತ್ತಿರುವ ಪ್ರದೇಶ ಶಾಲೆಯ ಜಾಗವಲ್ಲದಿದ್ದರೂ ಅದು ಶಾಲೆಯ ಜಾಗ ಎಂದು ಹುಯಿಲೆಬ್ಬಿಸಿ ಅವರನ್ನು ಅಲ್ಲಿಂದ ಎತ್ತಂಗಡಿ ಮಾಡಬೇಕೆಂದು ಬೊಬ್ಬಿಡುತ್ತಿದ್ದಾರೆ. ಈ ಬೊಬ್ಬೆಗೆ ಪ್ರಮೋದ್ ಮುತಾಲಿಕ್ ಎಂಬ ಚಡ್ಡಿ ನಾಯಕ ಸಾರಥ್ಯ ವಹಿಸಿದ್ದಾನೆ.

ವಾಸ್ತವದಲ್ಲಿ ಸರ್ವೆ ನಂ. 2509/11ರಲ್ಲಿ ಎ.ಜೆ. ಮುಧೋಳ್‌ರ ತಂದೆಯವರು 1932ರಲ್ಲಿ ನಿರಂತರ ಭೂ ಬಾಡೆಯ ಮೇಲೆ ಜಮೀನನ್ನು ಖರೀದಿಸಿದ್ದರು. ನಂತರ1955ರಲ್ಲಿ ಮುಧೋಳರ ಕುಟುಂಬ ಖಾಯಂ ಆಧಾರದಲ್ಲಿ ಈ ಜಮೀನನ್ನು ಖರೀದಿಸಿಬಿಟ್ಟಿತು. ಇದರ ಎದುರುಗಡೆ ಖಾಲಿ ಜಾಗ ಇದ್ದುದರಿಂದ ಮುಧೋಳರ ಪತ್ನಿ ರಶೀದಾ ಬೇಗಂ ಹಳ್ಳಿಯಿಂದ ಒಣಹುಲ್ಲು ತಂದು, ಬಣವೆ ಒಟ್ಟಿಕೊಂಡು ಮಾರಾಟ ಮಾಡುತ್ತಿದ್ದರು. ಈಗ ಮೂರು ವರ್ಷಗಳ ಹಿಂದೆ ಒಣ ಹುಲ್ಲು ಮಾರಾಟ ಕಾರಣಾಂತರದಿಂದ ನಿಂತು ಹೋಗಿದೆ. ತಾವೇ ಮೊದಲಿನಿಂದಲೂ ಈ ಜಾಗ ಉಪಯೋಗಿಸುತ್ತಿದ್ದರಿಂದ ಅಲ್ಲಿ ಚಿಕ್ಕದಾದ ಮನೆಯೊಂದನ್ನು ಕಟ್ಟಿಕೊಂಡಿದ್ದ ಮುಧೋಳರ ಪತ್ನಿ ಇದು ಶಾಲೆಯ ಜಾಗ ಅಲ್ಲದಿದ್ದರೂ ಅದು ಶಾಲೆಯ ಜಾಗವೆಂದೇ ವಾದಿಸುತ್ತಾ ರಶೀದಾ ಬೇಗಂರನ್ನು ಅಲ್ಲಿಂದ ಎತ್ತಂಗಡಿ ಮಾಡಲು ಚಡ್ಡಿ ಪಡೆ ಕ್ಯಾತೆ ತೆಗೆಯುತ್ತಿದೆ. ಆರಂಭದಲ್ಲಿ ಭಾರೀ ಕೂಗಾಟ ನಡೆಸಿದ ಚಡ್ಡಿ ಸಂಸದ ಪ್ರಹ್ಲಾದ್ ಜೋಶಿ ಕೋಮುಸೌಹಾರ್ದ ವೇದಿಕೆಯ ಮಧ್ಯ ಪ್ರವೇಶದ ಕಾರಣ ಒಂದಿಷ್ಟು ದೂರ ಸರಿದಿದ್ದಾನಾದರೂ ಈಗ ಅವನ ಜಾಗಕ್ಕೆ ಮುತಾಲಿಕ್ ಬಂದಿದ್ದಾನೆ.

ಮುಧೋಳರ ಕುಟುಂಬ ಮುಸ್ಲಿಂ ಧರ್ಮೀಯರದ್ದು ಎಂಬ ಒಂದೇ ಕಾರಣಕ್ಕೆ ಇದಕ್ಕೆ ಈಗ ಕೋಮುವಾದಿ ಬಣ್ಣ ಬಳಿಯ ತೊಡಗಿದ್ದಾನೆ. ಇವನ ಹಾರಾಟ ಹೀಗೇ ಮುಂದುವರೆದರೆ ಹುಬ್ಬಳ್ಳಿಯ ಜನ ಅವನಿಗೊಂದು ಗತಿ ಕಾಣಿಸುವುದಂತೂ ಸತ್ಯ.

-ವರದಿಗಾರ

ಗೋ ಸಮ್ಮೇಳನ: ಸಗಣಿ ತಿಂದ ಸ್ವಾಮಿ



ಪಾಪ! ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಪೇಜಾವರ ಮಠದ ಯತಿಗಳಾದ ವಿಶ್ವೇಶತೀರ್ಥರು ಇನ್ನೂ ರಾಮಮಂದಿರದ ಜಪ ಮಾಡುತ್ತಾ, ದಲಿತ ಕೇರಿಗಳಲ್ಲಿ ಪಾದ ಪೂಜೆ ಮಾಡಿಸಿಕೊಳ್ಳುತ್ತಾ ಕೃತಾರ್ಥರಾಗುತ್ತಿದ್ದಾರೆ. ಆದರೆ ಇವತ್ತು ಸ್ವತಃ ವಿಶ್ವೇಶರೇ ಅಸೂಯೆಯಿಂದ ನರಳುವಂತೆ ಚೆಡ್ಡಿಗಳ ಅಜೆಂಡಾವೊಂದನ್ನು ತನ್ನದಾಗಿಸಿಕೊಂಡು ಸಂಘಪರಿವಾರದ ಕಣ್ಮಣಿಯಾಗಿ ರಾಮಚಂದ್ರಾಪುರ ಮಠದ ರಾಘವೇಶ್ವರ ಕಂಗೊಳಿಸುತ್ತಿದ್ದಾರೆ.

ಹೇಳಿಕೇಳಿ, ಕೆಲವು ವರ್ಷಗಳವರೆಗೆ ಈ ರಾಮಚಂದ್ರಾಪುರ ಮಠದ ಬಗ್ಗೆಯಾಗಲೀ, ಆದರ ಮಠಾಧೀಶ ರಾಘವೇಶ್ವರನ ಬಗ್ಗೆಯಾಗಲೀ ಯಾರೂ ಕೇಳಿರಲಿಲ್ಲ. ಅಷ್ಟೇ ಅಲ್ಲ, ಈ ಬ್ರಾಹ್ಮಣ ಮಠಾಧಿಪತಿ ಬಗ್ಗೆ ಪ್ರಥಮವಾಗಿ ಕೇಳಿಬಂದದ್ದು ಕುರಿ ಬಲಿ ನೀಡುವುದಕ್ಕೆ ಬೆಂಬಲ ನೀಡಿದಾಗ! ಆ 'ಕಳಂಕ'ದಿಂದ ಹೊರಬರುತ್ತಿರುವಾಗಲೇ ಆತ ಇನ್ನೊಂದು ಎಡವಟ್ಟು ಮಾಡಿಕೊಂಡ. ಅದು ಕ್ಷೌರಿಕ ಜನಾಂಗದವರನ್ನು ತನ್ನ ಲೇಖನವೊಂದರಲ್ಲಿ ಅವಮಾನಿಸಿದ್ದು!

ಇಂತಹ ಮೂರ್ಖ ಮಠಾಧೀಶ ಎಂದೂ ಉದ್ಧಾರವಾಗಲ್ಲ ಎಂದು ಎಲ್ಲರೂ ಉದ್ಗಾರವೆತ್ತುತ್ತಿರುವಾಗಲೇ ರಾಘವೇಶ್ವರ ಎಚ್ಚೆತ್ತುಕೊಂಡ.

ಅದೇ ಸಮಯಕ್ಕೆ, ರಾಜ್ಯದೆಲ್ಲೆಡೆ ಚೆಡ್ಡಿಗಳು ಸ್ವಘೋಷಿತ ಗೋ ರಕ್ಷಕರಂತೆ ವರ್ತಿಸುತ್ತಾ, ಮುಸ್ಲಿಮರು ಗೋ ಹತ್ಯೆಗಳಲ್ಲಿ ತೊಡಗಿದ್ದಾರೆ ಎಂದು ಆ ಸಮುದಾಯದ ಮೇಲೆ ಮುಗಿಬೀಳುತ್ತಿದ್ದರು. ಇದನ್ನು ಕಂಡು ರಾಘವೇಶ್ವರ ಗೋ ರಕ್ಷಣೆಗೆ ಎದ್ದು ನಿಂತ. ತನ್ನ ಮಠದಲ್ಲಿ ಹಲವಾರು ಸ್ಥಳೀಯ ತಳಿಗಳ ಗೋವುಗಳನ್ನು ತಂದು ಸಾಕಲಾರಂಭಿಸಿದ. ಗೋ ಮಂತ್ರ ಜಪಿಸುತ್ತಿದ್ದ ಚೆಡ್ಡಿಗಳಿಗೆ ರಾಘವೇಶ್ವರ "ಹಿಂದೂ ಸಂಸ್ಕೃತಿ"ಯ ರಕ್ಷಕನಂತೆ ಕಂಡ!

ಇದಕ್ಕೆ ಸರಿಯಾಗಿ ರಾಘವೇಶ್ವರನ ಉಪ ಪಂಗಡವಾದ ಹವ್ಯಕ ಬ್ರಾಹ್ಮಣರೂ ರೈತಾಪಿಗಳಾಗಿದ್ದು ಮತ್ತಷ್ಟು ಉತ್ತೇಜನ ನೀಡಿತು. ಅಷ್ಟೇ ಅಲ್ಲದೆ, ಹಲವಾರು ದಶಕಗಳಿಂದ ಎಸ್. ಬಂಗಾರಪ್ಪ ಮತ್ತು ಕಾಗೋಡು ತಿಮ್ಮಪ್ಪನ ರಾಜಕೀಯದಲ್ಲಿ ದನಿಯೇ ಇಲ್ಲದಂತಾಗಿದ್ದ ಹವ್ಯಕರಿಗೆ ರಾಘವೇಶ್ವರನ ರಾಮಚಂದ್ರಾಪುರ ಮಠ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುವ ಕೇಂದ್ರವಾಗಿ ಪರಿವರ್ತನೆಗೊಂಡಿತು.

ಸ್ಥಳೀಯ ಗೋ ತಳಿಗಳ ರಕ್ಷಣೆ ಮಾಡುತ್ತೇನೆಂದು ಹೊರಟ ರಾಘವೇಶ್ವರನಿಗೆ ಆ ಸಮುದಾಯದ ಬೆಂಬಲ ಮಾತ್ರವಲ್ಲದೆ ಚೆಡ್ಡಿಗಳ ಸಹಕಾರವೂ ದೊರಕಿತು. ಇದೆಲ್ಲದರಿಂದ ನಿಷ್ಕ್ರಿಯವಾಗಿದ್ದ ಆತನ ಮಠಕ್ಕೆ ಸನಾತನ ಕಾರ್ಯಕ್ರಮಗಳಿಗೆ ಪುಷ್ಠಿ ನೀಡುವಂತಾಯಿತು. ರಾಘವೇಶ್ವರ ಹೋದಲ್ಲೆಲ್ಲ ಜನ ಹಣ ನೀಡಿದರು. ಆತನನ್ನು ಕೊಂಡಾಡಲಾರಂಭಿಸಿದರು.

ಇದೆಲ್ಲದರಿಂದ ಉತ್ತೇಜನ ಪಡೆದ ರಾಘವೇಶ್ವರ ಹಲವು ತಿಂಗಳ ಹಿಂದೆ ರಾಮಾಯಣ ಸತ್ರಯಾಗ ಎಂಬ ಹಾಸ್ಯಾಸ್ಪದ ಕಾರ್ಯಕ್ರಮವನ್ನು ಆಯೋಜಿಸಿದ. ಅದಕ್ಕೆಂದು ಹಲವಾರು ಕೋಟಿ ರೂಪಾಯಿಗಳ ದೇಣಿಗೆಯನ್ನೂ ಪಡೆದ. ಆದರೆ ಆ ಯಾಗದಲ್ಲಿ ಆತ ಸುರಿದ ತುಪ್ಪದಷ್ಟೇ ಟೀಕೆಗಳು ಹರಿದುಬಂದವು. ಬಡ ಮಕ್ಕಳು ಸೇವಿಸಬಹುದಾಗಿದ್ದ ತುಪ್ಪ ಮತ್ತು ಇತರೆ ಪೌಷ್ಟಿಕ ಆಹಾರವನ್ನೆಲ್ಲ ಬೆಂಕಿಗೆ ಹಾಕಿದ್ದನ್ನು ಎಲ್ಲರೂ ಖಂಡಿಸಿದರು. ಆ ಸಮಯದಲ್ಲೇ ರಾಘವೇಶ್ವರ ಗೋ ಸಮ್ಮೇಳನವನ್ನು ನಡೆಸುವುದಾಗಿ ಘೋಷಿಸಿದ.

ಆದರೆ ವಿಪರ್ಯಾಸ ಯಾವುದೆಂದರೆ ಈತ ಗೋ ತಳಿಗಳ ಸಮ್ಮೇಳನ ನಡೆಸುವ ಬದಲಾಗಿ, ಗೋ ರಕ್ಷಣೆಯ ಹೆಸರಲ್ಲಿ ಮನುಷ್ಯರನ್ನೇ ಭಸ್ಮ ಮಾಡುವವರ ಚೆಡ್ಡಿ ಸಮ್ಮೇಳನವನ್ನು ನಡೆಸಿದ್ದು! ಉದಾಹರಣೆಗೆ ಈ ಸಮ್ಮೇಳನದಲ್ಲಿ ಯಾವ ತಳಿಯ ವೈಶಿಷ್ಟತೆ ಏನು? ಆ ತಳಿ ಎಷ್ಟು ಶುದ್ಧವಾಗಿ ಉಳಿದಿದೆ? ಅವುಗಳನ್ನು ರಕ್ಷಿಸಲು ಅನುಸರಿಸುವ ಮಾರ್ಗಗಳು ಯಾವುವು ಎಂಬುದರ ಬಗ್ಗೆ ವೈಜ್ಞಾನಿಕ ಚರ್ಚೆ ನಡೆಯುವುದರ ಬದಲಾಗಿ "ಗೋ ಹತ್ಯೆ ಮಾಡುವವರ ಕೈ ಕಡಿಯಬೇಕು, ಗೋ ಮಾಂಸ ತಿನ್ನುವವರ ನಾಲಿಗೆ ಕತ್ತರಿಸಬೇಕು" ಎಂಬಂತಹ ಘೋಷಣೆಗಳೇ ಸಮ್ಮೇಳನದಲ್ಲಿ ಮೊಳಗಿವೆ.

ಜನರನ್ನು ಕೊಲ್ಲುವುದಕ್ಕೂ ಗೋವನ್ನು ರಕ್ಷಿಸುವುದಕ್ಕೂ ಎಲ್ಲಿಯ ವೈಜ್ಞಾನಿಕ ನಂಟು? ಆದರೆ ಈ ಪ್ರಶ್ನೆಗೆ ರಾಘವೇಶ್ವನಿಂದ ಉತ್ತರ ನಿರೀಕ್ಷಿಸುವುದು, ಮೊಸರಲ್ಲಿ ಕಲ್ಲನ್ನು ಹುಡುಕುವುದಕ್ಕೆ ಸಮಾನ!

ಅದೆಲ್ಲ ಏನೇ ಇರಲಿ, ಪ್ರಾಯಶಃ ಎಂದೂ ಹಸುವನ್ನು ತೊಳೆಯದಿರುವ, ಹಾಲನ್ನು ಕರೆಯದಿರುವ, ಸಗಣಿಯನ್ನು ಎತ್ತದಿರುವ, ದನದ ಕೊಟ್ಟಿಗೆಯನ್ನೂ ಸ್ವಚ್ಛಗೊಳಿಸದಿರುವ ಈ ರಾಘವೇಶ್ವರ ಸ್ವಾಮಿ ನಡೆಸಿದ ಗೋ ಸಮ್ಮೇಳನದ ಮೂಲಕ ಸಾಧಿಸಿದ್ದಾದರೂ ಏನನ್ನು? ಅದರಲ್ಲೂ ಕೋ-ಜಾ ಸರ್ಕಾರದ ಐದು ಕೋಟಿ ರೂಪಾಯಿಗಳ ಸಾರ್ವಜನಿಕ ದುಡ್ಡನ್ನು ದಾನವಾಗಿ ಪಡೆದು, ಹಲವು ಕೋಟಿ ರೂಪಾಯಿಗಳನ್ನು ಭಕ್ತರಿಂದ ಸಂಗ್ರಹಿಸಿದ ಮೇಲೂ?

ಅದೇ ಒಂದು ದೊಡ್ಡ ಕತೆ! ಇದರ ಸಂಪೂರ್ಣ ವೃತ್ತಾಂತ ಇಲ್ಲಿದೆ ನೋಡಿ!!

ಗೋ ಸಮ್ಮೇಳನದ ತಯಾರಿಯನ್ನು ಗೋ ಯಾತ್ರೆಯ ಮೂಲಕ ಪ್ರಾರಂಭಿಸಿದ ರಾಘವೇಶ್ವರ ಮೊದಲು ಕೊಳ್ಳಿ ಇಟ್ಟದ್ದು ರಾಮಚಂದ್ರಾಪುರ ಮಠದ ಸುತ್ತಮುತ್ತಲಿನ ಜಾಗಕ್ಕೆ! ನಾಲ್ಕಾರು ಬುಲ್ಡೋಜರ್‌ಗಳನ್ನು, ಪ್ರೋಕ್‌ಲೈನ್‌ಗಳನ್ನೂ ಕರೆಸಿದ ರಾಘವೇಶ್ವರ ಶರಾವತಿಯ ಹಿನ್ನೀರಿನ ಸೆರಗಿನಲ್ಲಿರುವ ಮಠದ ಸುತ್ತಮುತ್ತಲಿನ ಪ್ರದೇಶವನ್ನು ಬೋಳುಗೊಳಿಸಿದ. ಇದರ ಪರಿಣಾಮವೇನೆಂದರೆ ಮಠದ ಸುತ್ತಮುತ್ತಲಿನಲ್ಲಿ ನೈಸರ್ಗಿಕದತ್ತವಾಗಿ ಗುಡ್ಡಗಳು, ಬೆಲೆಬಾಳುವ ಮರಗಳು, ಎತ್ತರದ ಬಿದಿರು ಮಟ್ಟೆಗಳು ನೆಲಸಮವಾದದ್ದು, ಹೀಗೆ ನೆಲಸಮವಾದ ಮರಗಳು ರಾತ್ರೋರಾತ್ರಿ ನಾಟಾ ವ್ಯಾಪಾರಿಗಳ ಮನೆ ಸೇರಿದವು. ಪಕ್ಕದಲ್ಲಿದ್ದ ಗುಡ್ಡಗಳು ಬಾಯ್ದೆರೆದ ಸ್ಮಶಾನಗಳಂತಾದವು.

ಹೀಗೆ ಮಠದ ಸುತ್ತಮುತ್ತಲಿನ ಜಾಗಗಳನ್ನು

ಸಾವಂತ್ರಿ

ಎಲ್ಲಿ ಹೋಯಿತು ದುಡ್ಡು?

'ಗೋ ರಕ್ಷಣೆ' ಹೆಸರಿನಲ್ಲಿ ಢೋಂಗಿ ಗೋ ಹಿತರಕ್ಷಕ ರಾಘವೇಶ್ವರಸ್ವಾಮಿ ಕೋಟ್ಯಂತರ ರೂಪಾಯಿಗಳನ್ನು ಸ್ವಾಹಾ ಮಾಡಿದರೆ ಎಂಬ ಪ್ರಶ್ನೆ ಕಾಡದಿರದು. ಏಕೆಂದರೆ ಗೋ ಹೆಸರಿನಲ್ಲಿ ಕೋಟ್ಯಂತರ ರೂಪಾಯಿಗಳ ದೇಣಿಗೆ ಎತ್ತಿರುವ, ದಾನ ಪಡೆದಿರುವ, ಸರ್ಕಾರಿ ಹಣವನ್ನು ಪಡೆದಿರುವ ಈ ಸ್ವಾಮಿ ಗೋಗಳಿಗಾಗಿ ವೆಚ್ಚ ಮಾಡಿರುವುದು ಅಷ್ಟಕ್ಕಷ್ಟೇ.

ಹಲವು ತಿಂಗಳ ಹಿಂದೆ ನಡೆದ 'ರಾಮಾಯಣ ಸತ್ರಯಾಗ' ಎಂಬ ಮತ್ತೊಂದು ಕಪಟ ನಾಟಕದ ಪ್ರಸಂಗದಲ್ಲಿ ರಾಘವೇಶ್ವರ ಸ್ವಾಮಿ ಮಾಡಿದ ಲಾಭವೇ ಬರೋಬ್ಬರಿ ಹದಿನೆಂಟು ಕೋಟಿ



ರೂಪಾಯಿಗಳು. ಇಷ್ಟೊಂದು ಹಣ ಪಡೆದಿದ್ದರ ಬಗ್ಗೆ ಹಲವರು ಹುಬ್ಬೇರಿಸಿದಾಗ ಇದನ್ನೇ ಗೋ ಸಮ್ಮೇಳನಕ್ಕೆ ವೆಚ್ಚ ಮಾಡುವುದಾಗಿ ರಾಘವೇಶ್ವರ ಭೋಂಗು ಬಿಟ್ಟಿದ್ದ. ಈಗ ನೋಡಿದರೆ ಈ ಗೋಸಮ್ಮೇಳನಕ್ಕೆ ಖರ್ಚಾದ ಐದು ಕೋಟಿ ರೂಪಾಯಿಗಳನ್ನು ಚೆಡ್ಡಿ ವೀರ ಯಡ್ಡಿಯೇ ನೀಡಿದ್ದಾನೆ. ಅಂದರೆ ರಾಮಾಯಣ ಸತ್ರಯಾಗದಿಂದ ಬಂದ ಹದಿನೆಂಟು ಕೋಟಿ ರೂಪಾಯಿಗಳು ರಾಘವೇಶ್ವರನ ಖಾಸಗಿ ತಿಜೋರಿಯಲ್ಲೇ ಉಳಿದಿದೆ!

ಅಷ್ಟೇ ಅಲ್ಲ, ಈಗ ಮುಗಿದಿರುವ ಗೋ ಸಮ್ಮೇಳನದಲ್ಲೂ ಸುಮಾರು ಹತ್ತು ಕೋಟಿ ರೂಪಾಯಿಗಳಷ್ಟು ಕಾಣಿಕೆ, ದೇಣಿಗೆಗಳು ಬಂದಿವೆ. ಇದೆಲ್ಲವೂ ರಾಘವೇಶ್ವರರ ಜೇಬು ಸೇರಿದೆ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ ಅಲ್ಲವೇ?

ಇದೆಲ್ಲವನ್ನು ಕಂಡು ಮಠದ ಅನುಯಾಯಿಗಳಾದ ಹವ್ಯಕ ಬ್ರಾಹ್ಮಣರೇ "ಗೋ ರಕ್ಷಣೆಯಲ್ಲಿ ಎಷ್ಟು ಹಣವುಂಟು ನೋಡಿ ಮಾರಾಯ್ರೆ" ಎಂದು ಬೆಕ್ಕಸ ಬೆರಗಾಗಿದ್ದಾರಂತೆ!

ಸೆಡ್ಡು ಹೊಡೆದ 'ಬಂ'

ಕೋ-ಜಾ ಸರ್ಕಾರದ ಸಂಪೂರ್ಣ ಆಡಳಿತ ಯಂತ್ರವೇ ರಾಮಚಂದ್ರಾಪುರದ ಮಠದಲ್ಲಿ ಕಾಲು ಮುರಿದುಕೊಂಡು ಬಿದ್ದಿದ್ದಾಗ, ತಲೆ ಇಲ್ಲದ ಮಂತ್ರಿ ಮಹೋದಯರೆಲ್ಲ ಕಂಡಕಂಡ ಸ್ವಾಮಿಗಳ ಕಾಲಿಗೆ ಡೈ ಹೊಡೆಯುತ್ತಿರುವಾಗ ಚೆಡ್ಡಿಗಳ ಈ ಗೋ ಸಮ್ಮೇಳನದಿಂದ ದೂರ ಉಳಿದವರು ಶಿವಮೊಗ್ಗ ಜಿಲ್ಲೆಯ ಸೊರಬದ ಸಂಸದ ಎಸ್. ಬಂಗಾರಪ್ಪ, ಅವರ ಮಾಜಿ ಹಿಂಬಾಲಕ



ಪರತಾಳು ಹಾಲಪ್ಪ ಕೂಡ ಚೆಡ್ಡಿಗಳೊಂದಿಗೆ ಗೋ ಭಕ್ತಿಯಲ್ಲಿ ಪೈಪೋಟಿಗೆ ಬಿದ್ದವರಂತೆ ವರ್ತಿಸುತ್ತಿದ್ದರೂ ಹೊಸನಗರದಲ್ಲಿನ ನಾಟಕಕ್ಕೂ, ತಮಗೂ ಯಾವುದೇ ಸಂಬಂಧವಿಲ್ಲ ಎಂಬಂತೆ ಇವರು ಬಂಗಾರಪ್ಪ, ಸಮಾಜವಾದದ ಹಿನ್ನೆಲೆಯ ಬಂಗಾರಪ್ಪನವರ ಈ ನಿಷ್ಠುರತೆ ಹಲವಾರು ಪ್ರಗತಿಪರರ, ಪ್ರಜ್ಞಾವಂತರ ಪ್ರಶಂಸೆಗೆ ಕಾರಣವಾಗಿದೆ.

ಚೆಡ್ಡಿ ಪಟಾಲಂ ಸಮ್ಮೇಳನ

"ಗೋ ಹತ್ಯೆ ಮಾಡುವವರ ಕೈ ಕಡಿಯುವ, ಗೋ ಮಾಂಸ ತಿನ್ನುವವರ ಪಾಲಿಗೆ ಕತ್ತರಿಸುವ ಕಾನೂನನ್ನು ಜಾರಿಗೆ ತರಬೇಕು." ಇಂತಹ ಒಂದು ತಲೆ ಕೆಟ್ಟ ಸಿದ್ಧಾಂತವನ್ನು ಹೊಂದಿರುವವನು ತಲೆ ಎಂಬುದೇ ಇಲ್ಲದಿರುವ ಈಶ್ವರಪ್ಪ ಎಂಬ ಚೆಡ್ಡಿ ಮಂತ್ರಿ.

ಹಿಂದುಳಿದ ವರ್ಗದ ಕುರುಬ ಸಮುದಾಯಕ್ಕೆ ಸೇರಿರುವ ಈಶ್ವರಪ್ಪ ಬ್ರಾಹ್ಮಣ ಮಠಾಧೀಶರ ಮುಂದ ತಟ್ಟೆ ಕಾಸಿಗಾಗಿ ನಿಲ್ಲುವ ಗಿರಾಕಿ. ಇಂಥವನೊಬ್ಬ ರಾಘವೇಶ್ವರ ಸ್ವಾಮಿ ನಡೆಸಿದ ಗೋ ಸಮ್ಮೇಳನದಲ್ಲಿ ಹಾಜರಾಗಿ ಮತ್ತದೇ 'ಕಡಿಯುವ, ಕತ್ತರಿಸುವ' ಮಾತುಗಳನ್ನೇ ಒದರಿದ್ದು ಆತನ ಜಾಯಮಾನಕ್ಕೆ ತಕ್ಕದ್ದೇ ಆಗಿತ್ತು.

ಆತನೊಂದಿಗೆ ಲಿಂಗವಂತ ಯಡಿಯೂರಪ್ಪ ಕೂಡ ಇದ್ದು, ಲಿಂಗಾಯತ ಸಮುದಾಯಕ್ಕೇ ಅವಮಾನವಾಗುವಂತೆ ಬ್ರಾಹ್ಮಣ ಮಠದ ಸೇವೆಯಲ್ಲೇ ಎಷ್ಟು ತಲ್ಲೀನರಾಗಿದ್ದನೆಂದರೆ ಮೂರು ದಿನಗಳ ಕಾಲ ಅಲ್ಲೇ ಮುಕ್ಕಾಂ ಹೂಡಿದ್ದ. ಈ ಜೆಡ್ಡ ಜೋಡ್ಡರೇ ಅಲ್ಲಿರುವಾಗ



ಶಂಕರಮೂರ್ತಿ ಎಂಬ ಜನಿವಾರಿ ಶೆಟ್ಟಿ ಕೂಡ ಹಾಜರಾಗಿ ರಾಘವೇಶ್ವರನನ್ನು ಕೊಂಡಾಡಿದ್ದು ಅಚ್ಚರಿಯೇನಲ್ಲ.

ಈ ತ್ರಿಮೂರ್ತಿಗಳೇನೋ ಶಿವಮೊಗ್ಗೆಯ ಜಿಲ್ಲೆಯವರು, ಸದ್ಯಕ್ಕೆ ಅಧಿಕಾರದಲ್ಲಿರುವವರು. ಆದರೆ ಗೋ ಸಮ್ಮೇಳನಕ್ಕೆ ದೂರದೂರಿನಿಂದ ಹಾಜರಾದವರೆಲ್ಲಾ ಸಂಘ ಪರಿವಾರಕ್ಕೇ ಸೇರಿದ್ದವರಾಗಿದ್ದರಲ್ಲಾ? ಉದಾಹರಣೆಗೆ ಬಜೆಪಿ ಪಕ್ಷದ ಮಧ್ಯಪ್ರದೇಶದ ಮುಖ್ಯಮಂತ್ರಿ ಚೌಹಾನ್, ಬಿಹಾರ್ ರಾಜ್ಯದ ಸಮ್ಮಿಶ್ರ ಸರ್ಕಾರದ ಉಪಮುಖ್ಯಮಂತ್ರಿ ಸುಶೀಲ್‌ಕುಮಾರ್ ಮೋದಿ (ಈತನೂ ಬಜೆಪಿಯವನೇ), ಬೆಳಗಾವಿಯ ಚೆಡ್ಡಿ ಮಂತ್ರಿ ಶ್ರೀರಾಮುಲು, ವಿಶ್ವಹಿಂದೂ ಪರಿಷತ್‌ನ ಅಶೋಕ್ ಸಿಂಘಾಲ್ ಮತ್ತು ಪ್ರವೀಣ್ ತೊಗಾಡಿಯಾ ಎಲ್ಲರೂ ಹಾಜರಾಗಿದ್ದನ್ನು ನೋಡಿದರೆ ರಾಘವೇಶ್ವರನದ್ದು ಎಂತಹ ಚೆಡ್ಡಿ ಬುದ್ಧಿ ಎಂಬುದು ಅರಿವಾಗುತ್ತದೆ.

ಅದರಲ್ಲೂ ತೊಗಾಡಿಯಾ ತರಹದವರಿಗೆ ಭಾರತೀಯ ಮುಸಲ್ಮಾನರೂ ಪಾಕಿಸ್ತಾನಿಯರಂತೆ ಕಾಣುವುದರಿಂದ ಆತ ಮಾಡಿದ ಭಾಷಣವೂ ಅದೇ ರೀತಿ ಇತ್ತು. "ಕರ್ನಾಟಕದಲ್ಲಿ ಯಾಕೆ ಗೋಹತ್ಯೆಯನ್ನು ನಿಲ್ಲಿಸಿಲ್ಲ? ಕರ್ನಾಟಕವೇನು ಪಾಕಿಸ್ತಾನದಲ್ಲಿದೆಯೇ?" ಎಂದು ತೊಗಾಡಿಯಾ ಅರಚಿಕೊಂಡರೆ, ಉಳಿದ ಚೆಡ್ಡಿಗಳೂ "ಹಿಂದೂ ಸಮಾಜ", "ಹಿಂದೂ ಸಂಸ್ಕೃತಿ" ಎಂದೆಲ್ಲ ಬೊಬ್ಬೆ ಹೊಡೆದವು.

ತೊಗಾಡಿಯಾ ಮತ್ತು ಆತನ ಸಂತತಿಗೆ ಇವತ್ತಿಗೂ ಕರ್ನಾಟಕದಲ್ಲಿ ಗೋ ಮಾಂಸವನ್ನು ತಿನ್ನುವವರು ಅಲ್ಪಸಂಖ್ಯಾತ ಮುಸಲ್ಮಾನ ಮತ್ತು ಕ್ರಿಶ್ಚಿಯನ್ನರಿಗಿಂತ ಬಡ ದಲಿತರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎಂದು ಗೊತ್ತಾಗಿಲ್ಲ. ಗೊತ್ತಿದ್ದರೂ ಅದರ ಬಗ್ಗೆ ಕೇರ್ ಮಾಡುತ್ತಿಲ್ಲ.

ಯಾಕೆಂದರೆ ಅವರೆಲ್ಲರಿಗೆ "ಹಿಂದೂ ನಾವೆಲ್ಲ ಒಂದು" ಎಂದು ಹೇಳುತ್ತಲೇ ಗೋಮಾಂಸ ತಿನ್ನುವ ದಲಿತರ ಕೈ-ನಾಲಿಗೆಗಳನ್ನು ಕಡಿಯುವ-ಕತ್ತರಿಸುವ ಕಾನೂನೇ ಬೇಕು.

ಚೆಡ್ಡಿಗಳ ಈ ಹುನ್ನಾರವನ್ನು ದಲಿತರು ಆದಷ್ಟು ಬೇಗ ಅರಿತುಕೊಂಡರೆ ಅವರಿಗೇ ಒಳಿತು!

ಘವೇಶ್ವರನಿಗೆ ಬೇಡವಾದ 'ಮಲೆನಾಡು ಗಿಡ್ಡ'

ಏ ಗಿಡ್ಡ ಇದ್ದವನು ಗೆದ್ದ' ಎಂಬುದು ಕೇವಲ ಒಂದು ನಾಣ್ಣುಡಿಯಲ್ಲ, ಬದಲಾಗಿ ಸಹಸ್ರಾರು ಂದಿದ್ದ ಸತ್ಯ. ಆದರೆ ಹೆಚ್ಚು ಹಾಲನ್ನು ನೀಡುವ ವಿದೇಶಿ ತಳಿಗಳು ಜನಪ್ರಿಯವಾದ ನಂತರ ಕಿಸರುವಾಸಿಯಾಗಿದ್ದ ಬರಗಾಲ, ಮೇವಿನ ಕೊರತೆ ಇತ್ಯಾದಿಗಳನ್ನು ನಿಭಾಯಿಸುವ ದೈಹಿಕ ಂದಿದ್ದ ಈ ಸ್ಥಳೀಯ ತಳಿಗಳು ರೈತರಿಗೆ ಬೇಡವಾದವು.

ಗಿದ್ದರೂ ರಾಮಚಂದ್ರಾಪುರ ...ೇಶ್ವರ ಸ್ವಾಮಿ ದೇಸಿ ತಳಿಗಳನ್ನು ಕ್ಷಿಸಲು ಹೊರಟಿದ್ದಾರಲ್ಲ, ಅವರಾದರೂ ಗಳನ್ನು ನೋಡಿಕೊಳ್ಳಲಿ ಎಂದು ಕೃಷಿಕರು ಮಲೆನಾಡು ಗಿಡ್ಡಗಳನ್ನು ಮಠಕ್ಕೆ ದರು.




ಇದೇ ಸಮಯದಲ್ಲಿ ಹಲವು ಚೆಡ್ಡಿಗಳೂ ೂ ಕೂಡ ಗೋರಕ್ಷಕರೆಂಬಂತೆ ಪೋಸು ಡುತ್ತಾ "ಇವುಗಳನ್ನು ಕಸಾಯಿಖಾನೆಗೆ ಸ್ಲಿಮರು ರವಾನಿಸುತ್ತಿದ್ದರು. ನಾವು ಅವು ನ್ನು ರಕ್ಷಿಸಿ ತಂದಿದ್ದೇವೆ" ಎಂದು ಹೇಳುತ್ತಾ ಕೊಟ್ಟಿಗೆಗಳಲ್ಲಿದ್ದ ಗಿಡ್ಡಗಳನ್ನು ತಂದು ಮಚಂದ್ರಾಪುರ ಮಠದಲ್ಲಿ ಬಿಟ್ಟರು.

ಆದರೆ ಹಲವು ದಷ್ಟಪುಷ್ಟವಾದ ದನಗಳನ್ನು ಮಾತ್ರ ತೋರಿಸುತ್ತಾ ಹಣ ಪೀಕುವ ದಂಧೆಗೆ ಇಳಿದಿರುವ ಘವೇಶ್ವರನಿಗೆ "ಈ ಮಲೆನಾಡು ಗಿಡ್ಡಗಳನ್ನು ಇಟ್ಟುಕೊಂಡು ನಾನಂತೂ ಗೆಲ್ಲುವುದಿಲ್ಲ" ಎಂದನಿಸಿತೋ ೋ ಈ ಗಿಡ್ಡಗಳನ್ನು ಸಾಕುವ ಕಿರಿಕಿರಿ ಯಾರಿಗೆ ಬೇಕೆಂದು ಅವುಗಳನ್ನು ನಿರ್ಲಕ್ಷಿಸಲಾರಂಭಿಸಿದರು. ಲ್ಲು-ಮೇವು ನೀಡದೇ ಸತಾಯಿಸಿದರು. ಇದರಿಂದಾಗಿ ಈಗಾಗಲೇ ನೂರಾರು ಮಲೆನಾಡು ಗಿಡ್ಡಗಳು ಣ್ಣು ಸೇರಿವೆ, ಉಳಿದಿರುವ ದನಗಳು ಚರ್ಮ ಹೊದ್ದಿರುವ ಅಸ್ಥಿಪಂಜರಗಳಂತಾಗಿವೆ.

ಕುಖ್ಯಾತ ಗೋಪ್ರಿಯನಾಗಿರುವ ತನ್ನ ಸುಪರ್ದಿನಲ್ಲೇ ಮಲೆನಾಡು ಗಿಡ್ಡ ದನಗಳು ಇಂತಹ ಸ್ಥಿತಿ ತಲುಪಿರುವುದನ್ನು ು ಜನ ಏನೆಂದಾರು ಎಂಬ ಆತಂಕ ರಾಘವೇಶ್ವರನನ್ನು ಕಾಡಿರಬೇಕು. ಆದ್ದರಿಂದಲೇ ಗೋಸಮ್ಮೇಳನ ಯುತ್ತಿರುವಾಗ ಯಾರ ಕಣ್ಣಿಗೂ ಈ ಗೋವುಗಳು ಬೀಳದಿರಲೆಂದು ಅವುಗಳನ್ನೆಲ್ಲ ಸಮೀಪದ ೀಟವೊಂದರಲ್ಲಿ ಕಟ್ಟಿ ಹಾಕಿದ್ದರು.

ಇದು ರಾಘವೇಶ್ವರ ಸ್ವಾಮಿಯ ಗೋಪ್ರೀತಿಯ ಅಸಲಿ ವರಸೆ! ಇದಕ್ಕೆ ಯಡ್ಡಿಯಿಂದ ಸಾರ್ವಜನಿಕರ ರಿನ ದುಡ್ಡಾದ ಐದು ಕೋಟಿ ರೂಪಾಯಿಗಳು ಬೇರೆ ಪೋಲು. ಇವರೆಲ್ಲರಿಗೂ ದನದ ಚರ್ಮದಿಂದ ಾರಿಸಿದ ಉಪಕರಣೆಗಳಿಂದ ಜನ ಬಾರಿಸುವುದು ಎಂದು?!

ಶೂದ್ರರ ಹಣ ಬೇಕು, ಒಂದೇ ಪಂಕ್ತಿ ಬೇಡ!







ಈ ರಾಘವೇಶ್ವರ ಸ್ವಾಮಿ ಎಂತಹ ಕಂತ್ರಿ ಬ್ರಾಹ್ಮಣನೆಂದರೆ ಆತನಿಗೆ ಶೂದ್ರರು ನೀಡುವ ಗೋವುಗಳು ಬೇಕು, ಅವರು ಬೆವರು ಸುರಿಸಿ ಗಳಿಸಿರುವ ಹಣ ಬೇಕು. ಆದರೆ ಮಡಿ, ಮೈಲಿಗೆಯ ಹೆಸರಲ್ಲಿ ಅದೇ ಶೂದ್ರರೊಂದಿಗೆ ಒಂದೇ ಪಂಕ್ತಿ ಊಟ ಮಾತ್ರ ಬೇಡ.

ಇದನ್ನು ಯಾಕೆ ಇಲ್ಲಿ ಮತ್ತೆ ಹೇಳಲಾಗುತ್ತಿದೆ ಎಂದರೆ ಇದೇ ರಾಘವೇಶ್ವರ ರಾಮಾಯಣ ಸತ್ರಯಾಗವನ್ನು ನಡೆಸಿದಾಗಲೂ ಬ್ರಾಹ್ಮಣರಿಗೇ ಪ್ರತ್ಯೇಕ ಪಂಕ್ತಿ, ಇತರರಿಗೆ ದೂರದಲ್ಲಿ ಇನ್ನೊಂದು ಪಂಕ್ತಿಯನ್ನು ಯಾವ ಮುಜುಗರವೂ ಇಲ್ಲದೇ ಏರ್ಪಡಿಸಿದ್ದ. ಅದರ ಬಗ್ಗೆ ಪತ್ರಿಕೆಗಳು ವ್ಯಾಪಕವಾಗಿ ವರದಿ ಮಾಡಿದ್ದರಿಂದಲಾದರೂ ಆತನಿಗೆ ಬುದ್ಧಿ ಬಂದಿರಬಹುದೆಂದು ಹಲವಾರು ಆಶಿಸಿದ್ದರು. ಆದರೆ ನಾಯಿ ಬಾಲ ಡೊಂಕು ಎಂಬಂತೆ ಈ ರಾಘವೇಶ್ವರ ಗೋ ಸಮ್ಮೇಳನದಲ್ಲೂ ಪಂಕ್ತಿ ಭೇದವನ್ನು ಅನುಸರಿಸಿದ್ದಾನೆ.

ಇದನ್ನು ಕಂಡು ಹೊಸನಗರದ ತಾಲ್ಲೂಕು ಪಂಚಾಯ್ತಿ ಸದಸ್ಯೆ ಸುಮತಿ ಪೂಜಾರಿ ಪ್ರತಿಭಟಿಸಿದಾಗ ಅಲ್ಲಿದ್ದ ಜನಿವಾರಿ ಚೆಡ್ಡಿಗಳು ಆಕೆಯನ್ನು ಎಲ್ಲರೆದುರಿಗೆ ಹೀನಾಮಾನವಾಗಿ ಬೈದು ಅವಮಾನಿಸಿದರು. ಇಂತಹ ಅನ್ಯಾಯವನ್ನು ಕಂಡು ದಂಗೆ ಏಳಬೇಕಿದ್ದ ಸಾಗರದ ಹಲವು ದಲಿತ ಹುಡುಗರು ಶಿಳ್ಳೆ ಹೊಡೆದು 'ಜೈ ಶ್ರೀರಾಮ್' ಎಂದು ಘೋಷಣೆ ಕೂಗಿದರು.

ಅಂದಹಾಗೆ ಅಲ್ಲೇ ಠಿಕಾಣಿ ಹೂಡಿದ್ದ ಲಿಂಗಾಯತ ಯಡ್ಡಿ ಮತ್ತು ತಟ್ಟೆಕಾಸಿನ ಗಿರಾಕಿ ಕುರುಬ ಈಶ್ವರಪ್ಪನವರಿಗೂ ಬ್ರಾಹ್ಮಣರ ಪಂಕ್ತಿಯಲ್ಲಿ ಜಾಗವಿರಲಿಲ್ಲ.

ಹಾಗಾದರೆ ಅವರೇನು ಮಾಡಿದರು? ಬ್ರಾಹ್ಮಣರೆಲ್ಲಾ ಜನಿವಾರ ತೀಡಿಕೊಳ್ಳುತ್ತಾ ಮೊಣಕೈಯಿಂದ ಮುಷ್ಟಿಯವರೆಗೂ ನೆಕ್ಕುತ್ತಿರುವಾಗ... ಈ ಶೂದ್ರ ಶಿಖಾಮಣಿಗಳು ಹೊಟ್ಟೆ ಹಸಿದಾಗೆಲ್ಲ ಟಿಫೀನ್ ಕ್ಯಾರಿಯರ್‌ನಲ್ಲಿ ತರಿಸಿಕೊಂಡಿದ್ದ ಊಟವನ್ನೇ ಮಾಡುತ್ತಿದ್ದರು ಎಂಬುದು ಹಲವರ ಅಂಬೋಣ!

ಸಿಕೊಂಡ ರಾಘವೇಶ್ವರನ ಭೂದಾಹ ಇಲ್ಲಿಗೆ ನಿಲ್ಲಲಿಲ್ಲ, ಹತ್ತಿರದ ಗಳಲ್ಲಿ ಒಕ್ಕಲು ಮಾಡುತ್ತಿದ್ದ ರೈತರನ್ನೆಲ್ಲ ಹೆದರಿಸಿ ಓಡಿಸಲಾಯಿತು. ಗದ್ದೆಗಳನ್ನು ಬೆಲೆಬಾಳುವ ಅಡಿಕೆ ತೋಟಗಳನ್ನು ಹಂತಹಂತವಾಗಿ ಡಿಸಿಕೊಂಡು ಕಡಿದು ಹಾಕಲಾಯಿತು.

ೇಗಿದ್ದರೂ ಶಿವಮೊಗ್ಗೆಯ ತ್ರಿಮೂರ್ತಿಗಳಾದ ಯಡ್ಡಿ-ಈಶ್ವರ-ಶಂಕರ ೇಬಿನಲ್ಲಿರುವುದರಿಂದ ರಾಘವೇಶ್ವರಿಗೆ ಮತ್ತಷ್ಟು ಧೈರ್ಯ ಬಂದಿತು. ಅಕ್ರಮವಾಗಿ ವಶಪಡಿಸಿಕೊಂಡಿದ್ದ ಜಾಗಗಳ ಹೊರತಾಗಿ, ಅವುಗಳಿಗೆ ಕೊಂಡಿದ್ದ ಅರಣ್ಯ ಭೂಮಿಗೂ ಬಾಯಿ ಹಾಕಿದ.

ಷ್ಟರಮಟ್ಟಿಗೆ ಎಂದರೆ ರೆವಿನ್ಯೂ ದಾಖಲೆಗಳ ಪ್ರಕಾರ ಮಠದ ಗಿರುವುದು ಕೇವಲ 27 ಎಕರೆ ಪ್ರದೇಶವಾಗಿದ್ದರೂ ಇವತ್ತು ವೇಶ್ವರರ 'ಅನಧಿಕೃತ ಸಾಮ್ರಾಜ್ಯ' ಸಹಸ್ರಾರು ಎಕರೆಗಳ ವಿಸ್ತೀರ್ಣದ್ದು!

ಆದರೆ ಗೋ ಮಾತೆಯ ಹೆಸರಿನಲ್ಲಿ ಇದೆಲ್ಲಾ ನಡೆದಿರುವುದರಿಂದ -ಜಾ ಸರ್ಕಾರ ಇದ್ಯಾವುದರ ಬಗ್ಗೆಯೂ ಚಕಾರವೆತ್ತುವುದಿರಲಿ, ಸ್ವತಃ ರವೇ ಇವೆಲ್ಲಾ ಅಕ್ರಮಗಳಿಗೆ ಸಹಾಯಹಸ್ತ ನೀಡಿದೆ ಎಂದರೆ ಇನ್ನು ರಕ್ಷಕ' ರಾಘವೇಶ್ವರನನ್ನು ಪ್ರಶ್ನಿಸುವವರು ಯಾರು!?

ಗೋ ಬಗ್ಗೆ ಢೋಂಗಿ ಪ್ರೀತಿ

ಈ ರಾಘವೇಶ್ವರನ ಕುಖ್ಯಾತ ಗೋ ಸಮ್ಮೇಳನ ಪ್ರಾರಂಭವಾದಾಗ ಕಡುಗೆಂಪು ಬಣ್ಣದ ಆಕಳ ಕರುವೊಂದನ್ನು ಮುದ್ದಿಸುತ್ತಿರುವ ಚಿತ್ರ ತೇಕ ಪತ್ರಿಕೆಗಳಲ್ಲಿ ಕಂಗೊಳಿಸಿತು. ಆದರೆ ಇದೇ ಗೋ ಸಮ್ಮೇಳನಕ್ಕೊಂದು ವೇಶ್ವರ ಸಾಮಾನ್ಯ ಜನರಿಗೆ ಕೊಟ್ಟ ಕಿರುಕುಳ ಮಾತ್ರ ಎಲ್ಲೂ ಪ್ರಕಟಗೊಳ್ಳಲಿಲ್ಲ!

ಗೋ ಸಮ್ಮೇಳನ ಹೆಸರಿನಲ್ಲಿ ತನ್ನ ತುಲಾಭಾರ ಮಾಡಿಸಿಕೊಂಡ ರಾಘವೇಶ್ವರ ಹಣ, ಗೋಡಂಬಿ, ದ್ರಾಕ್ಷಿಗಳನ್ನು ಮೂಟೆಗಟ್ಟಲೆ ಸಂಗ್ರಹಿಸಿದ. ಅದರೊಂದಿಗೆ ಯಡ್ಡಿ ಕೃಪಾಶೀರ್ವಾದದಿಂದ ಬಂದ ಐದು ಕೋಟಿ ರೂಪಾಯಿಗಳೂ ಸಾಲದೆಂಬಂತೆ ಸಮ್ಮೇಳನದ ಸಮಯದಲ್ಲಿ ನಿರ್ಮಿಸಲಾಗಿದ್ದ ವ್ಯಾಪಾರ ಮಳಿಗೆಗಳಿಂದಲೂ ಅನಾಮತ್ತು 25 ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿದ. ಅದೂ ಸಾಲದೆಂಬಂತೆ ಸಮ್ಮೇಳನ ನಡೆಯುತ್ತಿದ್ದ ಜಾಗದ ರಸ್ತೆ ಬದಿಯಲ್ಲಿ ಚಿಕ್ಕಪುಟ್ಟ ವಸ್ತುಗಳನ್ನು ಮಾರುತ್ತಿದ್ದ ಬಡ ವ್ಯಾಪಾರಿಗಳನ್ನೂ ಹೆದರಿಸಿದ. ಅವರಲ್ಲಿ ಹಲವರು ಹಣ (ಹಫ್ತಾ!) ನೀಡಲಿಲ್ಲವೆಂದು ಅವರ ವಸ್ತುಗಳನ್ನೆಲ್ಲಾ ಮುಟ್ಟುಗೋಲು ಮಾಡಿಕೊಂಡ!

ಇದು ರಾಘವೇಶ್ವರ 'ಗೋ ಸಮ್ಮೇಳನ' ನಡೆಸಿದ ಪರಿ!

ನಮ್ಮ ಸಮಾಜದಲ್ಲಿ ನಡೆಯುತ್ತಿರುವ ಅಸಂಬದ್ಧಗಳನ್ನು ನೋಡಿ: ಒಂದೆಡೆ ವಿದರ್ಭಾದ ರೈತರಿಗೆ ಪ್ರಧಾನಮಂತ್ರಿ ಘೋಷಿಸಿರುವ ಪ್ಯಾಕೇಜ್‌ನಡಿ ಗೋವುಗಳ ವಿತರಣೆ, ಇನ್ನೊಂದೆಡೆ ದಲಿತರ ಮನೆಯಲ್ಲಿ ಮಲಗಿದ ಮುಖ್ಯಮಂತ್ರಿ ಕುಮಾರಸ್ವಾಮಿಯಿಂದ ಅದೇ ದಲಿತರಿಗೆ ದನಗಳ ವಿತರಣೆ. ಆದರೆ ಎರಡೂ ಕಡೆ ಗೋವುಗಳನ್ನು ಸಾಕಲಾಗದೇ ಜನರು ಕಂಗಾಲು....

ಇದೇ ಪರಿಸ್ಥಿತಿಯಲ್ಲಿ ಗೋವುಗಳ ರಕ್ಷಣೆ ಹೆಸರಲ್ಲಿ ಬ್ರಾಹ್ಮಣ ಮಠಾಧೀಶನೊಬ್ಬನಿಗೆ ಸರ್ಕಾರದಿಂದ ಕೋಟ್ಯಂತರ ರೂಪಾಯಿಗಳು, ಭಕ್ತರಿಂದ ಇನ್ನೂ ಹೆಚ್ಚು ರೂಪಾಯಿಗಳ ದೇಣಿಗೆ... ಇದೇ ನೆಪದಲ್ಲಿ ಪರಿಸರ ನಾಶ, ಪಂಕ್ತಿ ಭೇದ, ಅಕ್ರಮ ಭೂ ಕಬಳಿಕೆ, ಚೆಡ್ಡಿ ಸಿದ್ಧಾಂತಕ್ಕೆ ಪುಷ್ಟಿ!!

ಹಮಾರ ಭಾರತ್ ಮಹಾನ್!!!

ಗೋ ಹೆಸರಲ್ಲಿ ಅದಿರು ಲೂಟಿ!

ರಾಮಚಂದ್ರಾಪುರ ಮಠದ ಸ್ವಾಮಿ ರಾಘವೇಶ್ವರನೊಂದಿಗೆ ಅಲ್ಲಿನ ಗಣಿಯನ್ನು ಲೂಟಿ ಮಾಡಲು ಸಾಗರದ ಶಾಸಕ ಗೋಪಾಲಕೃಷ್ಣ ಬೇಳೂರು ಮತ್ತು ಹೊಸನಗರದ ಶಾಸಕ ಹರತಾಳು ಹಾಲಪ್ಪ ಎಂಬ ಕಮಿಷನ್ ಏಜೆಂಟರು ಸ್ಕೆಚ್ ಹಾಕಿದ್ದಾರೆ. ಇದಕ್ಕೊಂದು ಗೋ ಸಮ್ಮೇಳನದಲ್ಲಿ ಈ ಮೂವರೂ ಗ್ರ್ಯಾಂಡ್ ರಿಹರ್ಸಲ್ ನಡೆಸಿದ್ದಾರೆ.

ಈ ಗಣಿ ಲೂಟಿಯ ಹಿಂದೆ ಒಂದು ದೊಡ್ಡ ಕತೆಯೇ ಇದೆ:

ಕಳೆದ ವರ್ಷ ಸಾಗರದ ಶರಾವತಿ ಹಿನ್ನೀರಿನಲ್ಲಿರುವ ಅಂಬಾರ ಗುಡ್ಡದಲ್ಲಿ ಕಬ್ಬಿಣದ ಅದಿರನ್ನು ಅಗೆಯುವ ಗಣಿಯೊಂದು ಪ್ರಾರಂಭವಾಯಿತು. ರಾತ್ರೋರಾತ್ರಿ ಬೆಟ್ಟವನ್ನು ಅಗೆಯುವ ಯಂತ್ರಗಳು ಗುಡ್ಡದ ತಪ್ಪಲಿನಲ್ಲಿ ಪ್ರತ್ಯಕ್ಷವಾದವು. ಸ್ಥಳೀಯರು ಏನಾಗುತ್ತಿದೆ ಎಂದು ಅರ್ಥ ಮಾಡಿಕೊಳ್ಳುವುದರೊಳಗೆ ಯಂತ್ರಗಳು ಗುಡ್ಡಗಳನ್ನು ಬಗೆದು ಹಾಕಿದವು.

ಪರಿಸರ ಹೀಗೆ ನಾಶವಾಗುತ್ತಿರುವುದನ್ನು ಕಂಡು ಪ್ರಗತಿಪರರೆಲ್ಲಾ 'ಅಂಬಾರಗುಡ್ಡ ಉಳಿಸಿ ಒಕ್ಕೂಟ'ವನ್ನು ರಚಿಸಿಕೊಂಡು ಹೋರಾಟ ಪ್ರಾರಂಭಿಸಿದರು. ಇದನ್ನು ಕಂಡ ಚೆಡ್ಡಿಗಳು ತಾವೂ ಪರಿಸರ ಕಾಳಜಿ ಹೊಂದಿರುವವರೆಂದು ತೋರಿಸಿಕೊಳ್ಳಲು ರಾಘವೇಶ್ವರನ ನೇತೃತ್ವದಲ್ಲಿ 'ಕೊಡಚಾದ್ರಿ ಸಂಜೀವಿನಿ' ಎಂಬ ವೇದಿಕೆಯನ್ನು ಕಟ್ಟಿಕೊಂಡು ಹಲವು ಕಡೆ ಭಾಷಣಗಳನ್ನು ಬಿಗಿದರು.


ಸಾರ್ವಜನಿಕರ ತೀವ್ರ ಒತ್ತಡದಿಂದಾಗಿ ಕೊನೆಗೂ ಗಣಿಗಾರಿಕೆ ನಿಂತುಹೋಯಿತು. ಆದರೆ ಅದಕ್ಕೂ ಮುನ್ನ ಹದಿನೈದು ದಿನಗಳ ಕಾಲ ಬಗೆದ ಕಬ್ಬಿನ ಅದಿರಿನ ಮೌಲ್ಯ ಕನಿಷ್ಠವೆಂದರೂ ಎರಡು ಕೋಟಿ ರೂಪಾಯಿಗಳು! ಇಷ್ಟು ಮೊತ್ತದ ಅದಿರು ಹಾಗೇ ಬಿದ್ದಿರುವುದನ್ನು ನೋಡಲಾರದೆ ಅದನ್ನು ಸಾಗಿಸಲು ಬಳ್ಳಾರಿಯ ಗಣಿ ಮಾಲೀಕ ಮತ್ತು ಚೆಡ್ಡಿ ಶಾಸಕ ಅನಿಲ್‌ಲಾಡ್ ಮುಂದಾಗಿದ್ದಾರೆ. ಆತನಿಗೆ ಸಾಥ್ ನೀಡುತ್ತಿರುವವರು ರಾಘವೇಶ್ವರ ಸ್ವಾಮಿ ಮತ್ತು ಬೇಳೂರು, ಹಾಲಪ್ಪ ಎಂಬ ಅಡ್ನಾಡಿ ಶಾಸಕರು!

ಆದರೆ ಎರಡು ಕೋಟಿ ರೂಪಾಯಿ ಮೌಲ್ಯದ ಅದಿರನ್ನು ಸಾಗಿಸುವ ಮುನ್ನ ನ್ಯಾಯಾಲಯದ ಮುಂದಿರುವ ಸಾರ್ವಜನಿಕ ಅರ್ಜಿಯೊಂದು ವಿಲೇವಾರಿ ಆಗಬೇಕಿದೆ. ಇದು ಸದ್ಯದಲ್ಲೇ ನಡೆಯುತ್ತದೆ ಎಂದು ಅರಿತುಕೊಂಡಿರುವ ರಾಘವೇಶ್ವರ ಎರಡು ತಿಂಗಳ ಕಾಲ ಪ್ರವಾಸ ಹೋಗುವ ತಂತ್ರವನ್ನು ಈಗಾಗಲೇ ರೂಪಿಸಿದ್ದಾರೆ. ಹೇಗಿದ್ದರೂ ಕೋ-ಜಾ ಸರ್ಕಾರವೇ ಅಧಿಕಾರದಲ್ಲಿರುವುದರಿಂದ, ರಾಘವೇಶ್ವರ ಅತ್ತ ಹೋಗುತ್ತಿದ್ದಂತೆ, ಇತ್ತ ಕಬ್ಬಿಣದ ಅದಿರನ್ನು ಸಾಗಿಸುವುದಕ್ಕೆ ಅನಿಲ್ ಲಾಡ್ ತಯಾರಾಗಿ ನಿಂತಿದ್ದಾರೆ.

ಅಂಬಾರಗುಡ್ಡದ ಅದಿರು, ರಾಘವೇಶ್ವರನ ಜಾತ್ರೆ!!

ರಾಘವೇಶ್ವರನಿಗೆ 5 ಕೋಟಿ ರೂ. ಅಮೃತ್‌ಮಹಲ್‌ಗೆ ಚಿಪ್ಪು!

ಯಡ್ಡಿಯ ಚೆಡ್ಡಿ ಸರ್ಕಾರವು ಸಂಘ ಪರಿವಾರದ ವಕ್ತಾರನಂತಿರುವ ರಾಘವೇಶ್ವರ ಸ್ವಾಮಿಯ 'ಗೋ ಸಮ್ಮೇಳನಕ್ಕೆ' ಐದು ಕೋಟಿ ರೂಪಾಯಿಗಳನ್ನು ಮಾಡುತ್ತದೆ. ಸಾರ್ವಜನಿಕರ ಹಣವಾದ ಈ ಐದು ಕೋಟಿ ರೂಪಾಯಿಗಳನ್ನು ಯಾವ ಮುಜುಗರವೂ ಇಲ್ಲದೆ ಸ್ವೀಕರಿಸಿದ ರಾಘವೇಶ್ವರ ಸ್ವಾಮಿ ನ್ನು ತನ್ನನ್ನು ವೈಭವೀಕರಿಸುವ ಕಾರ್ಯಕ್ರಮಕ್ಕೆ ಪೋಲು ಮಾಡುತ್ತಾನೆ. ಇಂತಹ ವೆಚ್ಚದಿಂದ ಸರ್ಕಾರದ ಖಜಾನೆ ಬರಿದಾಗುತ್ತದೆಯೇ ಹೊರತು ಸಾಮಾನ್ಯರಿಗೆ ನಯಾಪೈಸೆಯ ಲಾಭವಿಲ್ಲ. ಆದರೆ ಐದು ಕೋಟಿಯ ಹಣದಲ್ಲಿ ಅಜ್ಜಂಪುರದಲ್ಲಿರುವ ಮೃತ್‌ಮಹಲ್ ತಳಿಗಳ ಸಂರಕ್ಷಣೆ ಕೇಂದ್ರಕ್ಕೆ, ಒಂದೇ ಒಂದು ಕೋಟಿ ರೂಪಾಯಿಗಳನ್ನು ...ದ್ದರೂ ಅದರಿಂದ ಸರ್ಕಾರಕ್ಕೆ ನಷ್ಟವೆಂಬುದೂ ಇರುತ್ತಿರಲಿಲ್ಲ, ಜನಸಾಮಾನ್ಯರಿಗೆ ಲಾಭವೇ ...ತ್ತು.



...ಕೆಂದರೆ ಆ ಕೇಂದ್ರದಲ್ಲಿ ಅಮೃತ್‌ಮಹಲ್ ತಳಿಗಳನ್ನು ರಕ್ಷಿಸಲಾಗುತ್ತಿದೆಯಲ್ಲದೆ, ಗಂಡು ...ಗಳನ್ನು ರೈತರಿಗೆ ಹರಾಜು ಮಾಡಿ ಸರ್ಕಾರಕ್ಕೆ ಹಣ ಸಂಪಾದಿಸಲಾಗುತ್ತದೆ. ನಿಜವಾಗಲೂ ಕೇಂದ್ರವನ್ನು ಉದ್ಧಾರ ಮಾಡಿದರೆ ವರ್ಷವೊಂದಕ್ಕೆ, ಒಂದು ಕೋಟಿ ರೂಪಾಯಿಗಳ ...ರದ ಬಂಡವಾಳದೊಂದಿಗೆ ಕನಿಷ್ಠ 50 ಲಕ್ಷ ರೂಪಾಯಿಗಳ ಲಾಭವನ್ನು ಕಾಣಬಹುದು. ಆದರೆ ತಲೆಯಲ್ಲಿ ಲದ್ದಿ ತುಂಬಿಕೊಂಡಿರುವ ಯಡಿಯೂರಪ್ಪನಿಗಾಗಲಿ, ಗೋಮೂತ್ರವನ್ನೇ ...ರಿಗೂ ಕುಡಿಸಲು ಹೊರಟಿರುವ ರಾಘವೇಶ್ವರನಿಗಾಗಲಿ ಇಷ್ಟು ಸರಳ ಜ್ಞಾನ ಹೇಗೆ ...ಬಂದೀತು? ಸಾರ್ವಜನಿಕರ ದುಡ್ಡು ಯಡ್ಡಿ-ರಾಘವೇಶ್ವರನ ಜಾತ್ರೆ ಎಂಬಂತಾಗಿದೆ!

ಜಗ್ಗನ ಭೂಕಬಳಿಕೆಗೆ ತತ್ತರಿಸಿದ ಯಲಹಂಕ



ಎಲ್ಲೆ ಮೀರಿ ಬೆಳೆಯುತ್ತಿರುವ ಬೆಂಗಳೂರಿನಲ್ಲಿ ಈಗ ರಿಯಲ್ ಎಸ್ಟೇಟ್ ಬಿಸಿನೆಸ್‌ಗೆ ಭಾರೀ ಬೂಮ್. ಹಾಗಾಗಿ ಇಲ್ಲಿ ಭೂಮಿಗೆ ಈಗ ಬಂಗಾರದ ಬೆಲೆ ಬಂದು ಬಿಟ್ಟಿದೆ. ಇದರ ಸಹಜ ತಾರ್ಕಿಕ ಬೆಳವಣಿಗೆ ಎಂಬಂತೆ ಭೂಗಳ್ಳರ ದೊಡ್ಡದೊಡ್ಡ ಮಾಫಿಯಾಗಳೇ ಬೆಳೆದು ನಿಂತು ಮಚ್ಚು ಲಾಂಗು ಕೊನೆಗೆ ಬಂದೂಕಿನ ಸಂಸ್ಕೃತಿಯನ್ನು ಹುಟ್ಟು ಹಾಕಿವೆ. ಇತ್ತೀಚೆಗೆ ಭೂಮಿ ಸಂಬಂಧವಾಗಿ ನಡೆದ ಕೊಲೆಗಳು ಬೆಂಗಳೂರನ್ನು ಬೆಚ್ಚಬೀಳಿಸಿವೆ. ಒಟ್ಟಾರೆಯಾಗಿ ಇದು ದೊಡ್ಡದೊಡ್ಡ ರಿಯಲ್ ಎಸ್ಟೇಟ್ ಕಂಪೆನಿಗಳಿಗೆ, ಭೂಗಳ್ಳರಿಗೆ ಕೋಟ್ಯಂತರ ರೂಪಾಯಿಗಳನ್ನು ತರುವ ವರದಾನವಾಗಿ ಪರಿಣಮಿಸಿದರೆ ಅಮಾಯಕ ಜನರಿಗೆ ನಿತ್ಯ ನೋವು ಉಣಿಸುವ ಕಂಟಕಗಳಾಗಿ ಪರಿಣಮಿಸಿದೆ. ಬಡಿಗಾಸಿನ ಪರಿಹಾರ ಕೊಟ್ಟು ರೈತರ ಜಮೀನನ್ನು ಕಸಿದುಕೊಳ್ಳುವ ಸರ್ಕಾರದ ಕಾಟ ಒಂದೆಡೆಯಾದರೆ ಸ್ವಂತ ಜಮೀನಿದ್ದರೂ ಅದನ್ನು ಅನುಭವಿಸದಂತೆ ಬೆದರಿಕೆ ಒಡ್ಡುವ ಭೂಗಳ್ಳ ರೌಡಿಗಳ ಕಾಟ ಇನ್ನೊಂದೆಡೆ.

ನಗರದ ಹೊರವಲಯದ ಯಲಹಂಕದಲ್ಲಿ ನಡೆಯುತ್ತಿರುವುದೂ ಇದೆ. ಜಗ್ಗ ಅಲಿಯಾಸ್ ಜಗದೀಶ್ ಎಂಬ ಭೂಗಳ್ಳ ರೌಡಿಯ ಗ್ಯಾಂಗಿಗೆ ತತ್ತರಿಸಿ ಭೂಮಿ ಕಳೆದುಕೊಂಡ ಅದೆಷ್ಟೋ ಅಮಾಯಕರು ಇಲ್ಲಿದ್ದಾರೆ. 'ಯಲಹಂಕ ವಾಯ್ಸ್' ಎಂಬ ಪುಟಗೋಸಿ ಪತ್ರಿಕೆಯ ಸಂಪಾದಕ ಅನಿಲ್‌ರಾಜ್ ಎಂಬ ಅಡ್ನಾಡಿ ಪತ್ರಕರ್ತ ಹಾಗೂ ಚಿಕ್ಕಜಾಲ ಪೊಲೀಸರು ಜಗ್ಗ ದಯಪಾಲಿಸಿದ ...

ಇವರಿಬ್ಬರಿಗೆ 1983ರಲ್ಲಿ ಶೇಖರ್ ಎಂಬ ಪುತ್ರನೂ ಹುಟ್ಟಿದ್ದ. ಕೆಲಸ ವನ್ನರಸಿಕೊಂಡು 1984ರಲ್ಲಿ ಪಕ್ಕದ ಕೋಗಿಲು ಗ್ರಾಮಕ್ಕೆ ಕುಟುಂಬ ಸಮೇತವಾಗಿ ಬಂದ ಈಕೆ ಆಶ್ರಯ ಪಡೆದದ್ದು ಚಿನ್ನಪ್ಪನ ಮನೆಯಲ್ಲಿಯೇ. ಕಂಡಕಂಡವರನ್ನು ಮೋದಿ ಮಾಡಿ ಜನರನ್ನು ಬುಟ್ಟಿಗೆ ಹಾಕಿಕೊಳ್ಳುವ ಕಾಯಕದಲ್ಲಿ ನಿಸ್ಸೀಮಳಾದ ಈಕೆಗೆ ಊರಿನಲ್ಲಿ ಪಿಳ್ಳಣ್ಣ ಚಿಕ್ಕಣ್ಣರಂತಹ ಅದೆಷ್ಟು ಜನ ಸ್ನೇಹಿತರಿದ್ದಾರೋ ಅವಳಿಗೇ ಗೊತ್ತಿಲ್ಲ. ಇವಳ ಅವಾಂತರ ಗಳನ್ನು ಕಂಡ ಅವಳ ಗಂಡ ಕೃಷ್ಣಪ್ಪ ಇವಳನ್ನು ಬಿಟ್ಟು ಹೊರಟೇ ಹೋದ. ಕಳೆದ ವರ್ಷ ಆಕೆಯ ಮಗ ಶೇಖರ್‌ನಿಗೆ ಮದುವೆಯಾದಾಗ ಈ ಚಿಕ್ಕಣ್ಣ ಎಂಬುವವನೇ ಖುದ್ದಾಗಿ ನಿಂತು ತಾನೇ ಶೇಖರ್‌ನ ತಂದೆ ಎಂದು ಹೇಳಿಕೊಂಡು ಶಾಸ್ತ್ರಗಳನ್ನು ಮಾಡಿದ! ಅದಕ್ಕಿಂತ ಮೊದಲು ಊರಿನಲ್ಲಿ 'ಪಿಳ್ಳಣ್ಣನೇ ನನ್ನ ಗಂಡ' ಎಂದು ಹೇಳಿಕೊಂಡು ತಿರುಗಾಡುತ್ತಿದ್ದ ಈಕೆ ಕೊನೆಗೆ ಅವನ ವಿರುದ್ಧವೇ ತಿರುಗಿ ಬಿದ್ದು ಕಂಪ್ಲೇಂಟ್ ಕೊಟ್ಟು 1 ಲಕ್ಷ ರೂಪಾಯಿಗಳನ್ನು ವಸೂಲಿ ಮಾಡಿದಳೆಂದು ಊರಿನ ಜನ ಹೇಳುತ್ತಾರೆ.

ಊರಿಗೆ ಬಂದ ಹೊಸತರಲ್ಲಿ ಆಶ್ರಯ ನೀಡಿದ ಚಿನ್ನಪ್ಪನ ತಮ್ಮ ನಾರಾಯಣನೊಂದಿಗೆ ಸಂಬಂಧವೇರ್ಪಡಿಸಿ ಕೊಂಡು ಅವರಿಬ್ಬರೂ ಪ್ರತ್ಯೇಕವಾಗಿ ಪಕ್ಕದ ಕೋಗಿಲೂರು ಲೇಔಟ್‌ನಲ್ಲಿ ವಾಸವಾಗಿದ್ದರು. ನಾರಾಯಣಪ್ಪನಿಗೆ ಮದುವೆಯಾಗದ ಕಾರಣ ಈ ಸಂಬಂಧವನ್ನು ಅವನು ಬಹಳ ಸೀರಿಯಸ್ಸಾಗಿಯೇ ಪರಿಗಣಿಸಿದ. ಆದರೆ ಇಂತಹ ಹತ್ತು ಹಲವು ಸಂಬಂಧಗಳನ್ನು ಇಟ್ಟುಕೊಂಡಿದ್ದ ಶಾಂತಮ್ಮನ ತಲೆಯಲ್ಲಿದ್ದ ಲೆಕ್ಕಾಚಾರವೇ ಬೇರೆ. ನಾರಾಯಣಪ್ಪನ ಮುಗ್ಧತೆಯನ್ನು ಬಳಸಿಕೊಂಡ ಆಕೆ ಆತನನ್ನು ಸಂಪೂರ್ಣವಾಗಿ ತನ್ನ ಹತೋಟಿಯಲ್ಲಿಟ್ಟು ಕೊಳ್ಳಲು ಪ್ರಾರಂಭಿಸಿದಳು. ...

ಬಂಗಾರದ ಬೆಲೆ ಬಂದು ಎಕರೆ ಒಂದಕ್ಕೆ ಒಂದು ಕೋಟಿ ರೂಪಾಯಿಗಳನ್ನು ದಾಟತೋ ಆಗ ಶಾಂತಮ್ಮನಿಗೆ ದಿಢೀರ್ ಅಂತ ನಾರಾಯಣಪ್ಪನ ನೆನಪಾಯಿತು. ಯಾಕೆಂದರೆ ನಾರಾಯಣಪ್ಪನ ತಂದೆಗಿದ್ದ ಸುಮಾರು ಎರಡೂವರೆ ಎಕರೆಯಷ್ಟು ಆಸ್ತಿಯಲ್ಲಿ ಅವನಿಗೂ ಪಾಲಿದೆ ಎಂಬ ವಾಸ್ತವಾಂಶದ ಜ್ಞಾನೋದಯವಾಗಿಬಿಟ್ಟಿತು ಅವಳಿಗೆ! ಭೂಮಿಯ ಬೆಲೆ ಏರಿಕೆಯಾದಷ್ಟೂ ಅವಳಿಗೆ ನಾರಾಯಣ ಪ್ಪನ ಮೇಲಿನ ಪ್ರೀತಿ-ವ್ಯಾಮೋಹಗಳೂ ಉಕ್ಕಿ ಹರಿಯಲಾ ರಂಭಿಸಿದವು. ತಡ ಮಾಡದೇ ಸರಸರನೇ ಕೋಗಿಲು ಗ್ರಾಮಕ್ಕೆ ಬಂದ ಆಕೆ ನಾರಾಯಣಪ್ಪನೇ ತನ್ನ ನಿಜವಾದ ಗಂಡನೆಂದೂ, ತಾವಿಬ್ಬರೂ ರಿಜಿಸ್ಟರ್ ಮದುವೆಯಾಗಿ ದಂಪತಿಗಳಾಗಿದ್ದೇವೆಂದೂ, ಶೇಖರ್ ಎಂಬುವವನು ನಮ್ಮಿಬ್ಬರಿಗೆ ಹುಟ್ಟಿದ ಪುತ್ರನೇ ಹೊರತು ತನ್ನ ಮೊದಲಿನ ಗಂಡ ಕೃಷ್ಣಪ್ಪನಿಗೆ ಹುಟ್ಟಿದವನಲ್ಲ ಎಂದೂ ಹರಿಕಥೆ ಬಿಡುತ್ತಾ ಈಗ ನನ್ನ ಗಂಡನನ್ನು ಮರಳಿ ನನಗೆ ಒಪ್ಪಿಸಿ ಎಂದು ಊರಿನವರಿಗೆ ದುಂಬಾಲು ಬೀಳಲಾರಂಭಿಸಿದಳು. ಊರಿನವರಿಗೆ ಸತ್ಯ ಗೊತ್ತಿದ್ದರಿಂದ ಯಾರೂ ತಲೆ ಕೆಡಿಸಿಕೊಳ್ಳಲಿಲ್ಲ. ಇನ್ನು ಕೆಲವರು "ನೀನು ನಾರಾಯಣಪ್ಪ ಒಬ್ಬರಿಗೊಬ್ಬರು ಪರಿಚಯವಾದದ್ದೇ 1984ರಲ್ಲಿ. ಅಷ್ಟರಲ್ಲಾಗಲೇ ನಿನಗೆ ಶೇಖರ್ ಎಂಬ ಒಂದು ವರ್ಷದ ಮಗನಿದ್ದ. ಈಗ ದಿಢೀರ್ ಅಂತ ನಾರಾಯಣಪ್ಪ ಶೇಖರನಿಗೆ ತಂದೆ ಹೇಗಾಗುತ್ತಾನೆ?" ಅಂತ ಕೇಳಿ ಕೀಟಲೆ ಮಾಡಿದ್ದೂ ಉಂಟು. ಒಟ್ಟಿನಲ್ಲಿ ಇವಳ ಕಂತ್ರಿ ಪ್ಲಾನ್‌ಗೆ ಊರವರಿಂದ ಸಪೋರ್ಟ್ ಸಿಗದ ಕಾರಣ ಒಂದಿಷ್ಟು ಕಾಲ ಸುಮ್ಮನಿದ್ದಂತಿದ್ದ ಈಕೆ ನೇರವಾಗಿ ಚಿನ್ನಪ್ಪನ ಮನೆಗೆ ಬಂದು ರಾದ್ಧಾಂತ ಮಾಡಲಾರಂಭಿಸಿದಳು. ಆಸ್ತಿಗಾಗಿ ತಮ್ಮನನ್ನು ಕೂಡಿ ಹಾಕಿದ್ದಾರೆ ಎಂದು ಕೂಗಾಡಲಾರಂಭಿಸಿದಳು. ನನ್ನ ಗಂಡ(!)ನನ್ನು ನನಗೊಪ್ಪಿಸಿ ಎಂದು ರೋದಿಸಲಾರಂಭಿಸಿದಳು. ಆಗಲೂ ಅವಳಿಗೆ ಯಾರೂ ಸೊಪ್ಪು ಹಾಕಲಿಲ್ಲ.

ಕುಮಾರ್ ಬುರಡಿಕಟ್ಟಿ

ತಾವು ಅಂದುಕೊಂಡ ಪ್ಲಾನಿನಂತೆಯೇ ಜಗ್ಗ ... ಶಾಂತಮ್ಮ ಕಳೆದ ಜನವರಿ 8 ರಂದು ... ಗೂಂಡಾ ಪಡೆಯೊಂದನ್ನು ಕಟ್ಟಿಕೊಂಡು ಚಿನ್ನಪ್ಪ ... ತಮ್ಮ ಜಮೀನಿಗೆ ಹಾಕಿದ ಕಲ್ಲಿನ ಕಾಂಪೌಂಡನ್ನು ... ಹಾಕಿದರು. ನಾರಾಯಣಪ್ಪನಿಗೆ ಬರಬೇಕಾದ 1/3 ... ಆಸ್ತಿಯನ್ನು ಕೊಟ್ಟುಬಿಡಿ ಎಂದು ಗಲಾಟೆ ಮಾಡಿ... (ಚಿನ್ನಪ್ಪನ ತಂದೆಗೆ ಮೂವರು ಪುತ್ರರು, ಇಬ್ಬರು ಪುತ್ರಿ... ಹಾಗಾಗಿ ಮೂವರು ಪುತ್ರರಿಗೆ ಮಾತ್ರ ಆಸ್ತಿ ಪಾಲಾಗ... ಎಂಬುದು ಅವರ ವಾದ). ಇವರಿಗೆ ಸೊಪ್ಪು ... ಚಿನ್ನಪ್ಪ ನೇರವಾಗಿ ಚಿಕ್ಕಜಾಲ ಪೊಲೀಸ್ ಸ್ಟೇಷ... ಇದರ ವಿರುದ್ಧ ದೂರು ಕೊಟ್ಟರು. ಆದರೆ ಚಿ... ಪೊಲೀಸರೂ ಜಗ್ಗನೊಂದಿಗೆ ಶಾಮೀಲಾಗಿ... ಕಂಪ್ಲೇಂಟ್ ಕೊಟ್ಟಿದ್ದಕ್ಕಾಗಿ "ಸ್ವೀಕೃತಿ ಪ್ರತಿ"ಯನ್ನು ಕೊ... ಇಲ್ಲ. ಚಿನ್ನಪ್ಪ ಎರಡು ದಿನಗಳ ನಂತರ ಜನವ... ರಂದು ಮತ್ತೆ ಕಂಪ್ಲೇಂಟ್ ಕೊಟ್ಟು, ಒತ್ತಾಯಿಸಿ ... ಪಡೆಯಬೇಕಾಯ್ತು. ಆಗಲೂ ಸಹ ಆಗ ಇದ್ದ ... ಗೋವಿಂದರಾಜ್ "ನೀವು ಕಂಪ್ಲೇಂಟ್ ಕೊಡು... ವಿಚಾರದಲ್ಲಿ involve ಆಗಿರು... ಯಾರು ಗೊತ್ತಾ?" ಎಂದು ಚಿನ್ನ... ದುರುಗುಟ್ಟಿಕೊಂಡು ಕೇಳಿದ್ದಾನೆ. ... ಅವರು ಗೊತ್ತಿಲ್ಲ ಎಂದಾಗ ... ದೆವ್ವ-ಭೂತದ ಹೆಸರು ಹೇಳಿ ಭಯಭೀತ... ಮಾಡುವಂತೆ "ಜಗ್ಗ" ಎಂದು ಹೇಳಿದ್ದಾನೆ ಆ ... ಅಂದರೆ ಜಗ್ಗ involve ಆಗಿರುವುದರಿಂದ ತಲೆ... ಮಾಡದೆ ಸುಮ್ಮನಾಗಿ ಎಂಬ ಭಾವಾರ್ಥವನ್ನು ... ಗೋವಿಂದರಾಜ್ ಹೇಳಿದ್ದಾನೆ. ಇದರಿಂದ ಚಿ... ಪೊಲೀಸರಿಗೆ ಜಗ್ಗ ಎಷ್ಟು ಪರ್ಸೆಂಟೇಜ್ ಮೇಯಿ... ಎಂಬುದು ಈಗ ಬಯಲಾಗಬೇಕಿದೆ.


ಆದ್ದರಿಂದಲೇ ಪೊಲೀಸರಿಂದ ಜಗ್ಗ ...

ಹಾಗೂ ಚಿಕ್ಕಜಾಲ ಪೊಲೀಸರು ಜಗ್ಗ ದಯಪಾಲಿಸಿದ ಪರ್ಸೆಂಟೇಜ್ ಪ್ರಸಾದವನ್ನು ಸ್ವೀಕರಿಸಿ ಅವನ ದಗಲ್ಬಾಜಿ ದಂಧೆಗೆ ಬೆಂಗಾವಲಾಗಿ ನಿಂತ ಮೇಲಂತೂ ಜಗ್ಗನ ಗ್ಯಾಂಗಿನ ಅಟ್ಟಹಾಸ ಎಲ್ಲೆ ಮೀರಿಹೋಗಿದೆ. ಜಗ್ಗ ಮತ್ತು ಅನಿಲ್‌ರಾಜ್ ಇಬ್ಬರೂ ಸೇರಿ ಗೌರಿ ಲಂಕೇಶ್ ಮತ್ತು ರವಿ ಬೆಳಗೆರೆ ತಮಗೆ ಆಪ್ತ ಮಿತ್ರರೆಂದೂ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನೇಸರ್ಗಿ ತಮ್ಮ ಬೆಂಗಾವಲಿಗಿದ್ದಾರೆಂದೂ ಹೇಳಿಕೊಳ್ಳುತ್ತಾ ಅಮಾಯಕ ಜನರ ಜೀವ ಹಿಂಡುತ್ತಿರುವುದರಿಂದ ಜನ ರೋಸಿಹೋಗಿದ್ದಾರೆ. ಜಗ್ಗನ ಗ್ಯಾಂಗಿನ ಲೇಟೆಸ್ಟ್ ಬಲಿಪಶು ಎಂದರೆ ಯಲಹಂಕದ ಬಳಿಯ ಕೋಗಿಲು ಗ್ರಾಮದ ಚಿನ್ನಪ್ಪ ಆ್ಯಂಡ್ ಫ್ಯಾಮಿಲಿ!



ನಾರಾಯಣಪ್ಪ

ಹೌದು. ಇಲ್ಲಿ ಅನಾವರಣಗೊಳ್ಳುತ್ತಿರುವುದು ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕದ ಸಮೀಪ ಇರುವ ಕೋಗಿಲು ಗ್ರಾಮದ ಸಭ್ಯಸ್ಥ ಚಿನ್ನಪ್ಪ ಎಂಬ ಅಮಾಯಕನ ಕುಟುಂಬದ ನೋವಿನ ಕಥೆ. ಚಿನ್ನಪ್ಪ ವ್ಹೀಲ್ ಆ್ಯಂಡ್ ಆಕ್ಸಲ್ ಎಂಬ ಸರ್ಕಾರಿ ಸ್ವಾಮ್ಯದ ಕಂಪೆನಿಯಲ್ಲಿ ನೌಕರನಾಗಿದ್ದು ಅವನ ಹೆಂಡತಿ ಗಂಗರತ್ನಮ್ಮ ಸರ್ಕಾರಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಚಿನ್ನಪ್ಪನಿಗೆ ನಾರಾಯಣಪ್ಪ ಮತ್ತು ವೆಂಕಟೇಶ್ ಎಂಬ ಇಬ್ಬರು ತಮ್ಮಂದಿರು ಹಾಗೂ ಕಾಂತಮ್ಮ ಮತ್ತು ಲಕ್ಷ್ಮಮ್ಮ ಎಂಬ ಇಬ್ಬರು ತಂಗಿಯರೂ ಇದ್ದಾರೆ. ಎಲ್ಲರಿಗೂ ಮದುವೆಯಾದರೂ ತಮ್ಮ ನಾರಾಯಣಪ್ಪನಿಗೆ ಮಾತ್ರ ಕಾರಣಾಂತರಗಳಿಂದ ಮದುವೆಯೇ ಆಗಲಿಲ್ಲ. ಒಟ್ಟು ಸುಮಾರು ಎರಡೂವರೆ ಎಕರೆಯಷ್ಟು ಜಮೀನು ಇರುವ ಈ ಕುಟುಂಬ 1984ರ ವರೆಗೆ ನೆಮ್ಮದಿಯಿಂದಲೇ ಬದುಕಿ ಬಾಳಿತ್ತು. ಯಾವಾಗ ಯಲಹಂಕದಿಂದ 1984 ರಲ್ಲಿ ಶಾಂತಮ್ಮ ಅಲಿಯಾಸ್ ಶಾರದಮ್ಮ ಎಂಬ ಖಳನಾಯಕಿ ಇವರ ಕುಟುಂಬದಲ್ಲಿ ಎಂಟ್ರಿಯಾದಳೋ ಆಗ ಶುರುವಾಯ್ತು ನೋಡಿ ಆ ಕುಟುಂಬದ ನೋವಿನ ಅಧ್ಯಾಯ.



ಶಾಂತಮ್ಮ ಎಂಬ ಸೆರಗು ಸೆಳೆಯುವ ಪ್ರವೀಣೆ


ಈ ಶಾಂತಮ್ಮ ಅಲಿಯಾಸ್ ಶಾರದಮ್ಮ ಎಂಬ ಚಾಲಾಕಿ ಮೂಲತಃ ಯಲಹಂಕದವಳು. ಇವಳಿಗೆ ಕೃಷ್ಣಪ್ಪ ಎಂಬ ಗಂಡನೂ ಇದ್ದ. ಹಾಗೂ

... ದಿನಾಲೂ ಸಾರಾಯಿ ಕುಡಿದುಕೊಂಡು ಬಂದು ಅವನಿಗೆ ಹೊಡೆಯುವುದು, ಬಯ್ಯುವುದು, ಚಿತ್ರ-ವಿಚಿತ್ರ ಹಿಂಸೆ ಕೊಡುವುದಕ್ಕೆ ಪ್ರಾರಂಭಿಸಿದಳು. ಇದನ್ನೆಲ್ಲಾ ಕಣ್ಣಾರೆ ಕಂಡ ಅಲ್ಲಿನ ಜನರು ಕೋಗಿಲು ಗ್ರಾಮಕ್ಕೆ ಬಂದು "ನಿಮ್ಮ ತಮ್ಮನನ್ನು ವಾಪಾಸ್ಸು ಕರೆದುಕೊಂಡು ಬನ್ನಿ, ಇಲ್ಲದಿದ್ದರೆ ಶಾಂತಮ್ಮ ಅವನನ್ನು ಸಾಯಿಸಿ ಬಿಡುತ್ತಾಳೆ" ಎಂದು ಚಿನ್ನಪ್ಪನಿಗೆ ಹೇಳಲಾರಂಭಿಸಿದರು. ಅತ್ತ ಕೋಗಿಲು ಲೇಔಟ್‌ನಲ್ಲಿ ಶಾಂತಮ್ಮನ ಚಿತ್ರಹಿಂಸೆ ತಾಳಲಾರದೆ ಹಾಗೂ ತಾನು ನಂಬಿದವಳೇ ತನಗೆ ಈ ರೀತಿ ಮಾಡುತ್ತಿರುವುದನ್ನು ಗಂಭೀರವಾಗಿ ತೆಗೆದುಕೊಂಡ ನಾರಾಯಣಪ್ಪ 4-5 ವರ್ಷಗಳ ಕೆಳಗೆ ಬುದ್ಧಿ ಭ್ರಮಣೆಗೊಳಗಾಗಿ ಅರೆಹುಚ್ಚನಂತಾದ. ಹೀಗಾಗಿದ್ದೇ ತಡ ಶಾಂತಮ್ಮ ಅವನಿಗೆ ಊಟ-ನೀರು ಕೊಡುವುದನ್ನು ನಿಲ್ಲಿಸಿಬಿಟ್ಟಳು. ಆದರೆ ಪೆಟ್ಟನ್ನು ಮಾತ್ರ ದಿನಾಲೂ ತಪ್ಪದೇ ಕೊಡುತ್ತಿದ್ದಳು. ಈ ವಿಷಯ ತಿಳಿದ ನಾರಾಯಣಪ್ಪನ ತಾಯಿ ಮತ್ತು ತಂಗಿ ಸುಮಾರು ಆರು ತಿಂಗಳು ಕಾಲ ಕೋಗಿಲು ಗ್ರಾಮದಿಂದ ಪ್ರತಿನಿತ್ಯ ಅವನಿಗೆ ಊಟ ತಂದುಕೊಟ್ಟರು. ಆತನನ್ನು ವಾಪಾಸ್ಸು ಕರೆದುಕೊಂಡು ಬರಲು ಅವರು ಮಾಡಿದ ಪ್ರಯತ್ನಗಳೆಲ್ಲಾ ವಿಫಲವಾದವು. ಒಂದು ದಿನ ಹೀಗೆ ಊಟ ಒಯ್ದಾಗ ಶಾಂತಮ್ಮನ ರಾಕ್ಷಸ ಪ್ರಜ್ಞೆ ಜಾಗೃತವಾಗಿಬಿಟ್ಟಿತು. ನಾರಾಯಣಪ್ಪ ಆತನ ತಾಯಿ-ತಂಗಿ-ಎಲ್ಲರನ್ನೂ ಚೆನ್ನಾಗಿ ಬಡಿದು, ಊಟವನ್ನು ಕಾಲಿನಿಂದ ಒದ್ದು ಚೆಲ್ಲಿ ರಂಪ ಮಾಡಿಬಿಟ್ಟಳು. ಇದಾದ ತಕ್ಷಣ ನಾರಾಯಣಪ್ಪನ ತಾಯಿ ಹಠ ಮಾಡಿ ಅವನನ್ನು ಕರೆದುಕೊಂಡು ಸೀದಾ ಕೋಗಿಲು ಗ್ರಾಮಕ್ಕೆ ಮರಳಿ ಬಂದರು. ಶಾಂತಮ್ಮನ ಪಾಲಿಗೆ ಪೀಡೆಯೊಂದನ್ನು ತೊಲಗಿಸಿದ ತೃಪ್ತ ಭಾವ. ಆ ನೆಮ್ಮದಿಯಲ್ಲಿಯೇ ಅವಳು ಹಾಯಾಗಿದ್ದು ನಾರಾಣಪ್ಪನನ್ನು ಮರೆತೇಬಿಟ್ಟಳು.

ಕೊನೆಗೂ ನೆನಪಾದ ನಾರಾಯಣಪ್ಪ

ಯಾವಾಗ ಬೆಂಗಳೂರಿನ ಹೊರ ವಲಯದಲ್ಲಿ ರಿಯಲ್ ಎಸ್ಟೇಟ್ ಬಿಸಿನೆಸ್ ಭಾರಿ ಚುರುಕಾಗಿ ನಡೆಯಲಾರಂಭಿಸಿತೋ, ಯಾವಾಗ ಭೂಮಿಗೆ

ನಗರದ ಹೊರವಲಯದ ಯಲಹಂಕದಲ್ಲಿ ನಡೆಯುತ್ತಿರುವುದೂ ಇದೆ. ಜಗ್ಗ ಅಲಿಯಾಸ್ ಜಗದೀಶ್ ಎಂಬ ಭೂಗಳ್ಳ ರೌಡಿಯ ಗ್ಯಾಂಗಿಗೆ ತತ್ತರಿಸಿ ಭೂಮಿ ಕಳೆದುಕೊಂಡ ಅದೆಷ್ಟೋ ಅಮಾಯಕರು ಇಲ್ಲಿದ್ದಾರೆ. 'ಯಲಹಂಕ ವಾಯ್ಸ್' ಎಂಬ ಪುಟಗೋಸಿ ಪತ್ರಿಕೆಯ ಸಂಪಾದಕ ಅನಿಲ್‌ರಾಜ್ ಎಂಬ ಅಡ್ನಾಡಿ ಪತ್ರಕರ್ತ ಹಾಗೂ ಚಿಕ್ಕ ಜಾಲ ಪೊಲೀಸರು ಜಗ್ಗ ದಯಪಾಲಿಸಿದ ಪರ್ಸೆಂಟೇಜ್ ಪ್ರಸಾದವನ್ನು ಸ್ವೀಕರಿಸಿ ಅವನ ದಗಲ್ಬಾಜಿ ದಂಧೆಗೆ ಬೆಂಗಾವಲಾಗಿ ನಿಂತ ಮೇಲಂತೂ ಜಗ್ಗನ ಗ್ಯಾಂಗಿನ ಅಟ್ಟಹಾಸ ಎಲ್ಲೆ ಮೀರಿಹೋಗಿದೆ.



ಪಾಖಂಡಿ ಪತ್ರಕರ್ತ ಅನಿಲ್‌ರಾಜ್

ಜಗ್ಗ ಆಂಡ್ ಗ್ಯಾಂಗ್‌ನ ಎಂಟ್ರಿ

ಹೀಗೆ ಹತಾಶಳಾಗಿ ಕುಳಿತ ಶಾಂತಮ್ಮ ಅಲಿಯಾಸ್ ಶಾರದಮ್ಮನ ಬವಣೆ ಹೇಗೋ ಜಗ್ಗನಿಗೆ ಗೊತ್ತಾಗಿಬಿಟ್ಟಿತು. ಮೂಲತಃ ಇಂತಹುದೇ ದಂಧೆ ಮಾಡುವ ಅವನಿಗೆ ಇದು ಗೊತ್ತಾಗಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ ಬಿಡಿ. ತಕ್ಷಣ ಕಾರ್ಯಪ್ರವೃತ್ತನಾದ ಅವನು ಚಿನ್ನಪ್ಪನ ಕುಟುಂಬಕ್ಕೆ ಇರುವ ಒಟ್ಟು ಜಮೀನು ಎಷ್ಟು? ಅದು ಎಲ್ಲಿದೆ? ಅದರ ಬೆಲೆ ಏನು, ಭಾಗ ಮಾಡಿದರೆ ನಾರಾಯಣಪ್ಪನಿಗೆ ಎಷ್ಟು ಸಿಗುತ್ತೆ? ಎಲ್ಲಾ ವಿಚಾರಗಳನ್ನು ಕಲೆ ಹಾಕಿ ನೇರವಾಗಿ ಶಾಂತಮ್ಮನನ್ನು ಭೇಟಿ ಮಾಡಿ ಮುಂದಿನ ತಂತ್ರ-ಕುತಂತ್ರಗಳ ಜಾಲವನ್ನು ಹೆಣೆದ. ನಾರಾಯಣಪ್ಪನ ಪಾಲಿಗೆ ಬರುವ ಆಸ್ತಿಯಿಂದ ಕೋಟ್ಯಧಿಪತಿಯಾಗಬಹುದೆಂದು ಕನಸು ಕಂಡ ಶಾಂತಮ್ಮನಿಗೆ ನಾರಾಯಣಪ್ಪನ ಮೇಲೆ ಪ್ರೀತಿ ಉಕ್ಕಿಹರಿದಂತೆಯೇ, ಒಟ್ಟಾರೆ ವಿವಾದದಲ್ಲಿ ತಾನೂ ಪುಗಸಟ್ಟೆಯಾಗಿ ತಿನ್ನಬೇಕೆಂಬ ಕನಸು ಕಂಡ ಜಗ್ಗನಿಗೆ ಶಾಂತಮ್ಮಳ ಮೇಲೆ ಪ್ರೀತಿ ಉಕ್ಕಿ ಹರಿಯಿತು!

ಜಗ್ಗನ ಲೆಕ್ಕಾಚಾರ ಏನೆಂದರೆ, ಶಾಂತಮ್ಮನಿಗೆ ಒಂದಿಷ್ಟು ಹಣ ಕೊಟ್ಟು ಅವಳನ್ನು ಸುಮ್ಮನಿರಿಸಿ ನಾರಾಯಣಪ್ಪನ ಪಾಲಿನ ಇಡೀ ಆಸ್ತಿಯನ್ನು ಗುಳುಂ ಮಾಡಬೇಕು ಎಂಬುದು.

ಅದುಮಿಡುವ ಕೆಲಸ ಆಗಲೇ ಇಲ್ಲ. ಪೊಲೀಸರು ... ಬೆನ್ನ ಹಿಂದೆ ಇರುವುದನ್ನು ಖಾತ್ರಿ ಮಾಡಿಕೊಂಡ ... ಚಿನ್ನಪ್ಪನವರ ಜಮೀನಿನಲ್ಲಿ ಗುಡಿಸಲುಗಳನ್ನು ಹಾ... ಪ್ಲಾನ್ ಹಾಕಿದ. ಇದು ಹೇಗೋ ಚಿನ್ನಪ್ಪನವರಿಗೆ ಗೊ... ದಿನಾಂಕ 19.1.2007 ರಂದು ಕೋರ್ಟಿನಿಂದ ತಡೆ... ತಂದರು (Case No. OS 153/2007).

ತನ್ನೆಲ್ಲಾ ಪ್ಲಾನ್‌ಗಳೂ ಸಕ್ಸಸ್ ಆಗದಿದ್ದ... ಒಳಗೊಳಗೇ ತಳಮಳಗೊಂಡ ಜಗ್ಗ ಏನಾದರೂ ... ನಾರಾಯಣಪ್ಪನನ್ನು ವಶಕ್ಕೆ ತೆಗೆದುಕೊಳ್ಳಬೇಕೆಂಬ ... ಪ್ಲಾನ್ ಹಾಕಿದ. ಜನವರಿಯ ಕೊನೆಯಲ್ಲಿ ಶಾ... ಮತ್ತು ಎಸ್‌ಐ ಗೋವಿಂದರಾಜ್ ಜೊತೆಗೆ ... ನಾರಾಯಣಪ್ಪನನ್ನು ಎತ್ತಿಕೊಂಡು ಹೋಗಲು ಬಂ... ಅದೂ ಕಾರಣಾಂತರಗಳಿಂದ ಸಕ್ಸಸ್ ಆಗಲಿಲ್ಲ.

ಕೊನೆಗೆ ನನಗೆ ಒಂದು ಸೈಟ್ ಕೊಡಿ ... ಸುಮ್ಮನಾಗುತ್ತೇನೆ ಎಂದು ಜಗ್ಗ ಕೇಳಲಾರಂಭಿಸಿ... ತನಕ ನಾರಾಯಣಪ್ಪನಿಗೆ ಆಸ್ತಿ ಕೊಡಿ, ಶಾಂತ... ಕೊಡಿ ಎಂದು ಮಾತನಾಡುತ್ತಿದ್ದವನು ಈಗ ನೇ... ನನಗೇ ಕೊಡಿ ಎಂದು ಮಾತನಾಡಲಾರಂಭಿಸಿದ... ನಡುವೆ ಎಸ್‌ಐ ಗೋವಿಂದರಾಜು ಜಗ್ಗನಿಗೆ ... ಕೇಳು ಜಮೀನು, ಸೈಟು ಬೇಡ" ಎಂದು ... ಕೊಟ್ಟರೂ ಅದಕ್ಕೆ ಜಗ್ಗ ಜಗ್ಗಲಿಲ್ಲ!

ಈ ನಡುವೆ ನಾರಾಯಣಪ್ಪನ ದೇಹ-...

ಮಾರ್ಚ್ 5 ರಂದು ಬೆಂಗಳೂರು ...ಗೆ ದಾಖಲು ಮಾಡಿದರು ಅಣ್ಣ ಚಿನ್ನಪ್ಪ ...ನಾರಾಯಣಪ್ಪನನ್ನು ಎತ್ತಿಕೊಂಡು ಹೋಗಲು ...ಧ್ಯವಾಗದ ಕಾರಣ ಈಗ ನೇರವಾಗಿ ...ಎತ್ತಿಕೊಂಡು ಹೋಗುವುದಕ್ಕೆ ಸಿದ್ಧತೆ ನಡೆಸಿದ. ...ರಂದು ಜಗ್ಗ ಮತ್ತು ಶಾಂತಮ್ಮ 40 ಜನರ ...ಟ್ಟಿಕೊಂಡು ನಿಮ್ಹಾನ್ಸ್ ಆಸ್ಪತ್ರೆಗೆ ನುಗ್ಗಿ ...ಗಿ discharge ಮಾಡಿಸಲು ಪ್ರಯತ್ನ ...ಇದರ ವಿರುದ್ಧ ವಿಲ್ಸನ್ ಗಾರ್ಡನ್ ಪೊಲೀಸ್ ... ಎರಡು ಬಾರಿ ದೂರು ...ಪೊಲೀಸರು ಅದಕ್ಕೆ ರಶೀದಿ ...ಈ ಕುರಿತು ನಿಮ್ಹಾನ್ಸ್‌ನ ... ಕೂಡ ಮಾರ್ಚ್ 14 ...ಪ್ಪ ದೂರು ಸಲ್ಲಿಸಿದ್ದಾರೆ. ...ರ ರೋಸಿಹೋದ ನಿಮ್ಹಾನ್ಸ್ ...ಮ್ಮ ಮನೆಯಲ್ಲಿಯೇ ಆ ...ರಿಸಿಕೊಳ್ಳಿ ಎಂದಾಗ ಜಗ್ಗ ...ಮತ್ತು ರಾಜಕೀಯ ನಾಯಕ ... ಕರೆದುಕೊಂಡು ಬಂದು ...ರಾಯಣಪ್ಪನ ಶುಶ್ರೂಷೆಗಾಗಿ ...ಮಗನನ್ನು ಅಲ್ಲಿಂದ ಓಡಿಸಿ ...ಗಿ ನಾರಾಯಣಪ್ಪನನ್ನು ...ಮಾಡಿಸಿಕೊಂಡು ಹೋಗಿದ್ದಾರೆ.




ಗಂಗರತ್ನಮ್ಮ

...ಲ್‌ರಾಜ್ ಎಂಬ ಅಡ್ನಾಡಿ ಪತ್ರಕರ್ತನ ಎಂಟ್ರಿ

...ಕೋಟಿ ಬೆಲೆಯ ಆಸ್ತಿಯಲ್ಲಿ ಒಂದಿಷ್ಟು ... ಸಿಗುತ್ತೆ ಎಂದಾಕ್ಷಣ ಅನಿಲ್‌ರಾಜ್ ಎಂಬ ...ಕರ್ತನೂ ಜಗ್ಗನೊಂದಿಗೆ ಸೇರಿದ. ವಾಸ್ತವದಲ್ಲಿ ...ರಾಜ್ ಈಗ್ಗೆ ನಾಲ್ಕೈದು ತಿಂಗಳ ಹಿಂದೆ ... ವಾಯ್ಸ್' ಮತ್ತು 'ಕ್ರೈಂ ಅಂಡ್ ಪಾಲಿಟಿಕ್ಸ್' ...ಕೆಗಳನ್ನು ಶುರು ಮಾಡಿಕೊಂಡು ಅವುಗಳ ...ವ್ಯವಸ್ಥಿತ ವಸೂಲಿಗಿಳಿದ ವಸೂಲಿ ಪ್ರವೀಣ. ...ಲ್ಲಿ ಭೂಮಿಗೆ ಬೆಲೆ ಏರುತ್ತಿದ್ದಂತೆ ಜಗ್ಗ ತನ್ನ ... ಮೂಲಕ ಕಮಾಯಿ ಶುರುವಿಟ್ಟುಕೊಂಡರೆ ...ರಾಜ್ ಪತ್ರಿಕೆ ಎಂಬ ಅಸ್ತ್ರವನ್ನು ಕಮಾಯಿಗಾಗಿ ...ನೆ. ವಾಸ್ತವದಲ್ಲಿ ಅವನು ಆ ಎರಡೂ ... ಪ್ರಾರಂಭಿಸಿದ್ದೇ ಈ ಕಾರಣಕ್ಕಾಗಿ ಎಂದರೆ ...ದು.

...ಖಂಡಿ ಅನಿಲ್‌ರಾಜ್ ಮಾರ್ಚ್ 10, 2007 ...ಹುಂಕ ವಾಯ್ಸ್ ಎಂಬ ಪತ್ರಿಕೆಯಲ್ಲಿ 'ರೋಚಕ ...ಗಿಲು ಗ್ರಾಮದಲ್ಲಿ ಮೂರು ಕೋಟಿ ಹುಚ್ಚೆ' ...ತಲ್ ಕೊಟ್ಟು ಶಾಂತಮ್ಮನ ಪರವಾಗಿರುವ ... ಪ್ರಕಟಿಸಿದ. ಅಷ್ಟೇ ಅಲ್ಲ ಲೇಖನದುದ್ದಕ್ಕೂ ...ಪ್ಪನ ಅಣ್ಣ ಚಿನ್ನಪ್ಪ ಮತ್ತು ಅತ್ತಿಗೆ ಗಂಗ ...ಬಗ್ಗೆ ಬಹಳ ತುಚ್ಛವಾಗಿ ಬರೆದಿದ್ದಾರಲ್ಲದೇ ...ಸುವುದಕ್ಕೋಸ್ಕರ ನಾರಾಯಣಪ್ಪನನ್ನು ಅವರು ... ಚಿತ್ರಿಸುತ್ತಿದ್ದಾರೆಂದೂ ಆರೋಪ ಮಾಡಲಾಗಿದೆ. ...ಪ್ರಕಟಗೊಂಡ ಪತ್ರಿಕೆಯ ಪ್ರತಿಗಳನ್ನು ಚಿನ್ನಪ್ಪ ...ುವ ಫ್ಯಾಕ್ಟರಿಯಲ್ಲಿಯೂ ಹಾಗೂ ಗಂಗರತ್ನಮ್ಮ ...ಸುವ ಶಾಲೆಯಲ್ಲಿಯೂ ಉಚಿತವಾಗಿ ದೊಡ್ಡ ...ಲ್ಲಿ ಹಂಚಿ ಅವರಿಗೆ ಮಾನಸಿಕ ಹಿಂಸೆಯನ್ನು ... ತನ್ನ ತೀರದ ಹಣದ ...ಗಿ ಅಮಾಯಕರನ್ನು ...ನನ್ನಾಗಿ ಮಾಡುವ ಮೂಲಕ ... ಪತ್ರಿಕಾಧರ್ಮಕ್ಕೆ ಕಳಂಕ ...ಲ್‌ರಾಜ್‌ಗೆ ಯಾವ ಪ್ರಶಸ್ತಿ ...ಸನ್ಮಾನ ಮಾಡಬೇಕೋ ...

...ಅಡ್ನಾಡಿಯ ಮಂಗನಾಟ ... ನಿಲ್ಲಲಿಲ್ಲ, 'ಹಾಯ್ ...' ಪತ್ರಿಕೆಯ ವರದಿಗಾರ ... ಬ್ರೇನ್‌ವಾಷ್ ಮಾಡಿ, ...ಪ್ಪು ಮಾಹಿತಿ ನೀಡಿ ಆ ...ಲ್ಲಿ ಪಕ್ಕಾ ತದ್ವಿರುದ್ಧದ ...ನ್ನು ಬರೆಸುವ ಮೂಲಕ ಆ ಪತ್ರಿಕೆಯನ್ನೂ ...ಸಿದ್ದಾನೆ. ಹಾಗೆಯೇ TV 9 ದೂರದರ್ಶನ ... ಹೀಗೆಯೇ ತಪ್ಪು ವರದಿ ನೀಡಿ ಚಿನ್ನಪ್ಪ ...ಗಂಗರತ್ನಮ್ಮರ ವಿರುದ್ಧ ಒಂದು ರೋಚಕ ...ನ್ನು ಪ್ರಸಾರ ಮಾಡುವ ಕ್ರಿಮಿನಲ್ ಪ್ಲಾನ್ ...ಡಿಕೊಂಡಿದ್ದ, ಮಾರ್ಚ್ 26 ರ ಸಂಜೆ 7.30 ...ಗೆ ಹುಚ್ಚನ ಪಟ್ಟ ಕಟ್ಟಿದ ರೋಚಕ ಕಥೆ ...ಲದೆ ಎಂಬ ಟುಣುಕು-ಟುಣುಕು ತೋರಿಸುವ ... ಒಂದು ದಿನ ಮುಂಚೆಯೇ ಪ್ರಸಾರವಾಗ ...ು. ಯಾವ ತಪ್ಪೂ ಮಾಡದೇ ಈ ರೀತಿ ... ಅನುಭವಿಸಬೇಕಾದ ಪರಿಸ್ಥಿತಿ ಕಂಡು ಚಿನ್ನಪ್ಪ ...ತ್ನಿ ಗಂಗರತ್ನಮ್ಮ ಇಬ್ಬರೂ ಆತ್ಮಹತ್ಯೆ ...ಸ್ಸುವ ನಿರ್ಧಾರ ಮಾಡಿದರು. ಆದರೆ ಯಾರೋ ...ಬ್ಬರು ಧೈರ್ಯ ಕೊಟ್ಟ ನಂತರ ಕೋರ್ಟಿಗೆ ... ವರದಿ ಪ್ರಸಾರಗೊಳ್ಳದಂತೆ ತಡೆಯಾಜ್ಞೆ



ಕೃಷ್ಣಪ್ಪ

ಯಾವಾಗ TV9 ಚಾನೆಲ್ ವರದಿಯ ಮಹತ್ವಾಕಾಂಕ್ಷಿ ಯೋಜನೆಗೆ ಕೋರ್ಟಿನಿಂದ ತಡೆಬಿತ್ತೋ ಆಗ ಜಗ್ಗ ಅಂಡ್ ಗ್ಯಾಂಗ್‌ನ ಬೆದರಿಕೆ ಜಾಸ್ತಿ ಆಯಿತು. 30-40 ಜನ ಗೂಂಡಾಗಳನ್ನು ಕಟ್ಟಿಕೊಂಡು ಚಿನ್ನಪ್ಪನ ಮನೆಯ ಬಳಿ ಸುತ್ತಿ ಬೆದರಿಕೆ ಹಾಕಲಾರಂಭಿಸಿದರು. ಬಾಯ್ಮಾತಿನಿಂದ ಪಡೆಯಲಾಗದ್ದನ್ನು ತೋಳ್ಬಲ ಪ್ರದರ್ಶಿಸಿ ಪಡೆಯುವ ನಿರ್ಧಾರ ಕೈಗೊಂಡರು. ಇದರಿಂದ ಭೀತಿಗೊಂಡ ಚಿನ್ನಪ್ಪ ಕುಟುಂಬ ಸಮೇತರಾಗಿ ಐಜಿಪಿಯನ್ನು ಭೇಟಿ ಮಾಡಿ ಅವರಿಗೆ ವಿಚಾರವನ್ನು ಮನವರಿಕೆ ಮಾಡಿದ್ದಾರೆ. ಅವರ ಸಲಹೆಯಂತೆ ಬೆಂಗಳೂರು ಗ್ರಾಮಾಂತರ ಎಸ್‌ಪಿಯನ್ನು ಭೇಟಿ ಮಾಡಿ ಅವರಿಗೆ ವಿಚಾರವನ್ನು ಮನದಟ್ಟು ಮಾಡಿಸಿದ್ದಾರೆ. ಇದಾದ ಮೂರು ದಿನಗಳ ಒಳಗೆ ಡಿವೈಎಸ್ಪಿ ಕೋಗಿಲು ಗ್ರಾಮಕ್ಕೆ ಬಂದು, ಜಗ್ಗ ಅಂಡ್ ಗ್ಯಾಂಗ್ ಚಿನ್ನಪ್ಪನ ಜಮೀನಿಗೆ ಹಾಕಿದ ಕಾಂಪೌಂಡನ್ನು ಒಡೆದಿರುವುದನ್ನು ನೋಡಿಕೊಂಡು ಹೋಗಿದ್ದಾರಲ್ಲದೇ ಚಿನ್ನಪ್ಪನಿಗೆ ರಕ್ಷಣೆಯ ಭರವಸೆಯನ್ನೂ ಕೊಟ್ಟಿದ್ದಾರೆ.

ಕಳೆದ ವಾರ ಡಿವೈಎಸ್ಪಿ, ಸರ್ಕಲ್ ಇನ್ಸ್‌ಪೆಕ್ಟರ್, ಹೊಸದಾಗಿ ಬಂದ ಎಸ್ಸೈ ಊರಿಗೆ ಬಂದು ಶಾಂತಮ್ಮ, ಜಗ್ಗ, ಚಿನ್ನಪ್ಪನ ಕುಟುಂಬ ಮತ್ತು ಗ್ರಾಮಸ್ಥರನ್ನು ಕೂರಿಸಿಕೊಂಡು ಮಾತುಕತೆ ನಡೆಸಿದ್ದಾರೆ. ಮಾತುಕತೆಯ ಸಂದರ್ಭದಲ್ಲಿ ಜಗ್ಗ ಚಿನ್ನಪ್ಪನನ್ನು ದುರುಗುಟ್ಟಿಕೊಂಡು ನೋಡುತ್ತಾ "ನಿನ್ನ ಮೇಲೆ ದಲಿತ ಅಟ್ರಾಸಿಟಿ ಕೇಸು ಹಾಕುತ್ತೇನೆ' ಎಂದು ಗದರಿಸಿದ್ದಾನೆ. ಜಾತಿಯಲ್ಲಿ ದಲಿತನಾಗಿರುವ ಜಗ್ಗ ಕೊನೆಗೆ ಉಳಿದಿರುವ ಈ ಅಸ್ತ್ರವನ್ನು ಬಳಸಲು ಕಾಯುತ್ತಿದ್ದಾನೆ.

ಚಿನ್ನಪ್ಪ ಹೇಳುವುದೇನು?

ಒಟ್ಟಾರೆ ಈ ವಿವಾದದಲ್ಲಿ ಚಿನ್ನಪ್ಪ ಮಾತ್ರ ಸ್ಪಷ್ಟವಾಗಿದ್ದಾರೆ. ತನ್ನ ತಮ್ಮ ನಾರಾಯಣಪ್ಪನಿಗೆ ಸೇರಬೇಕಾದ ಆಸ್ತಿಯ ಪಾಲನ್ನು ಕೊಡುವುದಕ್ಕೆ ಅವರು ಯಾವಾಗಲೂ ಸಿದ್ಧರಿದ್ದಾರೆ. ಆದರೆ ಮಾನಸಿಕವಾಗಿ ಅಸ್ವಸ್ಥರಾಗಿ ಅರೆಹುಚ್ಚನ ಅವಸ್ಥೆಯಲ್ಲಿರುವ ಈ ಸಂದರ್ಭದಲ್ಲಿ ಆಸ್ತಿ ನೀಡಿದರೆ ಅದರಲ್ಲೂ ಶಾಂತಮ್ಮ, ಜಗ್ಗ ಅನಿಲ್‌ರಾಜ್ ಆಸ್ತಿ ಕಬಳಿಸಲು ರಣಹದ್ದುಗಳಂತೆ ಕಾಯುತ್ತಿರುವ ಈ ಹೊತ್ತಿನಲ್ಲಿ ಕೊಟ್ಟರೆ ಆಸ್ತಿಯೆಲ್ಲಾ ಕಂಡವರ ಪಾಲಾಗಿ ತಮ್ಮ ನಾರಾಯಣಪ್ಪ ಮಾತ್ರ ಮತ್ತೆ ಬೀದಿಪಾಲು ಆಗುವುದು ಖಂಡಿತ ಎಂಬುದು ಅವರ ಅಳಲು. ಹಾಗಾಗಿ ಸದ್ಯ ನಾರಾಣಪ್ಪನ ಆರೋಗ್ಯ ಸುಧಾರಿಸಲಿ, ನಂತರ ಖಂಡಿತವಾಗಿ ಅವನಿಗೆ ಸಲ್ಲಬೇಕಾದ ಆಸ್ತಿಯನ್ನು ಕೊಟ್ಟೇ ಕೊಡುತ್ತೇವೆ ಎಂದು ಹೇಳುತ್ತಾರೆ. ಅಲ್ಲದೇ ಕಂಡಕಂಡವರ ಆಸ್ತಿಯನ್ನು ಗುಳುಂ ಮಾಡಲು ಹೊರಟಿರುವ ಜಗ್ಗ, ಶಾಂತಮ್ಮ ಮತ್ತು ಅನಿಲ್‌ರಾಜ್‌ಗೆ ಸವಾಲು ಹಾಕುತ್ತಾ ಅವರು ಬೇಕಾದರೆ ಕೋರ್ಟಿನ ಮೂಲಕ ಪಡೆಯಲಿ ಎನ್ನುತ್ತಾರೆ.

ಕೋರ್ಟು, ಕಾನೂನುಗಳೆಂದರೆ ಮೈಲುದ್ದ ದೂರ ನಿಲ್ಲುವ ಈ ಭೂಗಳ್ಳರ ಗ್ಯಾಂಗ್ ಕೇವಲ ಬೆದರಿಕೆ, ತೋಳ್ಬಲ ಪ್ರದರ್ಶನದ ಮೂಲಕ ಕಂಡವರ ಆಸ್ತಿ ನುಂಗಲು ಪ್ರಯತ್ನಿಸುತ್ತಿರುವುದು ಏಕೆಂದರೆ ಕೋರ್ಟು-ಕಾನೂನಿನ ಮೂಲಕ ತಮಗೆ ಆಸ್ತಿ ದೊರೆಯುವುದಿಲ್ಲ ಎಂಬುದು ಅವರಿಗೂ ಗೊತ್ತು. ಪ್ರಾಯಶಃ ಅನುಭವದಿಂದ ಅವರು ಪಾಠ ಕಲಿತಿರಬೇಕು. ಹಾಗಾಗಿಯೇ, ಈ ವಿಚಾರದಲ್ಲಿ ಕೋರ್ಟ್ ಅವರಿಗೆ ಸಮನ್ಸ್ ನೀಡಿದರೂ ಯಾರೂ ಹಾಜರಾಗಿಲ್ಲ.


ಒಟ್ಟಿನಲ್ಲಿ ತಮ್ಮದೇ ಜಮೀನನ್ನು ದಕ್ಕಿಸಿಕೊಳ್ಳಬೇಕಾದರೂ ಇಷ್ಟೊಂದು ಹೋರಾಟ ನಡೆಸಬೇಕಾಗಿ ಬಂದಿರುವುದು ಚಿನ್ನಪ್ಪ ಮತ್ತು ಕುಟುಂಬದ ದುರ್ದೈವ ಅಥವಾ ಇದು ಭಾರತದ ಅಸಲೀ ಪ್ರಜಾತಂತ್ರದ ಮುಖ ಎಂದರೂ ತಪ್ಪಲ್ಲ. ಆದರೆ ಅಂತಹ ಅಮಾಯಕರ ಬೆನ್ನಿಗೆ ಯಾರೂ ನಿಲ್ಲದೇ ಭೂಗಳ್ಳರಿಗೇ ಕುಮ್ಮಕ್ಕು ನೀಡುತ್ತಿರುವುದು ಮಾತ್ರ ವಿಷಾದ.

ಈ ವಿವಾದ ಹುಟ್ಟು ಪಡೆದಾಗ ಚಿಕ್ಕಜಾಲ ಪೊಲೀಸ್ ಸ್ಟೇಷನ್‌ನಲ್ಲಿ ಎಸ್ಸೈ ಆಗಿ ಇದ್ದ ಪರ್ಸೆಂಟೇಜ್ ಪ್ರವೀಣ ಗೋವಿಂದರಾಜ್ ಈಗ ಯಾವ ಘನಂಧಾರಿ ಕೆಲಸಕ್ಕೋ ಏನೋ ಗೊತ್ತಿಲ್ಲ ಪ್ರಮೋಷನ್ ಪಡೆದು ವರ್ಗಾವಣೆ ಆಗಿಹೋಗಿದ್ದಾರೆ. ಹೊಸದಾಗಿ ಬಂದಿರುವ ಎಸ್ಸೈ ಗೋವಿಂದರಾಜ್ ಮಾಡಿದ್ದನ್ನೇ ಮಾಡುತ್ತಾನೋ ಅಥವಾ ನ್ಯಾಯಸಮ್ಮತವಾಗಿ ವರ್ತಿಸಿ ಅಮಾಯಕರ ಬೆಂಗಾವಲಿಗೆ ನಿಲ್ಲುತ್ತಾನೋ ನೋಡಬೇಕು. ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನೇಸರ್ಗಿಯ ಹೆಸರೂ ಅಲ್ಲಲ್ಲಿ ಕೇಳಿಬರುತ್ತಿದೆ. ಅವರು ಈ ವಿವಾದದಲ್ಲಿ ಭೂಗಳ್ಳರ ಪರ ನಿಲ್ಲುತ್ತಾರೋ ಅಥವಾ ಅಮಾಯಕರಿಗೆ ನ್ಯಾಯ ಒದಗಿಸಲು ಹೋರಾಡುತ್ತಾರೋ ಕಾದು ನೋಡಬೇಕು.

■

ಸಚಿವ ದರ್ಶನಾಪುರ ತವರಿನಲ್ಲಿ ಮಿತಿ ಮೀರಿದ ಭ್ರಷ್ಟಾಚಾರ


ದಿವಾಳಿ ಅಂಚಿನಲ್ಲಿ ಶಹಾಪುರ ಎಪಿಎಂಸಿ



ಎಪಿಎಂಸಿ ಕಟ್ಟಡ

ರಾಜ್ಯದ ಕೃಷಿ ಮಾರುಕಟ್ಟೆ ಸಚಿವ ಶರಣಬಸಪ್ಪ ದರ್ಶನಾಪುರ ತವರು ಕ್ಷೇತ್ರವಾದ ಶಹಾಪುರದಲ್ಲಿ ಮಿತಿ ಮೀರಿದ ಭ್ರಷ್ಟಾಚಾರದ ವಾಸನೆ ಕಂಡುಬರುತ್ತಿದ್ದು ಇಲ್ಲಿನ ಎಪಿಎಂಸಿ ಮೇಲೇಳದಷ್ಟು ಮುಗ್ಗರಿಸಿದೆ. ನೀರಾವರಿ ಪ್ರದೇಶವಾದ ಇಲ್ಲಿ ಸ್ಥಳೀಯ ಸಂಪನ್ಮೂಲಗಳನ್ನು ಕ್ರೂಢೀಕರಿಸಿ ಹೆಚ್ಚಿನ ಪ್ರಮಾಣದ ತೆರಿಗೆ ಸಂಗ್ರಹಿಸಿ ಇಡೀ ಗುಲ್ಬರ್ಗಾ ಜಿಲ್ಲೆಯಲ್ಲಿಯೇ ಮಾದರಿ ಸಮಿತಿ ಎಂದು ಹೆಗ್ಗಳಿಕೆ ಪಡೆಯಬಹುದಾಗಿತ್ತು. ಆದರೆ ಎಪಿಎಂಸಿ ಅಧಿಕಾರಿಗಳ ಮತ್ತು ಮಂತ್ರಿ ಮಹೋದಯರ ವ್ಯಾಪಕ ಭ್ರಷ್ಟಾಚಾರದಿಂದಾಗಿ ದಿವಾಳಿ ಅಂಚಿಗೆ ಬಂದು ತಲುಪಿದೆ.

ಇಲ್ಲಿ ಆದಾಯಕ್ಕಿಂತ ಖರ್ಚೇ ಜಾಸ್ತಿ




ದರ್ಶನಾಪುರ

ಕಳೆದ ಸೆಪ್ಟೆಂಬರ್ ತಿಂಗಳಲ್ಲಿ 1,34,978 ರೂ. ಆದಾಯವಿದ್ದು 1,04,789 ರೂ. ಕೊರತೆ. ಅಕ್ಟೋಬರ್ ತಿಂಗಳಲ್ಲಿ 60,888 ರೂ. ಆದಾಯವಿದ್ದರೆ, 2,74,203 ರೂ. ಕೊರತೆ ಅನುಭವಿಸುತ್ತಿದೆ. ಇದಲ್ಲದೆ ದೂರವಾಣಿ ಬಿಲ್, ದಿನಪತ್ರಿಕೆ ಖರೀದಿ, ಗಣ್ಯ ವ್ಯಕ್ತಿಗಳ ಸಂದರ್ಶನ, ಬಾಡಿಗೆ ವಾಹನ, ಇಂಧನ ವೆಚ್ಚದ ನೆಪದಲ್ಲಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ನಡೆದಿರುವುದು ಈಗ ಗುಟ್ಟಾಗಿ ಉಳಿದಿಲ್ಲ.

ಕೋಟ್ಯಂತರ ರೂ. ತೆರಿಗೆ ವಂಚನೆ

ರಾಜ್ಯ ಹೆದ್ದಾರಿಯಾಗಿರುವ ಹತ್ತಿಗೂಡೂರು ಕ್ರಾಸ್ ಬಳಿ ಸ್ಥಾಪಿಸಲಾದ ಚೆಕ್‌ಪೋಸ್ಟ್ ಬಳಿ ಅನಧಿಕೃತವಾಗಿ ಹಣ ವಸೂಲಿ ಮಾಡುವ ಅಧಿಕಾರಿಗಳು ಕೋಟ್ಯಂತರ ರೂಪಾಯಿಗಳ ತೆರಿಗೆ ವಂಚನೆ ನಡೆಸಿದ್ದಾರೆ. ಸುಮಾರು 500 ಕೋಟಿ ರೂ. ವಹಿವಾಟು ಹೊಂದಿರುವ ಈ ಎಪಿಎಂಸಿಗೆ ಶೇ. 1 ರಷ್ಟು ಶುಲ್ಕ ಬಂದರೆ 5 ಕೋಟಿ ಆದಾಯವಾಗಬಹುದು. ಆದರೆ ನವೆಂಬರ್ ತಿಂಗಳಲ್ಲಿ 96 ಸಾವಿರ ರೂ. ತೆರಿಗೆ ವಸೂಲಿ ಮಾಡಲಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ವ್ಯಾಪ್ತಿಗೆ ಒಳಪಡುವ ಈ ಪ್ರದೇಶದಲ್ಲಿ ಭತ್ತ ಸಾಗಿಸುವ ಪ್ರತಿಯೊಂದು ಲಾರಿಗೆ 800 ರಿಂದ 1200 ರೂ. ತೆರಿಗೆ ವಸೂಲಿ ನಡೆಯುತ್ತಿದೆ. ನಿತ್ಯ ನೂರಾರು ಲಾರಿಗಳು ಓಡಾಡಿದರೂ ತೆರಿಗೆ ವಸೂಲಿಯಾಗಿಲ್ಲ ಎಂದು ಹೇಳುವ ಅಧಿಕಾರಿಗಳು ಈ ಹಣವನ್ನು ಎಲ್ಲಿಗೆ ಸಾಗಿಸಿದ್ದಾರೋ ಯಾರು ಬಲ್ಲ? ಅಂತೆಯೇ ಅನಧಿಕೃತ ತೆರಿಗೆ ಹಾಗೂ ಖರೀದಿ ಕೇಂದ್ರಗಳು ನಾಯಿಕೊಡೆಗಳಂತೆ ತಲೆ ಎತ್ತಿ ನಿಂತಿವೆ ಇಲ್ಲಿ.



ಓಂಕಾರಪ್ಪ ಗೌಡ

ಮುಂಗಡ ಪತ್ರದಲ್ಲೂ ಭ್ರಷ್ಟಾಚಾರ

2007-08 ನೇ ಸಾಲಿನಲ್ಲಿ ಅಂದಾಜು ಮಾಡಲಾದ ಖರ್ಚಿನಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಯಾದಗಿರಿಯಲ್ಲಿ ಸಾಲದ ಅಸಲು ಮತ್ತು ಬಡ್ಡಿ ಸೇರಿ 60 ಸಾವಿರ ರೂಪಾಯಿ, ಸುರಪುರ 1 ಲಕ್ಷ 20 ಸಾವಿರ ರೂಪಾಯಿ, ರಾಯಚೂರು 3 ಲಕ್ಷ 60 ಸಾವಿರ ರೂಪಾಯಿ ಮತ್ತು ರಾಜ್ಯ ಕೃಷಿ ಮಹಾ ಮಂಡಳಿ ಬೆಂಗಳೂರು ಅದರ ಅಸಲು ಮತ್ತು ಬಡ್ಡಿ 9 ಲಕ್ಷ ರೂಪಾಯಿ ಎಂದು ನಮೂದಿಸಿದ್ದಾರೆ. ಈ ಹಣವನ್ನು ಯಾವ ಉದ್ದೇಶಕ್ಕೆ ತರಲಾಯಿತು. ಖರ್ಚು ಮಾಡುವ ಉದ್ದೇಶ, ಯಾವಾಗ ಪಡೆದುಕೊಳ್ಳಲಾಯಿತು ಎಂಬುದನ್ನು ನಮೂದಿಸಿಲ್ಲ ಮತ್ತು ಆದಾಯ ಪತ್ರದಲ್ಲೂ ತಿಳಿಸಿಲ್ಲ.

ಈಗ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿರುವ ಓಂಕಾರಪ್ಪಗೌಡ ಮೇನಲ್ಲಿ ನಿವೃತ್ತಿಯಾಗುತ್ತಿರುವುದರಿಂದ ತಮ್ಮ ಮನಬಂದಂತೆ ಲೆಕ್ಕ ಪತ್ರ ತೋರಿಸುತ್ತಿದ್ದಾರೆ ಎಂಬ ಆಪಾದನೆಗಳಿವೆ. ಈ ಮುಂಗಡ ಪತ್ರಕ್ಕೆ ಎಪಿಎಂಸಿಯ ಎಲ್ಲ ಸದಸ್ಯರು ಪಕ್ಷಭೇದ ಮರೆತು ಠರಾವು ಪಾಸು ಮಾಡಿ ಹೌದಪ್ಪಗಳಾಗಿದ್ದಾರೆ. ಆದರೆ ಸುಮಾರು 8 ವರ್ಷಗಳ ಹಿಂದೆ ನಿರ್ಮಾಣ ಕಾರ್ಯನಡೆದಿರುವ 53 ಹಮಾಲರ ವಸತಿ ಗೃಹಗಳಿಗೆ ಇನ್ನೂ ಸೌಲಭ್ಯ ಕಲ್ಪಿಸಲಾಗಿಲ್ಲ. ಹೀಗಾಗಿ ಇಲ್ಲಿ ದುಡಿಯುವ ಹಮಾಲರಿಗೆ 'ಸೂರು' ಎಂಬುದು ಮರೀಚಿಕೆಯಾಗಿ ಉಳಿದಿದೆ. ಮುಂಗಡ ಪತ್ರ ಮಂಡನೆಯಲ್ಲೂ ಭ್ರಷ್ಟಾಚಾರದ ಕಮುಟು ವಾಸನೆ ಹೊಂದಿರುವ ಈ ಎಪಿಎಂಸಿಯನ್ನು ಆ ದೇವರೇ ಕಾಪಾಡಬೇಕಾಗಿದೆ.


ಸರ್ಕಾರಿ ಆಸ್ತಿ ಮಾರಾಟಕ್ಕಿದೆ

ಅಧಿಕಾರವಿದೆ ಎಂದಮಾತ್ರಕ್ಕೆ ಸರ್ಕಾರಿ ಆಸ್ತಿಯನ್ನು ಮನಬಂದಂತೆ ವಿವಿಧ ಸಮುದಾಯಗಳಿಗೆ ನೀಡುತ್ತಿರುವ ಸಚಿವ ದರ್ಶನಾಪುರ, ಎಪಿಎಂಸಿ ಜಾಗದಲ್ಲಿ ಕೃಷ್ಣಾಪಟ್ಟಣ ಸಹಕಾರ ಬ್ಯಾಂಕಿಗೆ ಕಟ್ಟಡ ನಿರ್ಮಿಸಲು ಅನುಮತಿ ನೀಡಿ ಅಡಿಗಲ್ಲು ಹಾಕಿದ್ದಾರೆ. ಕೆಲ ಸದಸ್ಯರು ಕೂಡಿ ಅದರಲ್ಲಿ ಸದಸ್ಯರಾದವರಿಗೆ ಮಾತ್ರ ಸಾಲ ನೀಡುವ ಬಡ್ಡಿ ವ್ಯವಹಾರದ ಈ ದಂಧೆಗೆ ದರ್ಶನಾಪುರ ಬೆಂಬಲ ನೀಡುತ್ತಿದ್ದಾರೆ.

ಗುಲ್ಬರ್ಗಾ ಜಿಲ್ಲಾ ಉಸ್ತುವಾರಿ ಹೊಣೆ ಹೊತ್ತಿರುವ ಸಚಿವ ದರ್ಶನಾಪುರರ ಅಕ್ರಮ ವ್ಯವಹಾರಗಳಿಗೆ ಮುನ್ನುಡಿಯಂತಿರುವ ಈ ಹಗರಣಗಳಿಗೆ ಅವರ ಸಹೋದರ ಅಮರೇಶ್ ದರ್ಶನಾಪುರ ಸೇರಿ ಇಡೀ ಜಿಲ್ಲೆಯನ್ನೇ ಬಗಿದು ತಿನ್ನುತ್ತಿದ್ದಾರೆ. ಲೋಕಾಯುಕ್ತರಿಗೆ ಆಸ್ತಿ ವಿವರ ಸಲ್ಲಿಸದೇ ಅತ್ಯಂತ ನಿರ್ಲಜ್ಜರಾಗಿ ನಡೆದುಕೊಂಡಿರುವ ದರ್ಶನಾಪುರ ಮುಂಬರುವ ಚುನಾವಣೆಯಲ್ಲಿ ನೀರು ಕುಡಿಯುವುದು ಶತಃಸಿದ್ಧ!

-ವರದಿಗಾರ

ಕೈಗೆತ್ತಿಕೊಂಡ ಕೆಲಸವನ್ನು ಮಾಡಿ ಮುಗಿಸುತ್ತಿದ್ದಂತೆ ಪ್ರತಿಯೊಬ್ಬನಿಗೂ ಒಂದು ಬಗೆಯ ಸಂತೃಪ್ತಿಯ ಭಾವ ಮೂಡುತ್ತದೆ. ಇದರಿಂದ ಯಾರೂ ಹೊರತಲ್ಲ. ಈ ಜಾಗದಲ್ಲಿ ಈಗ ನಾನಿರುವುದಕ್ಕೆ ಕಾರಣ ಈ ನರಭಕ್ಷಕ ಮತ್ತು ಅದರ ಸಾವು. ನಿಜಕ್ಕೂ ಇದು ಸಮಾಧಾನದ ನಿಟ್ಟುಸಿರಿಡುವ ಸಮಯ. ಒಬ್ಬ ಕಥೆಗಾರನಾಗಿಯೂ ನಾನು ಕಥಾಂತ್ಯವನ್ನು ಕಥಾಹಂದರಕ್ಕೆ ಪೂರಕವಾಗಿ ಹೇಳಿದ್ದೇನೆ. ಆದರೆ ನನಗಂತೂ ಈ ಕಥಾಂತ್ಯ ಸಮಾಧಾನ ತಂದಿಲ್ಲ. ಇದು ತೃಪ್ತಿಕರವಾದ ಅಂತ್ಯವಲ್ಲ ಎಂದೇ ನನ್ನ ಅಂತರ್ಯ ಹೇಳುತ್ತಿದೆ.




ಸಮಾಧಾನ ತರದ ಕಥಾಂತ್ಯ

ಹುಲಿ ಮಾತ್ರ ಮೊದಲು ಹೇಗಿತ್ತೋ ಹಾಗೇ ಮಲಗಿತ್ತು, ಅದರ ಕಾಲುಗಳು.... ಬಾಲ ಹಾಗೇ ಚಾಚಿಕೊಂಡಿದ್ದವು. ತಲೆ ಇದ್ದಹಾಗೇ ಇತ್ತು, ಕಣ್ಣುಗಳು ಮುಚ್ಚಿಕೊಂಡು....ಮೂಗು ಆಕಾಶ ನೋಡುತ್ತಿತ್ತು; ನನ್ನ ಎರಡನೆಯ ಗುಂಡು ಹಾರುವಾಗಲೂ ಅದು ಚಲಿಸ ಲಿಲ್ಲ, ಹಾಗೆ ನೋಡಿದರೆ ಎರಡನೆಯ ಗುಂಡು ಅಗತ್ಯವೇ ಇರಲಿಲ್ಲ, ಟ್ರಿಗರ್ ಒತ್ತುವುದಕ್ಕೆ ಮೊದಲು ಕಂಡ ಹುಲಿಗೂ ಈಗಿನ ಹುಲಿಗೂ ಇದ್ದ ಏಕೈಕ ವ್ಯತ್ಯಾಸವೆಂದರೆ ಅದರ ಏರಿಳಿಯುತ್ತಿದ್ದ ಹೊಟ್ಟೆ ಈಗ ನಿಶ್ಚಲವಾಗಿತ್ತು, ಆಶ್ಚರ್ಯಕರವಾಗಿ ಹಣೆಯ ಮೇಲಾಗಿದ್ದ ಎರಡು ತೂತುಗಳಿಂದ ರಕ್ತ ಜಿನುಗುತ್ತಿತ್ತು.

ಇಂಥಾ ಹುಲಿಯ ಸಾನ್ನಿಧ್ಯದಲ್ಲಿ ಬೇರೆಯವರಿಗೆ ಹೇಗನಿಸುತ್ತದೆ, ಅವರು ಎಂಥಾ ಭಾವೋದ್ವೇಗಕ್ಕೆ ಒಳಗಾಗುತ್ತಾರೋ ನನಗೆ ಗೊತ್ತಿಲ್ಲ, ನನಗಂತೂ ಉಸಿರು ಕಟ್ಟಿಕೊಂಡಂತೆ ಚಡಪಡಿಕೆ ಆರಂಭವಾಗುತ್ತದೆ. ಅದು ಭಯ ಮತ್ತು ರೋಮಾಂಚಕತೆಯ ಮಿಶ್ರಣಗಳಿಂದ ಹುಟ್ಟಬಹುದು ಅಥವಾ ತಕ್ಷಣ ಸ್ವಲ್ಪ ವಿಶ್ರಾಂತಿಯನ್ನು ಬಯಸಿಯೂ ಇರಬಹುದು. ನಾನು ಹಿಂತಿರುಗಿ ಮರದ ಬೊಡ್ಡೆಯ ಮೇಲೆ ಕುಳಿತುಕೊಂಡೆ. ಗಂಟಲ ಪೀಡೆಯಿಂದಾಗಿ ಅನೇಕ ದಿನಗಳಿಂದ ಸೇದದಿದ್ದ ಸಿಗರೇಟನ್ನು ತೆಗೆದು ಬಾಯಿಗಿಟ್ಟು ಬೆಂಕಿಕೊಟ್ಟೆ. ಹಿಂದೆಯೇ ನನ್ನ ತಲೆಯಲ್ಲಿ ಅನೇಕ ವಿಚಾರಗಳು ತೂರಿ ಮೆದುಳು ಗೊಂದಲದ ಗೂಡಾಯಿತು.

ಕೈಗೆತ್ತಿಕೊಂಡ ಕೆಲಸವನ್ನು ಮಾಡಿ ಮುಗಿಸುತ್ತಿದ್ದಂತೆ ಪ್ರತಿಯೊಬ್ಬನಿಗೂ ಒಂದು ಬಗೆಯ ಸಂತೃಪ್ತಿಯ ಭಾವ ಮೂಡುತ್ತದೆ. ಇದರಿಂದ ಯಾರೂ ಹೊರತಲ್ಲ, ಈ ಜಾಗದಲ್ಲಿ ಈಗ ನಾನಿರುವುದಕ್ಕೆ ಕಾರಣ ಈ ನರಭಕ್ಷಕ ಮತ್ತು ಅದರ ಸಾವು. ನಾನು ರಸ್ತೆಯ ತಿರುವಿನಿಂದ ಕಾಡೊಳಕ್ಕಿಳಿದ ಘಳಿಗೆಯಿಂದ ಈವರೆಗೂ ಎರಡು ಗಂಟೆಗಳು ಸರಿದಿವೆ. ಈ ಅವಧಿಯಲ್ಲಿ ಬಂದೂಕದ ಲೋಡಿಂಗ್..., ಅನ್‌ಲಾಕ್ ಮಾಡಲು ಮರೆತಿದ್ದು..., ಗಂಟಲು ಕೆರೆತ..., ಲಂಗೂರದ ಕೂಗು...., ಎಲ್ಲವೂ ನಾನೆಣಿಸಿದಂತೆಯೇ ನಡೆದಿವೆ. ಎಲ್ಲಿಯೂ ಒಂದು ಸಣ್ಣ ತಪ್ಪೂ ಆಗಿಲ್ಲ, ನಿಜಕ್ಕೂ ಇದು ಸಮಾಧಾನದ ನಿಟ್ಟುಸಿರಿಡುವ ಸಮಯ. ಒಬ್ಬ ಕಥೆಗಾರನಾಗಿಯೂ ನಾನು ಕಥಾಂತ್ಯವನ್ನು ಕಥಾಹಂದರಕ್ಕೆ ಪೂರಕವಾಗಿ ಹೇಳಿದ್ದೇನೆ. ಆದರೆ ನನಗಂತೂ ಈ ಕಥಾಂತ್ಯ ಸಮಾಧಾನ ತಂದಿಲ್ಲ, ಇದು ತೃಪ್ತಿಕರವಾದ ಅಂತ್ಯವಲ್ಲ ಎಂದೇ ನನ್ನ ಅಂತರ್ಯ ಹೇಳುತ್ತಿದೆ. ನಾನು ಹುಲಿಯನ್ನು ಕೊಂದಿದ್ದೇನೆ..., ಅದು ಗಾಢ ನಿದ್ದೆಯಲ್ಲಿದ್ದಾಗ..., ಆದರೆ ಶಿಕಾರಿ ಒಂದು ಸಮಾನ ಅವಕಾಶಗಳ ಕ್ರೀಡೆ..., ಹುಲಿಯನ್ನು ಎಚ್ಚರಿಸಿ ಅದಕ್ಕೆ ಶಿಕಾರಿಯ ಸಣ್ಣ ಅವಕಾಶವನ್ನೂ ನಾನು ನೀಡಿಲ್ಲ,

ಈ ನನ್ನ ಭಾವನೆಗಳ ಬಗ್ಗೆ ಬೇರೆಯವರಿಗೆ ಆಸಕ್ತಿ ಇಲ್ಲದಿರಬಹುದು. ಈಗ ನನ್ನೊಂದಿಗೆ ನಡೆದಿರುವುದು ಹಾಗೂ ನೀವೂ ಅಂದುಕೊಳ್ಳುವಂತೆ ಇದು ಕ್ರಿಕೆಟ್ ಅಲ್ಲ, ನಿಜ. ಈ ಹಿನ್ನೆಲೆಯಲ್ಲಿ ನಾವು ಬೇಕಾದಷ್ಟು ವಾದಗಳನ್ನು ಮಂಡಿಸಬಹುದು. ನನಗಿಂತ ಹೆಚ್ಚಾಗಿ ನೀವು ಈ ವಾದಗಳನ್ನು ಬೆಂಬಲಿಸಬಹುದು. ಅವೆಂದರೆ, ಎ) ಮಲಗಿದ್ದ ಹುಲಿ ಒಂದು ನರಭಕ್ಷಕ, ಅದು ಬದುಕಿರುವುದಕ್ಕಿಂತ ಸತ್ತಿರುವುದೇ ಹೆಚ್ಚು ಕ್ಷೇಮ. ಬಿ) ಹಾಗಾಗಿ ಅದಕ್ಕೆ ಹೊಡೆದಾಗ ಅದು ಮಲಗಿತ್ತೋ, ಎಚ್ಚರವಾಗಿತ್ತೋ ಎಂಬುದು ಮುಖ್ಯವಲ್ಲ, ಸಿ) ಅದರ ಹೊಟ್ಟೆ ಏರಿಳಿಯುತ್ತಿದ್ದಾಗ ಅದನ್ನು ಎಚ್ಚರಿಸಿ, ನಂತರ ಹೊಡೆಯಲಾಗದೇ ಹೋಗಿದ್ದರೆ ಅಲ್ಲಿಂದ ಮುಂದಕ್ಕೆ ಅದು ಮಾಡುತ್ತಿದ್ದ ಪ್ರತಿಯೊಂದು ನರಹತ್ಯೆಗೂ ನಾನು ನೈತಿಕವಾಗಿ ಹೊಣೆಗಾರನಾಗಿರುತ್ತಿದ್ದೆ. ಈ ಎಲ್ಲವೂ ಉತ್ತಮವಾದ, ಸಮರ್ಥವಾದಗಳೇ!! ನಾನು ಆ ಸಂದರ್ಭದ ಅನಿವಾರ್ಯತೆಗೆ ತಕ್ಕಂತೆ ವರ್ತಿಸಿದ್ದೇನೆ, ನಿಜ. ಆದರೂ ನನ್ನ ಆಳದಲ್ಲಿ ಗಾಢವಾದ ವಿಷಾದವೊಂದು ಉಳಿದುಹೋಗುವ ಆತಂಕ ನನಗಿದೆ. ಹಾಗೇ ಶಿಕಾರಿಯಲ್ಲಿ ಶಿಕಾರಿಯ ನೈತಿಕತೆಯನ್ನು ನಿರೂಪಿಸಿ ತೋರಿಸಿರುವ ಸಾಧ್ಯತೆಯೊಂದನ್ನು ನಾನು ಹಾಳುಮಾಡಿಬಿಟ್ಟೆ. ಮತ್ತೆಂದೂ ಅಂಥ ಅವಕಾಶ ಸಿಗದೇ ಹೋಗಬಹುದು ಎಂಬ ಅಥವಾ ಈ ಎರಡೂ ಭಾವನೆಗಳ ಸಮ್ಮಿಶ್ರಣದಿಂದ ನಾನು ಅವಮಾನಿತನಾದಂತೆ ಅನಿಸುತ್ತಿದೆ. ಇವೆಲ್ಲವನ್ನೂ ಮೀರಿ ಮಲಗಿದ್ದ ಹುಲಿಯೊಂದಕ್ಕೆ ತನ್ನನ್ನು ತಾನು ಸಮರ್ಥಿಸಿಕೊಳ್ಳುವ ಅವಕಾಶ ನೀಡಲಿಲ್ಲ ಎಂಬುದು ನನ್ನಲ್ಲಿ ತೀವ್ರ ಅಸಮಾಧಾನ ಹಾಗೂ ಗಾಢ ವಿಷಾದಕ್ಕೆ ಕಾರಣವಾಗಿವೆ. ಇದಕ್ಕೆ ಯಾವುದೇ ವಿವರಣೆ ಇಲ್ಲ.



ಸದ್ಯಕ್ಕೆ ಹುಲಿಯಂತೂ ಸತ್ತಿತ್ತು, ಕೆಳಗಿನ ಕಂದಕದೊಳಕ್ಕೆ ಉರುಳಿ ಚರ್ಮ ಹರಿದುಕೊಳ್ಳುವುದರಿಂದ ತಪ್ಪಿಸಿಕೊಂಡಿತ್ತು. ಆಷ್ಟು ಬೇಗ ಅದನ್ನು ಇಲ್ಲಿಂದ ಸಾಗಿಸಿ, ಸಂಸ್ಕರಿಸಬೇಕಿತ್ತು. ಕೂಡಲೇ ನನಗೆ ಸದ್ಯಕ್ಕೆ ಉಪಯೋಗವಿಲ್ಲದ ಬಂದೂಕವನ್ನು ಪಕ್ಕಕ್ಕಿಟ್ಟು, ಒಂದು ಮರವನ್ನೇರಿ, ಬಾಯಿಯ ಸುತ್ತ ಕೈಗಳ ಕೋಟೆಕಟ್ಟಿ ಒಮ್ಮೆ ಕೂಹೂ..... ಎಂದು ಕೂಗಿದೆ. ಈ ಕೂಗು ಮಾರ್ದನಿಸಿ, ಪರ್ವತಾಗ್ರಗಳಿಗೆಲ್ಲಾ ಅಪ್ಪಳಿಸಿ, ಅಲ್ಲಿಂದ ಹಿಂತಿರುಗಿತು. ನನಗೆ ಮತ್ತೊಮ್ಮೆ ಕೂಗುವ ಅಗತ್ಯವಿರಲಿಲ್ಲ, ಮೊದಲ ಕೋಣಕ್ಕೆ ಹುಲ್ಲುನೀರು ನೋಡಲು ಬಂದಿದ್ದ ನನ್ನ ಜನಕ್ಕೆ ಈ ಮೊದಲ ಎರಡು ಗುಂಡುಗಳ ಸದ್ದು ಕೇಳಿಸಿದಾಗಲೇ ಇದು ಅರ್ಥವಾಗಿರುತ್ತದೆ. ಇನ್ನು ಈ ಕೂಗು ನಿರ್ದಿಷ್ಟವಾಗಿ ಏನು ಹೇಳುತ್ತದೆ ಎಂಬುದೂ ಅವರಿಗೆ ಗೊತ್ತು. ಕ್ಷಣಮಾತ್ರದಲ್ಲಿ ಹಳ್ಳಿಗಳ ಕಡೆಯಿಂದ ಅಸಂಖ್ಯಾತ ಜನರು ಹತ್ತಿ ಇತ್ತ ಬಂದರು. ನಾನು ಅವರನ್ನೆಲ್ಲಾ ಹುಲಿಯತ್ತ ಕರೆದೊಯ್ದೆ. ಅವರು ಇನ್ನಿಲ್ಲದ ಸಂತಸದಲ್ಲಿದ್ದರು. ಸಂಭ್ರಮದಿಂದ ಅದನ್ನು ಹೊತ್ತೊಯ್ಯಲು ತಯಾರಾದರು. ಆದರೆ ನಾನು ಇಲ್ಲಿಯೇ ಅದರ ಚರ್ಮ ಸುಲಿದು, ಅಪರಕರ್ಮಗಳನ್ನು ಮುಗಿಸಲು ತೀರ್ಮಾನಿಸಿದ್ದೆ. ಅದನ್ನು ಹೇಳುತ್ತಿದ್ದಂತೆ ಅವರೆಲ್ಲಾ ಒಕ್ಕೊರಲಿನಿಂದ 'ಬೇಡ' ಎಂದು ಕೇಳಿಕೊಂಡರು. 'ಕಾರ್ತ್‌ಕಾನೌಲಾ ಮತ್ತು ಸುತ್ತಮುತ್ತಲ ಹಳ್ಳಿಗಳ ಜನರನ್ನು ಅನೇಕ ವರ್ಷಗಳಿಂದ ಬೆಂಬಿಡದೆ ಕಾಡಿದ ಈ ಭೂತ ಸತ್ತಿದೆ ಎಂದು ಅವರು ಕಣ್ಣಾರೆ ನೋಡುವವರೆಗೂ ನಂಬುವುದಿಲ್ಲ, ಆದ್ದರಿಂದ ಇದನ್ನು ಹಳ್ಳಿಗೆ ಹೊತ್ತುಕೊಂಡು ಹೋಗೋಣ, ಹೆಂಗಸರ ಮಕ್ಕಳೆಲ್ಲಾ ಇದು ಸತ್ತು ಬಿದ್ದಿರುವುದನ್ನು ನೋಡಲಿ' ಎಂದು ಅವರು ಕೇಳಿಕೊಂಡರು. ಹುಲಿಯ ಮೆರವಣಿಗೆ ಹಳ್ಳಿಯತ್ತ ಇಳಿಯಿತು. ಸುತ್ತಮುತ್ತಲ ಹಳ್ಳಿಗಳಿಂದ ಜನರೂ ಹತ್ತಿ-ಇಳಿದು ಬಂದರು. ಹಳ್ಳಿಯ ಮುಂದಿದ್ದ ಮರದ ನೆರಳಿನಲ್ಲಿ ಇದನ್ನಿಡಲಾಯಿತು. ಮಧ್ಯಾಹ್ನದ ವರೆಗೂ ಜನ ಬರುತ್ತಲೇ ಇದ್ದರು. ಇಲ್ಲಿನ ಉರಿಬಿಸಿಲಿನ ತಾಪಕ್ಕೆ ಹುಲಿ ಚರ್ಮ ಹದಗೆಟ್ಟು, ಕೂದಲುಗಳು ಉದುರುವ ಸಾಧ್ಯತೆ ಇತ್ತು. ಹಾಗಾಗಿ ಮಧ್ಯಾಹ್ನ ಎರಡು ಗಂಟೆಯ ಹೊತ್ತಿಗೆ ನಾನು ಅದರ ಚರ್ಮ ಸುಲಿಯಲು ಆರಂಭಿಸಿದೆ.

ಚರ್ಮ ಸುಲಿಯುವಾಗ ನನ್ನ ಗಮನ ಅದರ ಎಡ ಮುಂಗಾಲಿನತ್ತ ಹೋಯಿತು. ಅದು ಭುಜದಿಂದ ಹೊರಡುವ ಜಾಗದಲ್ಲಿ ಬಹಳಷ್ಟು ಕೂದಲುಗಳು ಉದುರಿಹೋಗಿದ್ದವು. ಅಲ್ಲಿ ಅನೇಕ ರಂಧ್ರಗಳಾಗಿದ್ದವು. ಅವುಗಳಿಂದ ಮಂದವಾದ ಹಳದಿ ದ್ರವ ಜಿನುಗುತ್ತಿತ್ತು. ನಾನು ಈ ಭಾಗವನ್ನು ಹಾಗೇ ಬಿಟ್ಟು ಉಳಿದ ಚರ್ಮವನ್ನು ಸುಲಿದೆ. ಕೊನೆಗೆ ಎಡಭಾಗಕ್ಕೆ ಬಂದಾಗ ಅಲ್ಲಿನ ಚರ್ಮ ಬಲಭಾಗಕ್ಕಿಂತ ತೆಳುವಾಗಿ, ದುರ್ಬಲವಾಗಿರುವುದು ತಿಳಿಯಿತು. ಇದೂ ಮುಗಿದ ಮೇಲೆ ಆ ಭಾಗವನ್ನು ಎದೆಯ ನೇರಕ್ಕೆ ಸೀಳಿದೆ. ಅಲ್ಲಿ ಮೊಳೆ ಹೊಡೆದಂತೆ ಅಸಂಖ್ಯಾತ ಮುಳ್ಳು ಹ... ಮುಳ್ಳುಗಳು ಕಚ್ಚಿ ಕುಳಿತಿದ್ದವು. ಒಂದೊ... ಅವುಗಳನ್ನು ಕಿತ್ತು ಪಕ್ಕಕ್ಕಿಡತೊಡಗಿದೆ. ನೆರೆದಿ... ಪುರಾತನ ಸ್ಮಾರಕಗಳಂತೆ ಬೆರಗಿನಿಂದ ಅವು... ನೋಡುತ್ತಿದ್ದರು. ಒಂದು ದೊಡ್ಡ ಮುಳ್ಳಿನ... ಐದು ಇಂಚುಗಳಷ್ಟಿತ್ತು. ಇಂತಹ ಸುಮಾರು... -30 ಮುಳ್ಳುಗಳು ನನಗೆ ದೊರೆತವು. ಅದರ... ಭಾಗದ ಕೀಲಿನಿಂದ ಹಿಡಿದು ಪಾದದವರೆಗೆ... ಭಾಗ ಹಳದಿ ಬಣ್ಣಕ್ಕೆ ತಿರುಗಿ, ತೀರಾ ದುರ್ಬಲವಾ... ಈ ಭಾಗದ ನೋವೇ ಆ ದೈತ್ಯನನ್ನು ಮುಲುಕ... ಮಾಡಿ, ಸಹಜ ಶಿಕಾರಿಗೆ ಅನರ್ಹಗೊಳಿಸಿ, ನನ... ನನ್ನಾಗಿ ಪರಿವರ್ತಿಸಿ ಹಾಗೇ ಮುಂದುವರೆಯ... ಮಾಡಿತ್ತು, ಅದು ಇನ್ನು ಮುಂದೆ ಬದುಕಿದ್ದರೂ... ಹಾಗೇ ಬದುಕಬೇಕಿತ್ತು, ಎಲ್ಲಿಯವರೆಗೆ ಆ ಮು... ಮಾಂಸಖಂಡದೊಳಗೆ ತೂರಿಕೊಂಡಿರುತ್ತವೋ... ವರೆಗೆ ಅವು ಕರಗುವ ಪ್ರಶ್ನೆಯೇ ಇಲ್ಲ... ಹೊರಬರದ ಹೊರತು ಹುಲಿ ಚೇತರಿಸಿಕೊ... ಸಾಧ್ಯತೆಯೂ ಇರುವುದಿಲ್ಲ.

ನಾನು ಹಲವು ಹುಲಿಗಳ ದೇಹದಿಂದ... ನೂರಾರು ಮುಳ್ಳುಗಳನ್ನು ತೆಗೆದಿದ್ದೇನೆ. ... ಸ್ವರೂಪವೂ ಒಂದೇ!! ಅವು ಸಾಮಾನ್ಯವಾಗಿ... ಇಂಚಿನಿಂದ ಒಂಭತ್ತು ಇಂಚುಗಳವರೆಗೆ ಇರು... ನೋಡಿದ್ದೇನೆ. ಬಹಳಷ್ಟು ಪೆನ್ಸಿಲ್ ಗಾತ್ರಕ್ಕಿರುತ್ತ... ಸಂದರ್ಭದಲ್ಲೂ ಅವು ಮಾಂಸಖಂಡಗಳ ಮ... ಅಥವಾ ಕೀಲುಗಳ ಜೋಡಣೆಯ ನಡುವೆ... ಕುಂತಿರುತ್ತವೆ ಹಾಗೂ ಎಲ್ಲವೂ ಚರ್ಮದ ಒಳ... ಮುರಿದುಕೊಂಡಿರುತ್ತವೆ.

ಈ ಹುಲಿಯಂತೂ ಖಚಿತವಾಗಿ ಊ... ಮುಳ್ಳುಹಂದಿಯನ್ನು ಹಿಡಿಯಲು ಹೋಗಿ ಆ ದ... ಯನ್ನು ತಂದುಕೊಂಡಿತ್ತು. ಇದಕ್ಕೆ ಸಂಬಂಧಿ... ನನ್ನ ಮುಂದೆ ಉತ್ತರ ಕಂಡುಕೊಳ್ಳಲಾಗದ... ಪ್ರಶ್ನೆಗಳಿವೆ. ಏಕೆ ಇಷ್ಟೊಂದು ಬುದ್ಧಿವಂತ... ಚಾಕಚಕ್ಯತೆಯುಳ್ಳ ಹುಲಿಗಳು ಮುಳ್ಳುಹಂ... ತೂರಿದ ಮುಳ್ಳುಗಳನ್ನು ತಾವಾಗಿಯೇ... ವಾಬ್ದಾರಿತನದಿಂದ ಒಳಕ್ಕಿಳಿಯುವಂತೆ ಮಾಡಿಕೊ... ಕೇವಲ ಸ್ವಲ್ಪ ಹಿಂದೆ ಸರಿಯುವ ಮೂಲಕ... ನಿರ್ದಿಷ್ಟ ಅಂತರವನ್ನು ಕಾಪಾಡಿಕೊಳ್ಳುವ ಮ... ಮುಳ್ಳುಹಂದಿಗಳ ದಾಳಿಯಿಂದ ತಪ್ಪಿಸಿಕೊಳ್ಳುವ... ಇದ್ದರೂ ಏಕೆ ಅವು ಮುನ್ನೆಚ್ಚರಿಕೆ ವಹಿಸು... ಹಾಗೆಯೇ ಸುಲಭಕ್ಕೆ ಮುರಿಯದ ಆ ಮುಳ್ಳು... ಚರ್ಮದ ಮಟ್ಟಕ್ಕೆ ಏಕೆ ಮುರಿದುಕೊಳ್ಳುತ್ತ... ಪರ್ವತ ಪ್ರದೇಶಗಳಲ್ಲಿ ಈ ಹುಲಿಗಳಂತೆ ... ದಾಳಿಗೊಳಗಾಗುವ ಇನ್ನೊಂದು ಪ್ರಾಣಿ ಎಂದರೆ... ಆದರೆ ಅವು ಯಾವುದೇ ಕಾರಣದಿಂದ ಮುಳ್ಳು... ಹೊಕ್ಕಿಸಿಕೊಳ್ಳುವುದಿಲ್ಲ, ಸಾಮಾನ್ಯವಾಗಿ ಚಿರ... ಮುಳ್ಳುಹಂದಿಗಳನ್ನು ತಲೆಯ ಕಡೆಯಿಂದ ಆ... ಮಾಡುತ್ತವೆ. ಹುಲಿಗಳೂ ಈ ತಂತ್ರವನ್ನು... ಮೈಗೂಡಿಸಿಕೊಂಡಿಲ್ಲ? ಎಂಬುದೇ ನನಗೆ ಚಿ... ರಹಸ್ಯವಾಗಿದೆ.

ಡಾ. ಟಿ.ಎಸ್.ವಿವೇ...

ಕತ್ತೀಚಿನ ಒಂದು ಅಂತರರಾಷ್ಟ್ರೀಯ ವಾರಪತ್ರಿಕೆ ಲ್ಲಿ ಭಾರತೀಯರ ಜಡತ್ವ ಮತ್ತು ನಿರ್ಲಕ್ಷ್ಯದ ಬಗ್ಗೆ ಸಾಲುಗಳಿದ್ದವು:

"ಕಣ್ಣೆದುರಿಗೇ ನಡೆಯುತ್ತಿರುವ ಕಗ್ಗೊಲೆಯನ್ನು ...ದುತ್ತಾ ನಿಲ್ಲುವ ಜನರ ಗುಂಪುಗಳನ್ನು ಕಾಣುತ್ತೇವೆ; ...ರಿಗೆ ಕೊಲೆಯ ಬಗ್ಗೆ ಕಳವಳವಿರುವುದಿಲ್ಲ; ಅದನ್ನು ...ಯಲು ಏನನ್ನಾದರೂ ಮಾಡಬೇಕೆನ್ನುವ ಕಾಳಜಿ ...ವುದಿಲ್ಲ."

...ಸರ್ಕಾರ ದುಷ್ಟವಾದರೂ ನಗರ ಕುಸಿದು ಬೀಳುತ್ತಿ...ರೂ ಹಿಂಸೆ ರಕ್ತಪಾತವಾದರೂ ಜನ ಸತ್ತವರಂತೆ ...ಬಿಡುವುದನ್ನು ಆ ಪತ್ರಿಕೆ ಮೇಲಿನಂತೆ ವರ್ಣಿಸು...

...ಪ್ರತಿಭಟನೆ ಇಲ್ಲವಾಗಿರುವ ಈ ದಿನಗಳಲ್ಲಿ ಸರ್ಕಾರ ... ಉದ್ಧಟವಾಗಿ ವರ್ತಿಸತೊಡಗಿವೆ. ಜಾತೀಯತೆ, ...ತೆ, ಸ್ವಜನಪಕ್ಷಪಾತದಲ್ಲಿ ಮುಳುಗಿರುವ ಸರ್ಕಾರ ...ತ್ತು ವಿರೋಧಪಕ್ಷಗಳು ಒಗ್ಗಟ್ಟಾಗಿ ವಿಷಪೂರಿತವಾಗಿ ...ದುಕೊಳ್ಳುತ್ತಿವೆ. ಇವರೆಲ್ಲರ ಭ್ರಷ್ಟತೆಯ ಬಗ್ಗೆ ...ತಾಡಿದವರನ್ನು ಜೈಲಿಗೆ ಕಳಿಸಲಾಗುತ್ತಿದೆ. ಇವರ ...ಡವಾಳ ಬಯಲು ಮಾಡಿದವರನ್ನು ಶಿಕ್ಷಿಸಲಾಗುತ್ತಿದೆ. ...ನ್ನೆ ವಿಧಾನ ಪರಿಷತ್ತಿನಲ್ಲಿ ಸದಸ್ಯನೊಬ್ಬ ಪುಸ್ತಕ ...ದಕ್ಕೆ ಬೆಂಕಿ ಹಚ್ಚಿದ. ತಮ್ಮ ಕಪ್ಪು ಕೃತ್ಯಗಳನ್ನು ...ಸುವ ಎಲ್ಲರನ್ನೂ ಲಂಗುಲಗಾಮಿಲ್ಲದೆ ದೂಷಿಸ...ಯಿತು. ಇದು ಅತ್ಯಂತ ಭಯಾನಕವಾಗಿ ಕಾಣಲು ...ಣವೇನೆಂದರೆ, ಆಳುವ ಗ್ಯಾಂಗ್ ಮತ್ತು ವಿರೋಧಿ ...ಗ್ ಎರಡೂ ಒಂದಾಗಿ ವಿಚಾರಸ್ವಾತಂತ್ರ್ಯದ ಮೇಲೆ ... ನಡೆಸತೊಡಗಿವೆ.

...ವಾಕ್ ಸ್ವಾತಂತ್ರ್ಯ, ವಿಚಾರಸ್ವಾತಂತ್ರ್ಯ, ಟೀಕಿಸುವ ...ತಂತ್ರ್ಯ ಪ್ರತಿಭಟಿಸುವ ಸ್ವಾತಂತ್ರ್ಯ..... ಈ ಮಾತುಗಳು ...ಗೆ ಬಿದ್ದೊಡನೆ ಕೆಟ್ಟ ಕನಸು ಕಂಡಂತೆ ದಿಗಿಲುಬಿದ್ದು ...ಡುವ ನಾಯಕರನ್ನು ನೋಡುತ್ತಿದ್ದೇವೆ. ಕೇವಲ ...ತ್ತೆರಡು ವರ್ಷದ ಹಿಂದೆ ಮಾಡಬಾರದ್ದನ್ನೆಲ್ಲ ಮಾಡಿ ...ರ್ಟ್ ಆಜ್ಞೆಯನ್ನು ಉಲ್ಲಂಘಿಸಿ ವೃತ್ತಪತ್ರಿಕೆಗಳನ್ನು ...ದ್ದು ಮಾಡಿ ಈ ಬಗ್ಗೆ ಆಕ್ಷೇಪಿಸಿದವರನ್ನೆಲ್ಲ ಜೈಲಿಗೆ ... ಮಹಾನಾಯಕಿ ಅನ್ನಿಸಿಕೊಂಡಿದ್ದ ಇಂದಿರಾ ...ಧಿಯವರ ನೆನಪು ಮಾಸಿಲ್ಲ. ವಿಚಾರಸ್ವಾತಂತ್ರ್ಯವನ್ನು ...ವಕೇಂದ್ರವಾಗಿಸಿಕೊಂಡಿರುವ ಸಂವಿಧಾನವನ್ನು ...ಚಿ ವಿರೂಪಗೊಳಿಸಿದ ಏಕಮಾತ್ರ ಕಾರಣಕ್ಕೇ ...ಯನ್ನು ಕಠೋರ ಶಿಕ್ಷೆಗೆ ಗುರಿಮಾಡುವುದು ...ವಿತ್ತು. ಆದರೆ ಆಗ ಅವಳನ್ನು ಚುನಾವಣೆಯಲ್ಲಿ ...ಲಿಸಿ ಅಧಿಕಾರಕ್ಕೆ ಬಂದ ನಮ್ಮ ರಾಜಕಾರಣಿಗಳಿಗೆ ...ು ಬೇಕಿರಲಿಲ್ಲ. ಗೆದ್ದೊಡನೆ ಅತ್ಯಾಧುನಿಕ ಸರ್ಕಾರಿ ...ಗಳಲ್ಲಿ ಮಿಂಚತೊಡಗಿ ಯಾರೂ ನಿರೀಕ್ಷಿಸದಿದ್ದಂತಹ ...ಗಳಾದ ನಮ್ಮ ಬಹುಸಂಖ್ಯಾತ ರಾಜಕಾರಣಿಗಳಿಗೆ ...ಯೇ ಪ್ರಚ್ಛನ್ನ ಆದರ್ಶವಾದರು. ಇಂದಿರಾ ...ಧಿಯಂತೆಯೇ 'ಗರೀಬಿ ಹಟಾವೋ'ದ ವಿವಿಧ ...ಣಗಳನ್ನು ನಾಚಿಕೆಗೆಟ್ಟು ಘೋಷಿಸತೊಡಗಿದ ಇವರು ...ಲ್ಲೇ ಮಹಾ ಶೋಷಕರನ್ನೂ, ಜಾತಿವಾದಿಗಳನ್ನೂ, ...ಸಿಸ್ಟ್ ಪಿಶಾಚಿಗಳನ್ನೂ ಬಚ್ಚಿಟ್ಟುಕೊಂಡಿದ್ದರು; ...ಕಾರದ ಸ್ಥಾನವೆಂದರೆ ಜನಸೇವೆಗಾಗಿ ಇರುವ ...ನವೆಂಬುದು ಎಂದೋ ಮರೆತುಹೋಗಿತ್ತು.

... ಸಂವಿಧಾನಕ್ಕೆ ನೇಣು ಹಾಕಲೆಳಸುವ ಇಂದಿರಾ


ಪುಸ್ತಕ, ವೃತ್ತಪತ್ರಿಕೆ ಸುಡುವ ರಕ್ಕಸರು

ಗಾಂಧಿಯವರಂತೆಯೇ ದೇವೇಗೌಡರು ವೆಂಕಟಗಿರಿ ಗೌಡರ ಪುಸ್ತಕವನ್ನು ಪೊಲೀಸರಿಂದ ಹತ್ತಿಕ್ಕಲೆಳಸಿದ್ದನ್ನು ನಮ್ಮ ಜನ ಮರೆಯಬಾರದು. ಪುಸ್ತಕಗಳನ್ನು ರದ್ದು ಮಾಡುವುದು, ಸುಟ್ಟುಹಾಕುವುದು, ಮುಟ್ಟುಗೋಲು ಹಾಕಿಕೊಳ್ಳುವುದು, ಬರೆದವರನ್ನು ಸುಟ್ಟುಬಿಡುವುದು–ಇವತ್ತು ಭೀಮಣ್ಣ ಖಂಡ್ರೆ, ಲೀಲಾದೇವಿ ಪ್ರಸಾದ್, ಜೆ.ಎಚ್. ಪಟೇಲ್, ಮಲ್ಲಿಕಾರ್ಜುನ ಖರ್ಗೆ, ಮಂತ್ರಿಣಿ, ಪ್ರತಿಭಟಿಸುತ್ತಿರುವ ಖಂಡ್ರೆ ಗ್ಯಾಂಗ್–ಎಲ್ಲರೂ ಲಿಂಗಾಯತರು. ಇವರ ಅಬ್ಬರ ಹೆಚ್ಚಾಗುತ್ತಿದೆ; ಇವರ ಕೊಬ್ಬು ಜಾಸ್ತಿಯಾಗುತ್ತಿದ್ದಂತೆ ಬುದ್ಧಿ ಕಮ್ಮಿಯಾಗುತ್ತಿದೆ. ಅಂದರೆ ಇವರ ಅನ್ಯಾಯ, ದುಷ್ಟತನ, ಸಂವಿಧಾನ ವಿರೋಧಿ ವರ್ತನೆ ಮಿತಿ ಮೀರುತ್ತಿದೆ.

ಇದಕ್ಕೆಲ್ಲ ಕುಮ್ಮಕ್ಕು ಕೊಡುವ ಹುಳಹುಪ್ಪಟೆಗಳು ಸರ್ಕಾರದ ಅನೇಕ ಹಂತದಲ್ಲಿ ಬೀಡುಬಿಟ್ಟಿವೆ. ಒಂದೇ ಉದಾಹರಣೆ ತೆಗೆದುಕೊಳ್ಳಿ. ಮುದ್ದು ಕೃಷ್ಣ ಎಂಬ ಅನಕ್ಷರಸ್ಥ ಉದ್ಧಟ ಪಟೇಲರ ಸಾಹಿತ್ಯ, ಸಂಸ್ಕೃತಿಯ ಡೈರೆಕ್ಟರ್; ಈತನ ಸದ್ಯದ ಜೀವನೋದ್ದೇಶವೇ ತನ್ನ ದಣಿಗಳಾದ ಪಟೇಲ್ ಮತ್ತು ಹೆಂಡದ ದೊರೆಗಳಿಗೆ ಪ್ರಿಯವಾದ ಸೇವೆ ಸಲ್ಲಿಸುವುದು. ಈತನಿಗೆ ವೃತ್ತಪತ್ರಿಕೆಗಳ ವಿಮರ್ಶೆಯನ್ನು ಕಂಡರೆ ಪ್ರಾಣಭಯ; ಇವನ ಚೇಲರೆಲ್ಲರಿಗೆ ನಡುಕ. ಈ ಪತ್ರಿಕೆಗಳೆಲ್ಲ ಇಲ್ಲದಿದ್ದರೆ ಈ ಪಟೇಲ್, ಲೀಲಾದೇವಿ, ಮುದ್ದುಕೃಷ್ಣ ಸಿದ್ದಯ್ಯ ಸರೋವರ ಶ್ರೀನಿವಾಸ್, ಹೇಮಾ ಚೌಧುರಿ, ಶಿವಿ, ಶಿಖಂಡಿಗಳಿಗೆಲ್ಲ ನೆಮ್ಮದಿಯಲ್ಲವೆ? ಇವರ ಭೋಜನ ನಿರಾತಂಕವಾಗಿ ನಡೆದು ಇವರ ಪುತ್ರರೆಲ್ಲ ಇನ್ನಷ್ಟು ಹೆಲಿಕಾಪ್ಟರ್ ಕೊಂಡು ಭೂಮಿ, ಆಕಾಶ ಎರಡರಲ್ಲೂ ವಿಜೃಂಭಿಸಬಹುದಲ್ಲವೆ?

* * * * * *

ಮರೆಯುವ ಮುನ್ನ



ಪಿ. ಲಂಕೇಶ್ -ಏಪ್ರಿಲ್ 9, 1997

ಇದನ್ನು ಎಲ್ಲರೂ ಕೂಡಲೆ ಅರಿಯಬೇಕು.

ಇಲ್ಲದಿದ್ದರೆ ಮತ್ತೊಂದು ತುರ್ತು ಪರಿಸ್ಥಿತಿ ಬಾಗಿಲಲ್ಲಿ ಕಾಯುತ್ತಿದೆ. ಪುಸ್ತಕ, ಪತ್ರಿಕೆ, ಅಚ್ಚು ಮಾಡಿದ ಅಭಿಪ್ರಾಯಗಳು, ಖಂಡನೆಗಳು–ಎಲ್ಲವನ್ನೂ ಸುಡುವ ರಕ್ಕಸರನ್ನು ಹತ್ತಿಕ್ಕಬೇಕಾದ್ದು ಪ್ರಜಾಪ್ರಭುತ್ವವನ್ನು ಪ್ರೀತಿಸುವವರ ಕರ್ತವ್ಯ. ಸರಳ, ಪ್ರಾಮಾಣಿಕ, ನೆಮ್ಮದಿಯ, ನಿಯತ್ತಿನ ಬದುಕನ್ನು ಮೆಚ್ಚುವ ಎಲ್ಲ ಸಂಪನ್ನರೂ ಇವರೆಲ್ಲರ ವಿರುದ್ಧ ಮೈಕೊಡವಿ ನಿಲ್ಲಬೇಕು.

* * * * * *

ಪುಸ್ತಕ ಅಥವಾ ಅಚ್ಚಾದ ಯಾವುದನ್ನೇ ಆಗಲಿ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುವುದರ ಬಗ್ಗೆ ಪರಿಷತ್ತಿನ ಸದಸ್ಯ ಸಿದ್ಧಲಿಂಗಯ್ಯ ತರಹದವರು ಆಡುವುದನ್ನು ನೋಡಿ ನನಗೆ ಅಸಹ್ಯವಾಗಿದೆ. ಇಂಥವರು ಸಾಹಿತಿಯಾಗೇ ಅರ್ಹರಲ್ಲ ಅನ್ನಿಸುತ್ತದೆ. ಶ್ರೀರಾಮರೆಡ್ಡಿಯವರು ಪ್ರತಿಭಟಿಸಿದ್ದು ನಿಜಕ್ಕೂ ಐತಿಹಾಸಿಕ, ಅವರಿಗೆ ನನ್ನ ಮೆಚ್ಚಿಗೆ ಹೇಳಬೇಕಾದ್ದು ನನ್ನ ಕರ್ತವ್ಯ. ಹಾಗೆಯೇ ಪ್ರಫುಲ್ಲ ಮಧುಕರ್, ಉಗ್ರಪ್ಪ ಮುಂತಾದವರ ಪ್ರತಿಕ್ರಿಯೆಯ ಬಗ್ಗೆ. ಪಟೇಲ್, ಎಂ.ಪಿ. ಪ್ರಕಾಶ್, ಲೀಲಾದೇವಿ, ಲಲಿತಾನಾಯಕ್ ಮುಂತಾದವರು ಎಂಥ ದುಷ್ಟರಾಗಿದ್ದಾರೆ ಎಂಬುದನ್ನು ಈ ಪ್ರಸಂಗ ತೋರಿದೆ.



ಏಪ್ರಿಲ್ 1997ರಲ್ಲಿ 'ಧರ್ಮಕಾರಣ' ಪುಸ್ತಕವನ್ನು ರಾಜ್ಯ ಸರಕಾರ ಮುಟ್ಟುಗೋಲು ಹಾಕಿತು. ಅದನ್ನು ವಿರೋಧಿಸಿ ಪಿ. ಲಂಕೇಶರು ಪ್ರತಿಭಟನಾ ಸಭೆ ಮತ್ತು ಮೆರವಣಿಗೆಗೆ ಕರೆ ನೀಡಿ ಅದನ್ನು ಯಶಸ್ವಿಯಾಗಿ ನಡೆಸಿದ್ದರು. ಈಗ ಇದೇ 'ಧರ್ಮಕಾರಣ' ಪುಸ್ತಕದ ಮೇಲಿನ ನಿಷೇಧವನ್ನು ಸರ್ವೋಚ್ಚ ನ್ಯಾಯಾಲಯವೂ ಎತ್ತಿ ಹಿಡಿದಿರುವ ಸಂದರ್ಭದಲ್ಲಿ ಅಂದು ಲಂಕೇಶರು ಬರೆದಿದ್ದ ಲೇಖನವನ್ನು ಮತ್ತೆ ಇಲ್ಲಿ ನೀಡುತ್ತಿದ್ದೇವೆ.

ಎಡಿಯೂರಪ್ಪ ಮುಂತಾದವರು ಬಳಸುತ್ತಿರುವ ಮಾತು. 'ಧರ್ಮಕಾರಣ' ಎಂಬುದು ಕಾದಂಬರಿಯಾಗಿ, ಸಾಹಿತ್ಯಕೃತಿಯಾಗಿ ಕೆಟ್ಟ ಪುಸ್ತಕ; ಒಂದು ಘಟನೆ, ಪಾತ್ರ, ಸನ್ನಿವೇಶವನ್ನು ಮಂಡಿಸಲು ಬಾರದ ಈ ಲೇಖಕನ 'ಧರ್ಮಕಾರಣ'ವನ್ನು ಓದುಬಲ್ಲವರು ಓದುವಂತಿಲ್ಲ. ಅದಕ್ಕೆ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಕೊಟ್ಟವರು ಈ ಸರ್ಕಾರದ ನೆರಳಲ್ಲಿರುವ ಅಕಾಡೆಮಿಯವರು. ಈಗ ಇದ್ದಕ್ಕಿದ್ದಂತೆ ಕೆಲವರು ದುಷ್ಟರ ಅರಚಾಟಕ್ಕೆ ಮನ್ನಣೆ ನೀಡಿ ಅದಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಮುಖ್ಯಮಂತ್ರಿ, ಅಕಾಡೆಮಿಯ ಅಧ್ಯಕ್ಷ, ಸಂಸ್ಕೃತಿಯ

ವಿಚಾರಸ್ವಾತಂತ್ರ್ಯ ನಿಜಕ್ಕೂ ಬೇಕಾದದ್ದು ಅಲ್ಪಸಂಖ್ಯಾತರಿಗೆ, ದಲಿತರಿಗೆ, ಬಡವರಿಗೆ, ಅನ್ಯಾಯಕ್ಕೊಳಗಾದ ಎಲ್ಲರಿಗೆ; ತಕ್ಕ ಮಾತು–ಕೃತಿಯ ಮೂಲಕ ಪಟೇಲ್, ಗೌಡ, ಶಾನುಭೋಗರ, ಪರಂಪರಾಗತವಾಗಿ ತುಳಿವವರ, ಸುಲಿಗೆಗಾರರ, ಭಟ್ಟಂಗಿತನ ಮತ್ತು ವಿಕೃತ ಸೇವೆಯ ಮೂಲಕ ವಾರಾಂಗನೆಯರಾಗಿ ಈ ದೇಶವನ್ನು ದುರಂತದತ್ತ ಸಾಗಿಸುತ್ತಿರುವವರ ವಿರುದ್ಧ ಪ್ರತಿಭಟಿಸುವುದಕ್ಕಾಗಿ ವಾಕ್‌ಸ್ವಾತಂತ್ರ್ಯ, ವಿಚಾರಸ್ವಾತಂತ್ರ್ಯ, ಪ್ರತಿಭಟಿಸುವ ಸ್ವಾತಂತ್ರ್ಯ ಬೇಕು.

'ಧರ್ಮಕಾರಣ' ಕಾದಂಬರಿಯಾಗಿ ಕೆಟ್ಟದಾಗಿದೆ. ಆದರೆ ಕೆಟ್ಟದನ್ನು ಬರೆಯುವ ಹಕ್ಕು ಕೂಡ ಎಲ್ಲರಿಗಿದೆ. ಅದರಲ್ಲಿರುವ ಮಾಹಿತಿಗಳು ತಪ್ಪಿದ್ದರೆ ಅದನ್ನು ಹೇಳಬೇಕಾದ್ದು ವಿದ್ವಾಂಸರ ಕೆಲಸ; ಕಂದಾಚಾರಿಗಳು ಬೆಂಕಿ, ಚಾಕು, ಚೂರಿ ಹಿಡಿದು ಪುಸ್ತಕಗಳನ್ನು ಹತ್ತಿಕ್ಕುವುದು, ಸಾಹಿತಿಗಳನ್ನು ಹೆದರಿಸುವುದು ನಿಷಿದ್ಧ.

ಚುಂಚನಗಿರಿ ಐನೋರು ಯಮ್ಮೆ ಸಮ್ಮೇಳನ ಮಾಡಿದ್ರಂಗ

"ಸೆರ್ಕಾರ ಅಳ್ಳಾದಹಾ ಅದಂತೆ?" ಎಂದು ಸೀರ ಒಂದು ಮಾತು ಎಸೆದ.

"ದ್ಯಾವೇಗೌಡ ಅಳ್ಳಾದುಸ್ತಯಿದ್ದನಂತೆ?" ಎಂದ ಉಗ್ರಿ.

"ಅದ್ಯಾಕಂಗಳ್ಳಾದುಸ್ತಾ ಅವುನು" ಎಂದು ಜುಮ್ಮಿ ಸಿಟ್ಟುಗೊಂಡಳು.

"ಇಸಿಸಿ ಅವುನಿರದೆ ಅದಕಲವೇನೆ. ಸರ್ಕಾರ ಬೇರುಬುಡದಂಗೆ ಅಳ್ಳಾಡಿಸಿ ಆಗಾಗ್ಗೆ ನೀರು ಬುಡ್ತಾಯಿರತನೆ."

"ಒಂದಿನ ಯಾವ್ದಾರ ಅದ್ದಮಳೆನೊ ಗಾಳಿನೊ

ಬಯಲುಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

ಬಂದು ಉಳ್ಸಿಕಂಡಾಗ ನಾನೇನು ಮಾಡದು ಯಲ್ಲಾ ಅವುರು ಮಾಡಿಕಂಡಿದ್ದೆಯ ಅಂದು ಗಿಂಟ ಕೊಡವಿ ಬುಡ್ತನೆ."

"ಅದೇನೊ ಕುಮಾರ ಚಕ್ರಯೂವದ ಕ್ವಾಟೆವಳಗವುನೆ ಅಂದನಂತೆ ಅದ್ಯಾಕಂಗಂದಾ?" ಎಂದ ಕಾಳಮಾವ.

"ಅದಾ ಬಾಯಿಗೆ ಬಂದಂಗೆ ಅಂತವೆ ಕಣಮಾವ, ಅವುಕ್ಕಲ್ಲ ಅರ್ಥ ಹುಡುಕಕ್ಕಾದತೇ? ಆ ಕುಮಾರ ಸ್ವಾಮಿಗೆ ಹಿಂದು ಗೊತ್ತಿಲ್ಲ ಮುಂದುಗೊತ್ತಿಲ್ಲ. ಅವುನು ಏನೇನೊ ಮಾತಾಡ್ತನೆ. ಈ ದ್ಯಾವೇಗೌಡನೂ ಅರ್ಥ ವಿಲ್ಲದ ಮಾತಾಡ್ತನೆ. ಅವ ಹಿಂಜ ನೋಡಿದ್ರ ಈ ಬಡ್ಡೆತ್ತವು ಮಾಡಿಕಂಡಿರೊ ರಣಗಾಯ ಕಾಣ್ತದೇ ವರತೂ ಯಾವ ಅರ್ಥನೂ ಕಾಣದಿಲ್ಲ."

"ಚಕ್ರಯೂವ ಬೇಧಿಸಿಗಂಡು ಬತ್ತಿನಿ ಅಂದವುನೆ ಕುಮಾರ?" ಎಂದ ಸೀರ.

"ಚಕ್ರವ್ಯೂಹ ಇಲ್ಲಿಗಂಟ ಯಾರಾರ ಬೇಧಿಸಿದ್ದರೇ, ಬೇಧಿ ಮಾಡಿಕಂಡು ತೀರ್ಕೋಗ್ಯವುರೆ. ಅಂಗೆ ಈ ಕುಮಾರ ಅವುರಪ್ಪ ಬಿಜೆಪಿ ಚಕ್ರವ್ಯೂಹದಲ್ಲಿ ಸಿಗಾಯ್ಕಂಡವುರೆ. ಇವುರ ಕತೆ ಮುಗದಂಗೆಯ."

"ಯಂಗೀಚೆಗೆ ಬರಬೇಕು ಅಂತ ದ್ಯಾವೇಗೌಡನಿಗೆ ಗೊತ್ತು ಕಂಡ್ರ. ಬಿಜೆಪಿಗಳ ತಿಕ್ಕೆ ಸುಣ್ಣ ಹಚ್ಚಿ ಬತ್ತನ್ನೋಡು" ಎಂದ ಕಾಳಮಾವ.

"ಬರೋವತ್ತಿಗೆ ಯಲ್ಲ ಮುಗುದಿದ್ರೆ ಏನು ಬಂದಂಗಾಯ್ತು."

"ಯಲ್ಲ ಏನು ಮುಗಿತದ್ನ?"

"ಈಗಾಗ್ಲೆ ಎಡೂರಪ್ಪನ ಬಡಜಟ್ಟು ನೋಡಿ ಯಂಗದೆ ಅಂತ ತಿರುಗ್ತಾ ಅವುನೆ. ಬಿಜೆಪಿ ಜನಂತೂ ಯಾರ ಬಾಯಲಿ ನೋಡು ಎಡೂರಪ್ಪನ ಬಡಜುಟ್ಟು ನೋಡಿ ಅನ್ನೋರೆಯ. ಅದರ ಪ್ರಚಾರಕಾಗಿ ವಿಕಾಸ ಯಾತ್ರೆ ಮಾಡಿ ಕಂಡು ಐಲೋ ಅಂತ ಕೂಗ್ತ ಅವುರೆ. ಹಿಂಗಾಗಿ ಕಾಸಿರೋನಿಂದೆ ಜನೋದ್ರೆ ಇವುರತ್ರ ಯಾರಿದ್ದರೂ?" ಎಂದ ಉಗ್ರಿ.

"ಅದ್ಕೆ ಉರಿಯತ್ತದೆ ದ್ಯಾವೇಗೌಡನಿಗೆ?" ಎಂದ ಸೀರ.

"ದ್ಯಾವೇಗೌಡ ಅವತ್ತಿನ ದಿವಸದಲ್ಲಿ ಬುದ್ಧಿ ಓಡಿಸಿ ಕುಮಾರಸ್ವಾಮಿ ಹಿಂದೋಗವತ್ತಿಗೆ ಸರಿಯಾಯ್ತು. ಅವುನ ಭಯಕಾರ ಇವುರು ಸ್ವಟ್ಟಗವುರೆ ಇಲ್ದೆಯಿದ್ರೆ ಈಟೊತ್ತಿಗೆ ಕುಮಾರಸ್ವಾಮಿಯ ನುಂಗಿ ನೀರು ಕುಡುದುಬು ಡೋರು" ಎಂದ ಕಾಳಮಾವ ಗೌಡರ ಮುಂದಾ ಲೋಚನೆ ಕೊಂಡಾಡಿದ.

"ಈಗ್ಲು ನ್ಯುಂಕ್ಕಂಡವುರೆ ಕಣಮಾವ. ಈ ಎಡೂರಪ್ಪ ಬಜೆಟ್ಟಿನ ಮ್ಯಾಲು ಯಾರು ಕೇಳಿದ್ರು ಕೊಟಗಟ್ಲೆ ದುಡ್ಡು ಕೊಡ್ತಿನಿ ಅಂತನೆ ಇದಕೇನೇಳ್ತೀ?"

"ಅವುನ್ಯಾರೊ ದನಿನ ಜಾತ್ರೆ ಮಾಡೋ ಸ್ವಾಮಿಗೆ ಇಪ್ಪತ್ತು ಕೋಟಿ ಕೊಟ್ನನಂತೆ?" ಎಂದ ಸೀರ.

"ಇಪ್ಪತ್ತು ಕೋಟಿಯಲ್ಲ ಕಣೊ ಯರುಡು ಕೋಟಿ ಕೊಟ್ನನಂತೆ."

"ದನತಗಳಕ್ಕಾ?"

"ಅದಕಲ್ಲ, ಗೋಸಮ್ಮೇಳನ ಮಾಡಿ ಊಟ ಮಾಡಕ್ಕೆ."


"ದನಿನ ಜಾತ್ರೆ ಮಾಡಿ ಊಟ ಹಾಕ್ತನೆ ಅಂದ್ರೆ ಅವುನು ವಳ್ಳೆ ಇವುನೆಯ ಬುಡು" ಎಂದ ಕಾಳಮಾವ.

"ಅವುನೇನು ಅವುರಪ್ಪನ ಮನೆಯಿಂದ ತಂದಕೇ ಗೋ ಸಮ್ಮೇಳನಕ್ಕೆ ದುಡ್ಯಂಗೆತ್ರದು ಅಂತ ಗೊತ್ತದವುನಿಗೆ. ಅದ್ಕೆ ಗೋವಿನೆಸರೇಳಿ ಬಾಚಬುಟ್ಟ ದುಡ್ಡ. ಅದರ ಲ್ಲೊಂದಿಷ್ಟು ಖರ್ಚು ಮಾಡಿ ಸಮ್ಮೇಳನ ಮಾಡಿದ ದನಿನ ಜಾತ್ರಿಗೆ ಸಮ್ಮೇಳನ ಅಂತನವುನು. ನಮ್ಮ ಬೂಕನಬೆಟ್ಟದ ಕಾಲುಬಾಗನ್ನೂ ದನಿರಲಿಲವಂತೆ."

"ಮಲ್ನಾಡ ಕಡೆ ಎಲ್ಲಿ ದನಿದ್ದವುಲ? ದನಿರದೇ ನಮ್ಮ ಕಡೆ."

"ಆ ಕಡೆ ದನವೇ ಒಂಥವಾ ಕುಳ್ಳದನ ಕಣ ಮಾವ."


"ಊ, ನಾನ್ನೊಡಿಲವ ಯಲ್ಲಾ ಈ ಚಕ್ಕನೆಡ್ತಿಯಂಗೆ ನ್ಯಲದ್ಲೇ ಇರತವೆ. ದ್ವೊಡ್ಡುಟ್ಟನ ದನಗಳೇನಿದ್ರು ನಮ್ಮ ಕಡೆಲೆಯ. ಆ ನನಮಕ್ಕಳು ಈ ಕಡಿಕೆ ಬಂದು ನಮ್ಮ ದನ ನೋಡಿದ್ರೆ ಇನ್ನಂಗಾಡ್ತರೊ ಏನೋ?"



"ಆಕ್ಟುವಲಿ ದನಿನ ಜಾತ್ರೆ ಮಾಡಿ ಜನ ಕರಿಬೇಕಾ ದೋರು ನಮ್ಮ ಚುಂಚನಗಿರಿಸ್ವಾಮಿ ದ್ವಡಪ್ಪ. ಇವುನು ಕಿರೀಟ ಪಲ್ಲಕ್ಕಿ ದೇವರ ಮ್ಯರವಣಗೆಲಿ ಕಾಲ ಹಾಕಿದು ಆ ರಾಘವಸ್ವಾಮಿ ದನಿನ ಜಾತ್ರೆ ಮಾಡ್ತನೆ. ದನಿಗು ಅವುನಿಗೂ ಏನು ಸಮುಂಥ?" ಎಂದು ವಾಟ ಒಳಬಂದ.

ಏ ಹಾಥಿ ನಹಿ ಗಣೇಶ್ ಹೈ

ಉತ್ತರ ಪ್ರದೇಶ ದೇಶದಲ್ಲಿಯೇ ದೊಡ್ಡ ರಾಜ್ಯ ಆಗಿದ್ದರೂ, ತೋಳ್ಬಲದ ರಾಜಕೀಯಕ್ಕೆ ಹೆಸರುವಾಸಿ ಯಾಗಿದ್ದರೂ ಈ ಸಲದ ಚುನಾವಣೆ ಭಾರೀ ಸಪ್ಪೆ ಅನ್ನಿಸುತ್ತಿದೆಯಂತೆ. ಏಳು ಹಂತದ ಚುನಾವಣೆಯಲ್ಲಿ ಈಗಾಗಲೇ ಆರು ಹಂತಗಳು ಮುಗಿದಿದ್ದರೂ 'ಬಾಹು ಬಲಿ'ಗಳಿಗೆ ಕೆಲಸವೇ ಇಲ್ಲದೆ ಕೈ ಕೈ ಕಡಿತ ಶುರು ಆಗಿದೆಯಂತೆ. ಮಹಿಳೆಯರಿಗೆ ಯಾವುದೇ ಪಕ್ಷ ಸಾಕಷ್ಟು ಟಿಕೇಟು ನೀಡದಿದ್ದರೂ ನಂಗಾನಾಚ್‌ಗೆ ಬಳಸಿಕೊಳ್ಳು ತ್ತಿದ್ದುದು ಅಲ್ಲಿನ ಚುನಾವಣಾ ಸಂಸ್ಕೃತಿಯೇ ಆಗಿತ್ತಂತೆ. ಆದರೆ ಈ ಸಾಲಿನ ಚುನಾವಣೆಯಲ್ಲಿ ಸಿನಿಮಾ ನಟಿಯರು ಕಾಣಿಸಿಕೊಳ್ಳುತ್ತಿದ್ದರೂ, ಅವರು ಯಾರೂ 'ನಂಗಾನಾಚ್' ಮಾಡದೇ ಇರೋದು ಮತದಾರ ಬಾಂಧವನಿಗೆ ತುಂಬಾ ನಿರಾಶೆ ತಂದಿದೆಯಂತೆ.



ಪೋಸ್ಟರ್‌ಗಳು ಅಂಟಿಸುವಂತೆ ಇಲ್ಲ, ಬ್ಯಾನರುಗಳ ಹಾರಾಟ ಇಲ್ಲ, ಲೌಡ್ ಸ್ಪೀಕರ್ ಅಬ್ಬರ ಇಲ್ಲ, ನಂಗಾ ನಾಚ್ ಮೊದಲೇ ಇಲ್ಲ, ಹಾಗಾದರೆ ಚುನಾವಣೆಗೆ ಎಂತಹ ದರಿದ್ರದವನಾದರೂ ನಿಲ್ಲಬಹುದಲ್ಲ ಅಂದರೆ ಅದು ಹಾಗಲ್ಲವಂತೆ. ಇದು ಎಲ್‌ಟಿಐ ಜಮಾನಾ ನಹಿ ಎಟಿಎಂ ಜಮಾನಾ ಅಂತಾರಂತೆ. ಎಲ್‌ಟಿಎಂ ಅಂದರೆ **left hand thumb impression** ಅರ್ಥಾತ್ ಎಡಗೈ ಹೆಬ್ಬೆಟ್ಟಿನ ಗುರುತು ಅಂತ ಅಲ್ಲವಂತೆ, **leg touching mechanism** ಅಂತ ಅರ್ಥ ಅಂತೆ! ಅಂದರೆ ಚುನಾವಣಾ ಅಭ್ಯರ್ಥಿ ಮತದಾರ ಬಾಂಧವ ಕಣ್ಣಿಗೆ ಬಿದ್ದ ತಕ್ಷಣ ಡೈ ಹೊಡೀತಾನಲ್ಲ ಅಂದಂತೆ! ಹಿಂದಿನ ಚುನಾವಣೆಗಳಲ್ಲಿ ಅಭ್ಯರ್ಥಿಗಳು ಹೀಗೆ ಮಾಡುತ್ತಿದ್ದರಂತೆ. ಈಗ ಅದು ಸಂಪೂರ್ಣವಾಗಿ ಇಲ್ಲವಾಗಿದೆ ಅಂತ ಅಲ್ಲ, ಬ್ರಾಹ್ಮಣ ಅಭ್ಯರ್ಥಿಗಳು ಇರುವ ಕಡೆ ಇದು ಇನ್ನೂ ಜಾರಿಯಲ್ಲಿದೆಯಂತೆ. ಇದುವರೆವಿಗೆ ತಮ್ಮ ಕಾಲಿರುವುದೇ ನಮಸ್ಕಾರ ಮಾಡಿಸಿ ಕೊಳ್ಳಲು ಎಂದು ನಂಬಿದ್ದವರೂ ಅಭ್ಯರ್ಥಿ ಆದ ಸಂಕಟಕ್ಕೆ ಮತದಾರನ ಪಾದ ಹಿಡೀತಿದ್ದಾರಂತೆ. ಹಾಗೆ ಮಾಡಿಸಿಕೊಳ್ಳುವವನಿಗೂ ಅದೇನೋ ಒಂದು ತರಹ ಆನಂದ. 'ಬ್ರಾಹ್ಮಣ್ ಹೋಕರ್ ಭಿ ಹಮಾಪಾ ಪೈರ್ ಚೂತಾ ಹೈ' ಅಂತ ಖುಷೀಲಿ ಹೇಳ್ತಾರಂತೆ.

ಇವೆಲ್ಲ ಕಾಸು ಕರೀಮಣಿ ಖರ್ಚಿಲ್ಲದೆ ನಡೆಯುವ ಕೆಲಸಗಳು. ಇನ್ನು ಹಣದ ವಿಷಯ ಎಲ್ಲಿದೆ ಅಂದರೆ ಮತದಾರ ಮಹಾಪ್ರಭು ತಾವು ಇಂತಹವರಿಗೆ ಮತ ನೀಡ್ತೀನಿ ಅಂತ ತುಟೀನೇ ಬಿಚ್ಚೋಲ್ವಂತೆ. ಇದು ಊರಿನ ಯಜಮಾನ ಅನ್ನಿಸಿಕೊಂಡವನಿಗೆ ಸುಗ್ಗಿಯಾಗಿದೆಯಂತೆ. ಈ ಮತ ಗುತ್ತಿಗೆದಾರರು 'ನಮ್ಮಲ್ಲಿ ಇಷ್ಟು ಓಟು ಇವೆ ಇಷ್ಟು ಹಣ ಕೊಡಿ' ಅಂತ ನೇರವಾಗಿ ಹಣ ಕೇಳ್ತಾ ಇದಾರಂತೆ. ಅಂದರೆ ಚುನಾವಣಾ ಅಭ್ಯರ್ಥಿ ಇಂತಹವರಿಗೆ ಎಟಿಎಮ್ಮು!

ತೋಳ್ಬಲ ಪ್ರದರ್ಶನ ಇಲ್ಲ ಅಂದಾಕ್ಷಣ ಸಂಪೂರ್ಣ ವಾಗಿ ಇಲ್ಲವೇ ಇಲ್ಲ ಅಂತಲ್ಲ, ಎಲ್ಲೆಲ್ಲಿ ಅವಕಾಶ ಸಿಗುತ್ತೋ ಅಲ್ಲೆಲ್ಲಾ ಈ 'ಬಾಹುಬಲಿ'ಗಳು ತಮ್ಮ ಇರುವಿಕೆಯನ್ನು ತೋರ್ಪಡಿಸುತ್ತಲೇ ಇದಾರಂತೆ. ಅಮರಾಮಣಿ ತ್ರಿಪಾಠಿ ಅನ್ನೋ ಹೆಸರು ಕೇಳಿರಬೇಕು. ಈ ಮಹಾಶಯರು ಮಂತ್ರಿ ಆಗಿದ್ದ ವರು. ಈಗ ಇಲ್ಲ ಅನ್ನಿ. ಕವಿಯತ್ರಿ ಮಧುಮಿತ ಕೊಲೆ ಕೇಸಿನಲ್ಲಿ ಪ್ರಮುಖ ಆರೋಪಿ. ಈಗ ಡೆಹರಾಡೂನ್ ಜೈಲಿನಲ್ಲಿ ಆತಿಥ್ಯ ಪಡೆಯುತ್ತಿದ್ದಾರೆ. ಜೈಲಿನಲ್ಲಿದ್ದೀನೀಂತ ಚುನಾವಣಾ ಪ್ರಚಾರ ಮಾಡದಿದ್ದರೆ ಅವರ ಬೆಂಬಲಿಗರಿಗೆ ನೋವಾಗುತ್ತೆ ಅಂತಾನೋ ಏನೋ ಅವರು ಬಂದು ಕ್ಷೇತ್ರದಲ್ಲಿ ತಮ್ಮ ಅಭ್ಯರ್ಥಿ ಪರವಾಗಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮತ ಯಾಚಿಸಿದರು. ಅರೆ, ಇದೇನು ಅವರು ಜೈಲಿನಲ್ಲಿದ್ದಾರೆ ಅಂತೀರಿ, ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದರು ಅಂತೀರಿ. ಅದು ಹೇಗೆ ಸಾಧ್ಯ, ಇದೆಲ್ಲ ಬಂಕಂ ಅಂದುಕೊಳ್ಳಬೇಡಿ. ಇದು ಸತ್ಯಸ್ಯ ಸತ್ಯ. ಆಧುನಿಕ ತಂತ್ರಜ್ಞಾನ ಇಂತಹವರಿಗೆ ಏನೊಂದು ಅವಕಾಶ ಕಲ್ಪಿಸುತ್ತಿದೆ ಎನ್ನುತ್ತೀರಿ. ಅವರು ಜೈಲಿನ ಒಳ ಗಿಂದಲೇ ಮೊಬೈಲ್ ಫೋನ್‌ನಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಭಾಷಣ ಮಾಡಿದರಂತೆ!

ನಮ್ಮ ನ್ಯಾಯ ವ್ಯವಸ್ಥೆ ಇನ್ನೂ ಅಷ್ಟೊಂದು ಅದ್ವಾನ ಆಗಿಲ್ಲ, ಹಲವು ಪಾತಕಿಗಳು, ರಾಜಕೀಯ, ಸಮಾಜ ಸೇವೆ ಅಂತ ಆರಾಮವಾಗಿ ಓಡಾಡಿಕೊಂಡಿರುವುದು ಸತ್ಯವೇ ಆದರೂ ಕೆಲವೊಮ್ಮೆ ಅಂತಹವರಲ್ಲಿ ಕೆಲವರು ಸಿಗಾಕಿಕೊಂಡು ಅನಿವಾರ್ಯವಾಗಿ ಶಿಕ್ಷೆ ಅನುಭವಿ ಬೇಕಾಗಿಬರುತ್ತೆ ಎನ್ನುವುದೂ ಸುಳ್ಳಲ್ಲ. ಹೀ ಶಿಕ್ಷೆಗೊಳಗಾದವರು ಚುನಾವಣೆಗೆ ನಿಂತು ಜನ ಸೇ ಮಾಡುವ ಅವಕಾಶವನ್ನು ಹಾಳಾದ ಸರ್ಕಾ ಇಲ್ಲವಾಗಿಸಿದೆ. ಹಾಗಂತ ಅವರು ಸುಮ್ಮ ಇರುವುದಕ್ಕೂ ಜನಸೇವೆ ಅನ್ನೋದು ಗುದ್ದುತ್ತಾ ಇರುತ್ತ ಅಂತಹ ಜನಸೇವಕರು ತಮ್ಮ ಹೆಂಡತಿಯರನ ಚುನಾವಣೆಗೆ ನಿಲ್ಲಿಸುವುದು ಅನಿವಾರ್ಯ ಆಗು ಪಾತಕಿಯ ಹೆಂಡತಿ ಚುನಾವಣೆಗೆ ನಿಲ್ಲಬಾರದು ಅನ್ನು ಕಾನೂನು ಇಲ್ಲವಲ್ಲ ಆದಕ್ಕೆ. ಪಾತಕಿ ಏನೋ ಜನರಿ ಪರಿಚಯ ಇರುತ್ತಾನೆ. ಆದರೆ ಅವನ ಹೆಂಡತಿಯು

ಅಣಕ

ಎಚ್.ಎಲ್. ಕೇಶವಮೂರ್ತಿ

ಇರಬೇಕಲ್ಲ, ಅದಕ್ಕೆ ಉತ್ತರ ಪ್ರದೇಶದ ಈ ಸಾಲಿ ಚುನಾವಣೆಯಲ್ಲಿ ಇಂತಹವರು ಏನು ಮಾಡುತ್ತಿದ್ದಾ ಅಂದರೆ... ತಮ್ಮ ಹೆಂಡತಿಯ ಕ್ಷೇತ್ರದ ಪ್ರಮುಖ ಸಭೆಯನ್ನು ಜೈಲುಗಳಲ್ಲೇ ನಡೆಸಿ ಬೇಕಾದ ಸಲ ಸೂಚನೆ ನೀಡುತ್ತಿದ್ದಾರಂತೆ!

ಇನ್ನು ಕೆಲವರು ಇರುತ್ತಾರೆ. ಅವರಿಗೆ ಚುನಾವ ಯಲ್ಲಿ ಸ್ಪರ್ಧಿಸಲು ಇಷ್ಟ. ಆದರೆ ಏನು ಮಾಡುತ್ತೀ ಅವರ ಮೇಲೆ ಒಂದು ನಾಲ್ಕೈದು ರೇಪ್ ಕೇಸ ಎಂಟತ್ತು ಮರ್ಡರ್ ಕೇಸು ಇರ್‍ತವೆ. ಪೊಲೀಸಿನವ ಕೈಗೆ ಸಿಗದಂತೆಯೋ, ಅಥವಾ ಅವರ ಸಹಾಯ ದಿಂದಲೋ ಭೂಗತರಾಗಿರುತ್ತಾರೆ. ಸರ್ಕಾರಾನ ಇಂತಹವರನ್ನು ಹಿಡಿದುಕೊಟ್ಟರೆ ಇಷ್ಟು ಲ ಬಹುಮಾನ ಕೊಡ್ತೀವಿ ಅಂತ ಘೋಷಿಸಿರು ಸರ್ಕಾರಕ್ಕೂ ಗೊತ್ತು ಇಂತಹ ಘೋಷಣೆಗಳಿಗೆ ಅರ್ಥ ಇಲ್ಲ, ಪ್ರಾಣದ ಮೇಲೆ ಆಸೆ ಇರೋ ಯಾ ನರಮನುಷ್ಯನೂ ಪಾತಕಿಗಳನ್ನು ಹಿಡಿದುಕೊಡ್ತೀನಿ ಅ ಮುಂದೆ ಬರಲ್ಲ ಅಂತ. ಅಂತೂ ಮಾಡೋ ಶ ಮಾಡಿ ಮುಗಿಸುತ್ತೆ, ಚುನಾವಣೆ ಘೋಷಣೆ ಆ ನಂತರ ಇಂತಹ ಪಾತಕಿಗಳ ಪರದಾಟ ನೋಡಲಾ ವುದಿಲ್ಲ, ನಾಮಪತ್ರ ಸಲ್ಲಿಸಬೇಕು, ಪಾ ಪೊಲೀಸಿನವರಿಗೂ ಕಷ್ಟ. ರಾಜ್ಯದ ಪ್ರಮುಖ ಮಠ ಸ್ವಾಮಿಯ ಮೇಲೆ ವಾರೆಂಟ್ ಹೊರಡಿಸಿದರೂ ಆ

"ನಿಜ ಕಣೊ ವಾಟಿಸ್ಸೆ. ಅವುರು ದನಿನ ಮೇಳ ಾಡ್ತರೆ ಅಂದ್ರೆ ಅದು ಸಾಬರ ವಿರುದ್ಧ ಅನ್ನಂಗಾಯ್ತದೆ."

"ಆಗದೇನು ಮಾಡದೆ ಅದ್ಕೆ ಕಣೊ, ಆ ಮುಂದೆ ಿಕ್ಕಳು ಸಾಬರ ದೂರ ಮಾಡಿ ಹಿಂದೂಗಳ ವಗ್ಗಟ್ಟು ಾಡಕ್ಕೆ ಏನೇನು ಪ್ಲಾನ್ ಬೇಕೊ ಅವನ್ನೆಲ್ಲ ಮಾಡ್ತರೆ. ೀ ರಾಘವ ಮಾಡಿದ್ದು ಅದೆಯಾ."

"ಅಲ್ಲಪ್ಪಾ ಆ ಸಾಬ್ರು ದನ ತಿಂತರೆ ಅಂದ್ರೆ, ಅವುರೇನು ನಮ್ಮ ಕ್ವಟಗೆ ವಳಿಕೆ ನುಗ್ಗಿ ಗೊಂತುಕೂದು ನವಡಕಂಡೋಗಿ ಕುಯ್ಕಂಡು ತಿಂದರೇ? ನಮ್ಮೊರು ಾರೋವತ್ತಿಗೆ ಅವರು ತಿಂತರೆ" ಎಂದ ಉಗ್ರಿ.

"ಸಾಬ್ರು ದನ ಅದ್ಯಂಗೆ ತಿಂದರ್ಲ?" ಎಂದಳು ಜುಮ್ಮಿ.

"ನೀನು ಆಡು ಕುರಿ ತಿನ್ನದಿಲವೆ? ಅಂಗೆ."

"ಆಡುಕುರಿಯ ದೇವರು ನಮಿಗೋಸ್ಕರ ತಿಸ್ಟಿ ಮಾಡಿ ಕಳಿಸ್ಯವುನೆ, ತಿಂತಿವಿ. ಅಂಗಂತ ದನನೂ ನ್ನಕ್ಕಾದತೆ? ದನಿನಲ್ಲಿ ವಲ ಹುಳಬೇಕು. ಕರಾವು ರಿಬೇಕು. ಮಸರು, ಮಜ್ಜಿಗೆ, ಬ್ಯಣ್ಣೆ ಹಾಲು, ತುಪ್ಪ ಮಾಡಿಕಂಡು ತಿನ್ನಬೇಕೆ ವರತು ಅವುನ್ನೆ ಕೂದ್ರೆ ಯಂಗಲ?" ಎಂದು ಜುಮ್ಮಿ ಹಳೆ ತರ್ಕ ಮಂಡಿಸಿದಳು.

"ಉತ್ರ ಕೊಡೊ ವಾಟಿಸ್ಸೆ ಜುಮ್ಮಿಗೆ" ಎಂದ ಉಗ್ರಿ.

"ಅಕ್ಕಾ ಬಾಳ ಸೂಕುಸ್ಮ ವಿಚಾರ ಕೆದಕಿದ್ದಿ. ೀನಾದಪ್ಪು ಬೇಗ ಹೋಗಿ ರಾಘವೇಶ್ವರನ ಆಶ್ರಮದಲ್ಲಿ ಪಾಯಿಂಟಾಗದು ವಳ್ಳೆದು. ಸಾಬರ ಬ್ಯೆಯ್ಯೋ ನೀವು ಷ್ಟು ಮುದಿ ಎತ್ತು, ಮುದಿಹಸ ಮನೆಲಿಟಗಂಡಿದ್ದೀರಿ? ಮುದಿಬ್ಯಾಡ ಗೊಡ್ಡಸಮಡಿಕಳಕ್ಕೆ ತಯಾರಿದ್ದಿರಾ? ಸಂತಿಗೆ ಗಂಡೋಗಿ ಮಾರತಿರಿ. ಮಾರಿದ ಮ್ಯಾಲೆ ತಗಂಡೋ ೋನು ಕುಯ್ಕಂಡು ತಿಂದೇ ತಿಂತನೆ ಅಂತ ನಿನಿಗೂ ೊತ್ತು. ಗೊತ್ತಿದ್ದು ಮಾರಿ ಸಾಬರ ಬೋದ್ರೆ ಯಂಗಕ್ಕಾ, ಂಕುಮಾಡು."

"ಹಸಿಗಿಂತ್ಲು ಯಮ್ಮೆ ಜಾಸ್ತಿ ಹಾಲು ಕೊಡ್ತದವ್ವ. ೀ ರಾಘವ ಯಮ್ಮೆ ಸಮ್ಮೇಳನ ಯಾಕ ಮಾಡ್ಳಿಲ್ಲ?" ಎಂದ ಉಗ್ರಿ.

"ಯಾಕೆ ಮಾಡಲಿಲ್ಲ ಅವುನ್ನೆ ಕೇಳ್ಳಹೋಗಿ. ನನ್ನೇನು ಕೇಳ್ತಿ?"

"ಸಿಟ್ಯಾಗಬ್ಯಾಡ ಕಣಕ್ಕ. ಈ ನರಿಬುದ್ಧಿ ಜನಕೆ ದನಿನ ಜೊತೆ ಯಮ್ಮೆಗಳೂ ಕಡಮೆ ಆಯ್ತಾ ಅವೆ ಅನ್ನದು ತಿಳಿಬೇಕಿತ್ತು, ಅಂಗೆ ಯಮ್ಮೆ ಸಮ್ಮೇಳನನೂ ಮಾಡಬೇಕಾಗಿತ್ತು."

"ಯಮ್ಮೆ ಕಡಿಮೆ ಆಯ್ತ ಅವೆ. ನಿಜ ಕಂಢ್ರ ನಮ್ಮೂರಲೇ ತಗೊ ಯಲ್ಲಾರು ಮನೆಲೂ ಯಮ್ಮೆಯಿದ್ದೊ ಇವತ್ತಿದ್ದವೆ?"

"ನೋಡೋ ಸಿದ್ದೇಗೌಡ್ರಮನೆ ಮೂರ್‍ಯಮ್ಮೆದ್ದೊ ಪಟೇಲ್ರ ಮನೆ ಮೂರು, ಭೈರಗೌಡ್ರ ಮನೆ ಮೂರು, ಅದ್ಯಲ್ಲ ಯಾಕವ್ವ ಇಲ್ಲಿಕುಂತಿರೊ ಯಲ್ಲಾರು ಮನೆಲೂ ಯಮ್ಮೆಗಳಿದ್ದೊ ಇವತ್ತಿದ್ದವೆ?" ಎಂದ ಉಗ್ರಿ.

"ನಿಜ ಕಣೊ ಉಗ್ರಿ, ಯಮ್ಮೆ ಪಾಪುಲೇಷನ್ ಕಡಿಮೆ ಆಯ್ತಾ ಅದೆ. ಇವ ಉಳಿಸಿಗಳಕ್ಕೆ ನಾವೇ ಏನಾರ ಮಾಡಬೇಕು."

"ನಾವೇನು ಮಾಡನೊ? ಚುಂಚನಗಿರಿ ಸ್ವಾಮಿ ಮನುಸು ಮಾಡಬೇಕು. ನೀನೆ ಅವುರತ್ರಕೋಗಿ ಅವುನು ಗೋಸಮ್ಮೇಳನ ಮಾಡಿದ ನೀವು ಯಮ್ಮೆ ಸಮ್ಮೇಳನ ಮಾಡಿ ಸ್ವಾಮಿ ಸರ್ಕಾರ ಯರಡು ಕೋಟಿ ಕೊಡ್ತದೆ ಅಂತ ಹೇಳಬೇಕು."

"ಅವುರು ಯಮ್ಮೆ ಕರಿನಂಗೆ ವಯಿಕ್ ವಯಿಕ್ ಅಂದು ಬೋದು ಕಳಿಸಿದ್ರೆ ಏನು ಮಾಡದೊ?" ಎಂದ ವಾಟಿಸ್ಸೆ.

"ಗುರುಗಳು ಬೋದ್ರೆ ಆಸಿರುವಾದ ಅಂತ ತಿಳಕ ಬೇಕು ಕಣೊ. ಆ ರಾಘವೇಶ್ವರ ಮಾಡೊ ಸಬಗೆ ನಾವು ಉತ್ತರ ಕೊಡಬೇಕು ಅಂತ ಯಮ್ಮೆ ಸಮ್ಮೇಳನ ಅಥವಾ ಕ್ವಾಣನ ಜಾತ್ರೆ ಮಾಡ್ಕೋಬೇಕು ಅನ್ನು" ಎಂದ ಉಗ್ರಿ.

"ನೀವೇ ಕ್ವಾಣೆದ್ದಂಗಿದ್ದೀರಿ ಜಾತ್ರೆ ಬ್ಯಾರೆ ನಿಮಿಗೆ" ಎಂದಳು ಜುಮ್ಮಿ.

ಳಾಸ ನಾಪತ್ತೆ ಅಂತಾನೋ, ಅವರು ಸ್ಥಳದಲ್ಲಿಲ್ಲ ಅಂತಾನೋ ಹೇಳಿದರೆ ನಮ್ಮ ಘನ ನ್ಯಾಯಾಲಯ ಒಪ್ಪಿಕೊಳ್ಳುತ್ತೆ. ಆದರೆ ಭೂಗತನಾಗಿದ್ದ ಆರೋಪಿಯೇ ಎದುರು ಬಂದು ನಾಮಪತ್ರ ಸಲ್ಲಿಸಿದರೆ ಅವನು ಸಿಗಲಿಲ್ಲ ಅನ್ನೋ ಸಬೂಬು ಹೇಳಲು ಪೊಲೀಸಿನವರ ಅಂತರಾತ್ಮವೂ ಒಪ್ಪುವುದಿಲ್ಲವೇನೋ. ಅದಕ್ಕೆ ಅಂತಹ ಪಾತಕಿಗಳಿಗೆ "ಮೊದಲು ಶರಣಾಗಪ್ಪಾ ತಂದೆ, ನಂತರ ನಾಮಪತ್ರ ಸಲ್ಲಿಸುವಂತೆ" ಎಂದು ಪೊಲೀಸರೇ ಕೈಮುಗಿದು ಬೇಡಿಕೊಳ್ಳುತ್ತಾರಂತೆ. ಕೆಲವರು ಅವರ ಮಾತಿಗೆ ಬೆಲೆಕೊಟ್ಟು ಹಾಗೆಯೇ ಮಾಡಿದ್ದಾರಂತೆ! ಜೈಲಿಗೆ ಈಗ ತಾನೆ ಬಂದಿರುವುದರಿಂದ ಇವರ ಗೆಲುವಿಗೇನೂ ತೊಂದರೆ ಆಗದಂತೆ ಅವನ ಸಂಗಡಿಗರು ನೋಡಿಕೊಳ್ಳುತ್ತಾರೆ ಅನ್ನುವುದು ಖಾತರಿ ಅಂತೆ!

ಉತ್ತರ ಪ್ರದೇಶದ ಚುನಾವಣೆಯ ಮೊದಲ ಹಂತದಲ್ಲಿಯೇ ಕೊಲೆ, ಸುಲಿಗೆ, ಕಳ್ಳತನ, ಅತ್ಯಾಚಾರ ಇವುಗಳ ಆರೋಪ ಇರುವ 131 ಅಭ್ಯರ್ಥಿಗಳು ಚುನಾವಣೆ ಕಣದಲ್ಲಿ ಇದ್ದರಂತೆ! ಇನ್ನು ಏಳು ಹಂತಗಳಲ್ಲಿ ಇಂತಹವರ ಸಂಖ್ಯೆ ಕನಿಷ್ಟ ಏಳುನೂರನ್ನಾದರೂ ಮೀರುತ್ತೆ! ಮುಂಬರಲಿರುವ ಸರ್ಕಾರದಲ್ಲೂ ಇವರ ಮೇಲುಗೈ ಆಟವೇ ಜೋರಾಗಿರುತ್ತೆ. ಹೀಗಾಗಿ ಅದನ್ನು ಪಾತಕಿಗಳ, ಪಾತಕಿಗಳಿಂದ, ಪಾತಕಿಗಳಿಗಾಗಿ ರಚನೆ ಆದ ಸರ್ಕಾರ ಅನ್ನಬಹುದಾ ಅಂತ....

* * * * * * * * *

ಬಹುಜನ ಸಮಾಜ ಪಕ್ಷದ ಚಿಹ್ನೆ ಯಾವುದು?

ಆನೆ!

ವಿಘ್ನೇಶ್ವರನ ತಲೆ ಯಾವುದು?

ಆನೆಯ ತಲೆ!

ಈಗ ಉತ್ತರ ಪ್ರದೇಶದ ಚುನಾವಣಾ ಘೋಷಣೆಗೆ ಬಿಎಸ್‌ಪಿಯುದ್ದು:

'ಏ ಹಾಥಿ ನಹಿ, ಗಣೇಶ್ ಹೈ
ಬ್ರಹ್ಮ ವಿಷ್ಣು ಮಹೇಶ್ವರ್ ಹೈ'

ಹಿಂದೆ ಏನಿತ್ತು ಅದರ ಧ್ಯೇಯ ವಾಕ್ಯ?

'ತಿಲಕ್, ತರಾಜು ಔರ್ ತಲ್ವಾರ್
ಇನ್ ಕೀನೋಂಕೋ ಜೂತೆಮಾರ್'

ಹಣೆಗೆ ತಿಲಕ ಇಡುವ ಬ್ರಾಹ್ಮಣ, ತಕ್ಕಡಿ ಹಿಡಿಯುವ ವೈಶ್ಯ, ಕತ್ತಿ ಹಿಡಿಯುವ ಕ್ಷತ್ರಿಯ ಈ ಮೂವರಿಗೂ ಚಪ್ಪಲಿಯಡಿಯಲ್ಲಿ ಹೊಡಿ!

ಈಗ 'ಏ ಹಾಥಿ ನಹಿ....' ಭಾಜಪದ ಚಡ್ಡಿ ಸಡಿಲಗೊಳಿಸಿದೆಯಂತೆ!

ಇದುವರೆವಿಗೂ ಈ ವರ್ಗದ ಜನರನ್ನು ಭಾರತೀಯ ಜನತಾ ಪಕ್ಷ ಕೌಚ ಹಾಕಿತ್ತು, ಒಂದು ಅರ್ಥದಲ್ಲಿ ಅದರ ಬೆನ್ನೆಲುಬು ಆಗಿದ್ದೇ ಇವು. ಆ ಭದ್ರ ಕೋಟೆಗೇ ಈಗ ಮಾಯಾವತಿಯ ಲಗ್ಗೆ. ಈ ನಡವಳಿಕೆಗಳಿಂದ ನೊಂದ ಭಾಜಪ ಹಿತೈಷಿಗಳು 'ಬಿಎಸ್‌ಪಿಯವರು ಆರಾಧಿಸಿದರೆ ಹಿಂದೂ ದೇವತೆಗಳು ಗೌರವಾನ್ವಿತರಾಗುತ್ತಾರೆ, ಆದರೆ ಅದೇ ಭಾಜಪ ಆರಾಧಿಸಿದರೆ ಹಿಂದೂ ದೇವತೆಗಳು ಗೌರವ ಕಳೆದುಕೊಳ್ಳುತ್ತಾರಲ್ಲ' ಎಂಬುದಾಗಿ ಅಲವತ್ತುಕೊಳ್ಳುತ್ತಿದ್ದಾರಂತೆ!

ಅಲ್ಲ ಪ್ರಶ್ನೆ ಏನು ಅಂದರೆ ದೇವರು ಧರ್ಮದ ಹೆಸರಿನಲ್ಲಿ ಜನರನ್ನು ಮೌಢ್ಯಕ್ಕೆ ಕೆಡವಿದ ಭಾಜಪದಂತೆಯೋ ಬಿಎಸ್‌ಪಿನೂ ಮಾಡುತ್ತದೆಯೋ ಅಂಬೋದು!

ಅವರು ಮಹಿಳೆಯರಲ್ಲ!

ಕಾರ್ಮಿಕ ಸಚಿವರಿಗೆ ಮಹಿಳೆಯರ ಮೇಲೆ ಕರುಣೆ ಉಕ್ಕೇರಿದೆ. ರಾತ್ರಿಯ ವೇಳೆ ಮಹಿಳೆಯರ ಮೇಲೆ ನಡೆಯುತ್ತಿರುವ ಶೋಷಣೆ, ದೌರ್ಜನ್ಯಗಳು ಮನ ಕರಗಿಸಿವೆ.

ಏನು ಇದಕ್ಕೆ ಪರಿಹಾರ?

ರಾತ್ರಿ 8 ಗಂಟೆಯ ನಂತರ ಯಾವುದೇ ಉದ್ಯಮಗಳು ಮಹಿಳೆಯರಿಂದ ದುಡಿಸಿಕೊಳ್ಳುವಂತಿಲ್ಲ.

ರಾಜ್ಯದ ಎಲ್ಲಾ ಉದ್ಯಮಗಳಿಗೂ ಇದು ಅನ್ವಯಿಸುವುದೆ?

ಇಲ್ಲ, ಐಟಿ-ಬಿಟಿ ಕಂಪನಿಗಳಿಗೆ ಇದರಿಂದ ವಿನಾಯಿತಿ!

ಯಾಕೆ? ಅಲ್ಲಿ ದುಡಿಯುವ ಹೆಂಗಸರು ಮಹಿಳೆಯರು ಅಲ್ಲವೆಂದೆ!?

ಅಲ್ಲ, ಅವು 2002ನೇ ಇಸವಿಯಲ್ಲೇ ಮಹಿಳಾ ಕಾರ್ಮಿಕರಿಗೆ ಸೂಕ್ತ ಭದ್ರತೆ, ರಕ್ಷಣೆ, ಸಾರಿಗೆ ಹಾಗೂ ಇತರ ಸೌಕರ್ಯ ಕಲ್ಪಿಸಿಕೊಡಲು ಒಪ್ಪಿವೆಯಂತೆ! ಅದಕ್ಕೆ ಈ ವಿನಾಯಿತಿ.

ಆಯಿತು. ಬೇರೆ ಉದ್ಯಮದವರೂ ಹೀಗೇ ಮಾಡುತ್ತೇವೆಂದು ಮುಂದೆ ಬಂದರೆ....

ಥೂತ್ತೇರಿ

ಯಾಹೂ

ಎಲ್ಲರ ನಿರೀಕ್ಷೆಯಂತೆ ದೇವೇಗೌಡರಿಗೆ ವಿಚಿತ್ರವಾದ ಪ್ರಸವವೇದನೆ ಆರಂಭವಾಗಿದೆಯಂತಲ್ಲಾ, ಏನಿದರ ಮರ್ಮ ಎಂಬುದು ಬಿ.ಜೆ.ಪಿಗಳಿಗೆ ಮಾತ್ರ ಅರಿವಾಗಿ, ಅವರು ಗೌಡರ ಎಲ್ಲಾ ಬಯಕೆಯನ್ನು ಈಡೇರಿಸಲು ತಯಾರಾಗಿದ್ದರೂ ಕೂಡ ಗೌಡರು ಮಾತ್ರ ಕಣ್ಣು ತೆರೆಯದೆ ಮೂಕವೇದನೆ ಅನುಭವಿಸುತ್ತ ಅಳತೊಡಗಿದರಂತಲ್ಲಾ, ಹತ್ತಿರದಲ್ಲೇ ಇದ್ದ ದತ್ತ ಗೊಣ್ಣೆ ಕರವಸ್ತ್ರದಿಂದ ಗೌಡರ ಮುಖವರೆಸಿ "ಮಾತನಾಡಿ ಸಾರ್" ಎನ್ನಲಾಗಿ, ಕಣ್ಣೀರ ಕೋಡಿಯೊಂದಿಗೆ ಬಾಯಿಬಿಟ್ಟ ಗೌಡರು "ನಮ್ಮ ಕುಮಾರನ ಸ್ಥಿತಿ ನೋಡಲಾಗುತ್ತಿಲ್ಲ. ಹಗಲು ರಾತ್ರಿ ಕಷ್ಟಪಡುತ್ತಿದ್ದಾನೆ. ಅವನ ಈ ಸ್ಥಿತಿಗೆ ಬಿಜೆಪಿಗಳೇ ಕಾರಣ" ಎಂದು ಹಲುಬಿದರಂತಲ್ಲಾ, ಥೂತ್ತೇರಿ!

* * * * * * *

ಕೂಡಲೇ ತನ್ನ ಕೋರೆದಾಡೆಗಳನ್ನು ತೀಡಿಕೊಂಡು, ನಾಲಿಗೆಯಿಂದ ಮೊದಲಿಗಿಂತಲೂ ಹೆಚ್ಚು ತುಟಿಸವರುತ್ತ, ಎಡೂರನ ಕೈಗೂ ಸಿಗದಂತೆ ತಿರುಗುತ್ತಿದ್ದಾರಂತಲ್ಲಾ, ಇಂತಹದ್ದೊಂದು ಸೂಚನೆಯನ್ನು ಮೊದಲೇ ಗ್ರಹಿಸಿದ್ದ ಎಡೂರಪ್ಪ ಆಯನೂರು ಮಂಜುನಾಥನನ್ನು ಕರೆದು ಆಯಕಟ್ಟಿನ ಜಾಗದಲ್ಲಿ ಕೂರಿಸಿಕೊಂಡು ಆ ಈಶ್ವರಪ್ಪ ಮುಂದಿನ ಚುನಾವಣೆಗೆ ಗೆದ್ದು ಬರದಂತಹ ಬಲೆ ಹೆಣೆಯುವ ಸೂಚನೆ ಕೊಟ್ಟರಂತಲ್ಲಾ, ಈ ವಿಷಯವೂ ಈಶ್ವರಪ್ಪನಿಗೆ ಗೊತ್ತಾಗಿ "ಕಡೆಯವರೆಗೂ ಧರಣಿ ಸತ್ಯಾಗ್ರಹ, ಕಾಲುನಡಿಗೆ, ಶನಿಪೂಜೆ, ಪೇಜಾವರನ ಪಾದುಕೆಯಲ್ಲೇ ಆಯುಸ್ಸು ಮುಗಿಸಲಿದ್ದ ನಮಗೆ ಇಂತಹ ಸ್ಥಿತಿಯೊಂದು ಸಿಕ್ಕಿತಲ್ಲ ಅಷ್ಟೇ ಸಾಕು" ಎಂದು ಅಸುರನಗೆ ನಕ್ಕನಂತಲ್ಲಾ ಹಾ ಈಶ್ವರಾ, ಥೂತ್ತೇರಿ!!

ಗೌಡರ ಪ್ರಸವವೇದನೆ ಶುರುವಾಯ್ತಂತಲ್ಲಾ



"ಈ ಬಿಜೆಪಿಗಳು ಕುಮಾರನಿಗೆ ಅಷ್ಟು ತೊಂದರೆ ಕೊಡುತ್ತಿದ್ದರೆ, ಅವರ ಸಹವಾಸ ತೊರೆದು ಮತ್ತೆ ಕಾಂಗ್ರೆಸ್ಸಿಗರಿಗೇ ಉಪಮುಖ್ಯಮಂತ್ರಿ ಸ್ಥಾನ ಕೊಟ್ಟರೆ ಹೇಗೆ?" ಎಂದು ದತ್ತ ಮಂತ್ರ ಹೇಳಿದಾಗ, ಮತ್ತೂ ಅಳತೊಡಗಿದ ಗೌಡರು "ಇಲ್ಲ, ಬಿಜೆಪಿಯಲ್ಲೇ ನಾವು ಏನಾದರೂ ಮಾಡಬೇಕು. ಬಳ್ಳಾರಿ ಕಡೆಯಿಂದ ಶಿವಮೊಗ್ಗಕ್ಕೆ ಹೋಗಿ ತಗುಲಕೊಂಡಿರುವ ಬಳ್ಳಾರಿ ಜಾಲಿಯಂತಹ ಮನುಷ್ಯನೊಬ್ಬ ಇದ್ದಾನೆ. ಆತ ನಮ್ಮ ಅಪೇಕ್ಷೆ ಈಡೇರಿಸಿ ನಮ್ಮ ವೈರಿಯಾದ ಸಿದ್ಧರಾಮಯ್ಯನಿಗೂ ತಕ್ಕ ಉತ್ತರ ಕೊಡಬಲ್ಲ, ಈ ಬಗ್ಗೆ ನಿನ್ನ ಅಭಿಪ್ರಾಯವೇನು ದತ್ತ?" ಎಂದು ಗೌಡರು ಮೂಗು ವರೆಸಿಕೊಂಡರಂತಲ್ಲಾ, "ಒಳ್ಳೆ ಐಡಿಯ ಸಾರ್. ಆ ಶಿವಮೊಗ್ಗದ ಟಗರನ್ನು ಉಪಯೋಗಿಸಿಕೊಂಡು ನಾವು ಎಡೂರಪ್ಪನಿಗೂ ಗುದ್ದಿಸಬಹುದು. ಈ ಸಿದ್ಧರಾಮಯ್ಯನಿಗೂ ಗುದ್ದಿಸಬಹುದು. ಕುರುಬರನ್ನು ಹತ್ತಿರಕ್ಕೆ ಕರೆಯಬಹುದು. ನನಗಿರುವ ಒಂದೇ ಒಂದು ಅನುಮಾನವೆಂದರೆ ತೀರ ತಲೆ ಕೆಟ್ಟವನಂತಾಡುವ ಆ ಈಶ್ವರಪ್ಪ ಮುಖ್ಯಮಂತ್ರಿ ಪದವಿ ನಿಭಾಯಿಸುವುದು ಸಾಧ್ಯವೆ?" ಎಂದನಂತಲ್ಲಾ, ಥೂತ್ತೇರಿ?

* * * * * * *

ಸುಮಾರು ಹೊತ್ತು ಪುತ್ರವ್ಯಾಮೋಹದ ಭಾವ ಸಮಾಧಿಯಲ್ಲಿದ್ದ ಗೌಡರು "ಹೆದರಬೇಡ ದತ್ತ. ಯಾವ ಅನುಭವವೂ ಇಲ್ಲದ ನಮ್ಮ ಕುಮಾರನೇ ಇಂದು ಜನಮೆಚ್ಚುವ ಮುಖ್ಯಮಂತ್ರಿಯಾಗಿಲ್ಲವೆ. ಆತನ ಫೈಲುಗಳನ್ನು ನಾವೇ ನೋಡಿ ಸಹಿ ಮಾಡುತ್ತ, ಅವನ ಜವಾಬ್ದಾರಿ ನಾವೇ ನಿರ್ವಹಿಸುತ್ತಿರುವಾಗ ಸರ್ಕಾರದ ಬಹುಮುಖ್ಯ ಫೈಲುಗಳು ನಮ್ಮ ಬಳಿಯೇ ಇರಬೇಕು ಅಥವಾ ನಮ್ಮಲ್ಲಿಗೆ ಬಂದು ಹೋಗಬೇಕು. ಇಂತಹ ಸ್ಥಿತಿಯೊಂದು ನಿರ್ಮಾಣವಾಗಬೇಕಾದರೆ ಬಳ್ಳಾರಿ ಟಗರಿಗೇ ಪಟ್ಟಕಟ್ಟಬೇಕು" ಎಂದರಂತಲ್ಲಾ, ಥೂತ್ತೇರಿ!!

* * * * * * *

ದ್ಯಾವೇಗೌಡ ಇಂತಹದ್ದೊಂದು ಅಪೂರ್ವಚಿಂತನೆ ನಡೆಸುತ್ತಿರುವುದು ಈಶ್ವರಪ್ಪನಿಗೆ ಗೋಚರವಾದ

* * * * * * *

ನಾವು ಗೋಪೂಜೆಯ ಜನ, ಮುಸ್ಲಿಮರು ಗೋ ತಿನ್ನುವ ಜನ, ಈ ಎಡೂರಪ್ಪ ಕುಮಾರಸ್ವಾಮಿ ಮೂರ್ಖ ಜನ, ಹೊಸನಗರದವು ಮಂದಮತಿಗಳು, ಇತ್ಯಾದಿ ಅರ್ಥ ಬರುವ ಗೋಸಮ್ಮೇಳನ ಮಾಡಿದ ರಾಘವೇಶ್ವರನ ಘನಕಾರ್ಯದ ಫಲವಾಗಿ ಶರಾವತಿ ಹಿನ್ನೀರಿನ ಮೀನು ಸತ್ತು ಬಿದ್ದಿವೆಯಂತಲ್ಲಾ, ಗೋ ಉಳಿಸುವ ಚಳವಳಿ ಮಾಡಲು ಹೋಗಿ ಪರಿಸರವನ್ನೇ ಹಾಳು ಮಾಡಿದ ಈ ಸ್ವಾಮಿ ವಿರುದ್ಧ ಸಿಡಿದೆದ್ದಿರುವ ಪರಿಸರವಾದಿಗಳು ಕೇಸನ್ನು ಜಡಿದಿರುವುದಲ್ಲದೇ "ಈತನ ಇನ್ನಿತರ ಸಾಹಸಗಳಿಗೂ ಕಡಿವಾಣ ಹಾಕದಿದ್ದರೆ ಹೊಸನಗರವೇ ಈತನ ಜಹಗೀರಿಯಾಗಿ ಅಲ್ಲಿನ ಶೂದ್ರ ಸಮೂಹವೇ ಕಾಲ್ಕೆಗೆಯಬೇಕಾಗುತ್ತೆ" ಎಂದು ಕೂಗಾಡುತ್ತಿದೆಯಂತಲ್ಲಾ, ಇದನ್ನು ಕೇಳಿ ಸದರಿ ರಾಘವ "ಶರಾವತಿ ಹಿನ್ನೀರಿನಲ್ಲಿ ಮೀನು ಸತ್ತಿರುವುದಕ್ಕೂ ನಮಗೂ ಯಾವ ಸಂಬಂಧವೂ ಇಲ್ಲ, ಯಾಕೆಂದರೆ ನಾವು ಮೀನು ತಿನ್ನುವುದಿಲ್ಲ" ಎಂದಿದ್ದಾನಂತಲ್ಲಾ, ಥೂತ್ತೇರಿ!

* * * * * * *

ಕುಮಾರಸ್ವಾಮಿ ವಾಸ್ತವ್ಯದಿಂದ ಕಂಗಾಲಾದ ಬಿಜೆಪಿಗಳು "ನೀವೂ ವಾಸ್ತವ್ಯ ಮಾಡ್ರಿ" ಎಂದು ಎಡೂರಪ್ಪನಿಗೆ ಗಂಟುಬೀಳಲಾಗಿ, "ಕುಮಾರನನ್ನು ಕಂಡು ನಾನು ಬರ್ಲಾ" ಎಂದರಂತಲ್ಲಾ, ಆಗ ಕುಮಾರ ಏನೂ ಹೇಳದಿದ್ದರೂ ಹಾಸನದ ಹಳ್ಳಿಯೊಂದಕ್ಕೆ ಎಡೂರಪ್ಪನೂ ಹೋಗಲಾಗಿ ಆ ಊರಿನ ಜನ "ಎಡೂರನಿಗೆ ಹೆಂಡತಿಯಿಲ್ಲ, ಕುಮಾರನಿಗೆ ಹೆಂಡತಿ ಇದ್ದರೂ ಮಲಗಲು ಮನಸಿಲ್ಲ, ಅಂತೂ ನಮ್ಮ ಹಳ್ಳಿಗಳಿಗೆ ನೆಮ್ಮದಿಯಿಲ್ಲ" ಎಂದರಂತಲ್ಲಾ, ಥೂತ್ತೇರಿ!!

-ಯಾಹೂ

ದೇವು ಶಕುನಿಯೋ ಅಥವಾ ದುಶ್ಯಾಸನನೋ?

ಕಣ್ಣಾ ಮುಚ್ಚಾಲೆ

ಮಂಜುಳಾಲಿ ಉಮಾಗುರುರಾಜ, ಬಳ್ಳಾರಿ
ಮನುಷ್ಯನ ಮನಸ್ಸನ್ನು ಇಡುವ ಸದೃಢವಾದ ಲಾಕರ್ ಎಲ್ಲಿದೆ?
◆ ಅರಡಿ ಮೂರಡಿ ಗುಂಡಿಯಲ್ಲಿ.

ಎಂ. ನಿಸರ್ಗ, ದಾವಣಗೆರೆ
ಎಂ.ಪಿ.ಪ್ರಕಾಶ್‌ಗೆ ರಾಜಕೀಯ ಸಾಕಾಗಿದ್ದೇಕೆ?
◆ ಬೆತ್ತಲೆ ಸಾಮ್ರಾಜ್ಯದಲ್ಲಿ ಬಟ್ಟೆ ಹಾಕಿದವನೇ ಪಾಪಿ ಎಂದು ಅರ್ಥವಾಗಿದ್ದರಿಂದಿರಬಹುದೇ?

ಎಸ್.ಎ. ನೇಜಾರು, ಉಡುಪಿ
ಇಲ್ಲೊಬ್ಬರು 'ಅನಿಸುತ್ತಿದೆ ಯಾಕೋ ಇಂದು ಪಕ್ಕದ್ಮನೆಯವಳು ನನ್ನವಳೆಂದು' ಅಂತ ಹಾಡುತ್ತಾರಲ್ಲಾ?
◆ ಅವರು ನಿಮ್ಮ ಪಕ್ಕದ ಮನೆಯವರಲ್ಲಾ ತಾನೆ!

ಡಾ.ಛ. ಬಸವರಾಜ್, ಯಳಂದೂರು
ಬಂಜಗೆರೆ ಜಯಪ್ರಕಾಶ್ ಉದ್ಯೋಗವಿಲ್ಲದ ಬಡಗಿಯೇ?
◆ ಇಲ್ಲ. ಹೊಸ ಸಾಂಸ್ಕೃತಿಕ ಕೊಡುಗೆ ಅಂತಿದ್ದಾರೆ ಬಲ್ಲವರು.

ಬಿ.ಎಂ. ಪರಶಿವಮೂರ್ತಿ, ವಿಜಯನಗರ
ಅವನೊಲಿದರೆ ಕೊರಡು ಕೊನರುವುದಯ್ಯ, ಅವಳೊಲಿದರೆ?
◆ ಲಿಂಗಮೆಚ್ಚಿ ಅಹುದೊಹುದೆನುವುದಯ್ಯ.

ಅಬ್ದುಲ್ ರಜಾಕ್, ದೇವದುರ್ಗ
ಬೇಸಿಗೆಯಲ್ಲಿ ಹುಡ್ಗೀಯರು ಒಳಉಡುಪು ಧರಿಸಿದರೆ ಸೆಖೆ ಅಲ್ಲವೇ?
◆ ಅಂತಹದ್ದರಲ್ಲೂ ಅವರಿಗೆ ಬುರ್ಖಾ ಹಾಕಿಸುತ್ತೀರಲ್ಲಾ ಅಬ್ದುಲ್!

ಟಿ.ಯು.ಕುಮಾರ, ರಾಮದುರ್ಗ
ಶಿಲ್ಪಾಶೆಟ್ಟಿಯನ್ನು ಮಾನಸಿಕ ತಜ್ಞರಿಗೆ ತೋರಿಸಿದರೆ?
◆ ಅವರಿಗೂ ಒಂದು ಪಪ್ಪಿ ಸಿಗುತ್ತೆ.

ಎಚ್.ಸಿ. ಭಾಗ್ಯಕುಮಾರ್, ಜಯನಗರ
ದೇವೇಗೌಡರಿಗೇಕೆ ಇನ್ನೂ ಭಾರತರತ್ನ ಪ್ರಶಸ್ತಿ ಸಿಕ್ಕಿಲ್ಲ?
◆ ಕ್ಷಮಿಸಿ. ಅದನ್ನ ಕಾಗೆ ಬಂಗಾರಕ್ಕೆ ಕೊಡಲ್ಲ.

ಎಂ. ಶಿವಸ್ವಾಮಿ, ಕುರುಬರಹಳ್ಳಿ
ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ- ಇದರ ತಿರುಳೇನು?
◆ 'ನನ್ನ ಸರ್ಕಾರ' ಅವಧಿಯನ್ನು ಪೂರ್ಣಗೊಳಿಸುತ್ತೆ ಅಂತ ಕುಮಾರಸ್ವಾಮಿ ಹೇಳೋದು.

ಎಸ್.ಶಶಿಧರ, ದಾವಣಗೆರೆ
ನೀವು 'ತುಂಟಾಟ' ಕಾಲಂ ನಿಲ್ಲಿಸಿದರೂ ಚೆಡ್ಡಿಗಳ ತುಂಟಾಟ ವಿಪರೀತವಾಗಿದೆಯಲ್ಲ?
◆ ರೇಣುಕಾಚಾರ್ಯ, ಕಟಾರ, ಇತ್ಯಾದಿಗಳು ಭಾರತ ಮಾತೆಯನ್ನೂ ಬಿಡದಂತಹ ಹದಬೆಗಳು. ಏನು ಮಾಡೋದು?

ಅಕ್ಕಿ ಬಸವೇಶ, ಉಪನಾಯಕನಹಳ್ಳಿ
ಕನ್ಯೆ ಕನ್ನಡಿಯ ಮುಂದೆ ನಿಂತರೆ ಲೋಕವನ್ನೇ ಮರೀತಾಳಂತೆ?
◆ ಅವಳ ಎದುರಿಗೆ ನಿಂತ ಲೋಕವೇ ತನ್ನನ್ನು ಮರೆಯುತ್ತಲ್ಲಾ.

ಚಂದ್ರಶೇಖರ, ಶೋರಾಪೂರ
ಮನ್ಮಥನ ಬಾಣಕ್ಕೂ, ಐಟಂ ಸಾಂಗ್‌ಗೂ ಇರುವ ವ್ಯತ್ಯಾಸ?
◆ ಮನ್ಮಥನ ಬಾಣಕ್ಕೆ ಒಂದು ಕ್ಷಣ. ಐಟಂ ಸಾಂಗ್‌ಗೆ ಐದು ನಿಮಿಷ.

ಬಿ.ಚಂದ್ರೇಗೌಡ, ದೊಡ್ಡಬಾಣಸವಾಡಿ
ಅವಿವೇಕತನದ ಪರಮಾವಧಿ ಯಾವುದು?
◆ ಟಿ.ವಿ. ಜನ ಅವರಿವರ ಮದುವೆ ಬಿತ್ತರಿಸುವುದು.

ಬಹುಮಾನಿತ ಪ್ರಶ್ನೆ

ಡಿ.ಎಲ್. ಸುರೇಶ್, ಹರಪನಹಳ್ಳಿ
ದೇವು ಶಕುನಿಯೋ ಅಥವಾ ದುಶ್ಯಾಸನನೋ?
◆ ಎರಡೂ ಅಲ್ಲ. ಪದ್ಮನಾಭನಗರದ ಮಹಾ ಮಾಂತ್ರಿಕ.

ಜಾಫರ್ ಸಾಧಿಕ್, ಕಲ್ಲಡ್ಕ
ಉತ್ತರ ಪ್ರದೇಶದ 'ಭಾರತ್ ಕೀ ಪುಕಾರ್'ಗೂ ಭೈರಪ್ಪನವರ 'ಆವರಣ'ಕ್ಕೂ ಇರುವ ಸಾಮ್ಯತೆ?
◆ ಭೈರನ ಬೈರಿಗೆ ಎದುರು ಚೆಡ್ಡಿಗಳೇ ಮಂಕಾಗಿದ್ದಾರಂತೆ.

ರೇಣು ಎಸ್. ಹೊನ್ನಾಳಿ, ಕೃಷ್ಣರಾಜಸಾಗರ
ಅಂತೂ ಇಂತೂ 'ಅಭೈಷ್' ಮದುವೆ ಮುಗಿತು, ಮುಂದೇನು?
◆ ಟಿ.ವಿ. ಕ್ರಾಕ್‌ಗಳು ಹೇಳುತ್ತವೆ ಬಿಡು.

ಡಿ.ಎಲ್. ನಾಗರಾಜ್, ಹರಪನಹಳ್ಳಿ
ಕನ್ನಡ ನಾಡು, ನುಡಿ, ಜಲದ ಬಗ್ಗೆ ಸ್ಪಂದಿಸದ ಎಸ್.ಎಲ್. ಭೈರಿ ತಮ್ಮ ಆವರಣದಿಂದ ಹೊರ ಬಂದಿದ್ದು ಯಾಕೆ?
◆ ಬಿಜೆಪಿಗೆ ಪೂರ್ಣ ಅಧಿಕಾರ ಕೊಡಿಸುವ ಹುನ್ನಾರದಿಂದ.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:
ಮಹಿಳೆಯರಿಗೆ ರಾತ್ರಿ ಪಾಳಿ ನಿಷೇಧ ಗೃಹಣಿಯರಿಗೂ ಅನ್ವಯಿಸಬಾರದೇಕೆ?


ಏಪ್ರಿಲ್ 25ರ ಸಂಚಿಕೆಯ ನಮ್ಮ ಪ್ರಶ್ನೆ: ನಿವೃತ್ತಿ ಘೋಷಿಸಿರುವ ಪ್ರಕಾಶ್‌ಗೆ ಸೂಕ್ತವಾಗುವ ಪಾತ್ರ ಯಾವುದು?
ನಿಮ್ಮ ಉತ್ತರ: 'ಕೋ-ಜಾ' ಸರ್ಕಾರದ 'ಕೋಚ್' ಪಾತ್ರ.

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಕೆ. ಶ್ರೀನಿವಾಸ್, ಮಂಡ್ಯ

ಜ್ಞಾನಪೀಠದ ಮೇಲೆ ಭೈರಿ ಕಣ್ಣು

"ಹಿಂದಿದಿನವರು ಮಾಡಿದ ತಪ್ಪಿಗೆ ಇಂದಿನವರು ಜವಾಬ್ದಾರರಲ್ಲದಿದ್ದರೂ ಹಿಂದಿನವರೊಡನೆ ತಮ್ಮನ್ನು ತಾವು ಸಮೀಕರಿಸಿಕೊಂಡು ಅವರ ವಾರಸುದಾರರಂತೆ ವರ್ತಿಸಿದರೆ ಹಿಂದಿನವರ ತಪ್ಪಿನ ಜವಾಬ್ದಾರಿ ಹೊರಬೇಕಾಗುತ್ತದೆ" ಎಂದು 'ಆವರಣ' ಕಾದಂಬರಿಯ ಮುನ್ನುಡಿಯಲ್ಲಿ ಎಸ್.ಎಲ್. ಭೈರಪ್ಪನವರು ಮುಸ್ಲಿಮರ ಬಗ್ಗೆ ಸೂಚ್ಯವಾಗಿ ಹೇಳುವಾಗ ಅದು ತಮ್ಮ ಹಿಂದೂ ಧರ್ಮಕ್ಕೆ "ಹೆಚ್ಚು" ಅನ್ವಯ ಎಂಬುದನ್ನು ಮರೆತಿದ್ದಾರೆ (ಲಂ. 25.4.07). ನಮ್ಮ ಹಿರಿಯರು ಮಾಡಿಟ್ಟು ಹೋಗಿರುವ ಅವೈಜ್ಞಾನಿಕ-ಅಮಾನುಷ ಜಾತಿಪದ್ಧತಿಯ ಗೋಡೆಗೆ ಇಂದು ಸಹ ನಾವು ಜೋತು ಬಿದ್ದಿರುವುದು ಮಾತ್ರವಲ್ಲ 'ಉಪಜಾತಿ ಆವರಣ'ದಿಂದಲೂ ಹೊರಬರಲಾರೆವು.

ನಮ್ಮ ಹೆಸರಿನ ಹಿಂದೆ ಜಾತಿಸೂಚಕ ಅಡ್ಡಹೆಸರು, ಹಣೆಯಲ್ಲಿ ಉಪಜಾತಿ ಸೂಚಕನಾಮಗಳು, ಕೊರಳಹಾರಗಳು ಇವೆಲ್ಲಾ ಹಿಂದಿನವರ ತಪ್ಪುಗಳನ್ನು ಇವತ್ತಿಗೂ ನಿತ್ಯ ಜೀವನದಲ್ಲಿ ನಾವು ರಿಪೀಟ್ ಮಾಡುತ್ತಿರುವುದಲ್ಲವೇ? 4000 ವರ್ಷಗಳಿಂದ ಹಿಂದೂ ಸಮಾಜದಿಂದ ಹೊರಗಿಡಲ್ಪಟ್ಟವರು ಈಗ ಹೊರಗಿನಿಂದ ಹೊರಗೆ ನೆರೆಯಾತನಲ್ಲಿಗೆ ಹೋಗಿ ಉದ್ಧಾರವಾಗುತ್ತೇವೆ ಎನ್ನುವಾಗ, "ಇಲ್ಲ, ನೀನಿಲ್ಲೇ ಕೊಳೆಯುತ್ತಿರು.



ನಿನ್ನ ಬಾಳನ್ನು ನಾವು ನರಕ ಮಾಡಿದರೂ ಸುಮ್ಮನೆ ಸಹಿಸುತ್ತಿರು. ನಮ್ಮ ಉಳಿಗ ಮಾಡುತ್ತಿರು ತಲತಲಾಂತರ" ಎಂದು ಬಲಾತ್ಕಾರದಿಂದ ದಲಿತರನ್ನು ಹಿಂದೂ ಧರ್ಮದ ತುಕ್ಕು ಹಿಡಿದ ಸಂಕೋಲೆಯೊಳಗೆ ಬಿಗಿದಿಡುತ್ತಿರುವುದು ಹಿಂದಿನವರ ತಪ್ಪನ್ನು ನಾವು perpetuate ಮಾಡುತ್ತಿರುವುದಕ್ಕೆ ಸಾಕ್ಷಿ ಅಲ್ಲವೇ?

ಮೊದಲು ಅಭ್ಯರ್ಥಿಯ ಜಾತಿ ಕೇಳಿ ನಂತರ ಆತನ ಪ್ರತಿಭೆ ಅಳೆಯುವ 'ಇಕ್ಕಿ ನಾಣಿಯು' ಹಿಂದಿನವರ ತಪ್ಪಿನೊಡನೆ ತನ್ನನ್ನು ಸಮೀಕರಿಸಿಕೊಂಡರೂ ಭೈರಪ್ಪ ನಾಣಿಯ ವಕಾಲತ್ತು ವಹಿಸುತ್ತಾರಲ್ಲ ಇದು ಮೇಲ್ಜಾತಿಯವರು ಒಬ್ಬರ ಬೆನ್ನನ್ನು ಇನ್ನೊಬ್ಬರು ಕೆರೆಯುವ, ಇತಿಹಾಸದ ತಪ್ಪನ್ನು ಪುನಾರಾವರ್ತಿಸಿದಂತಲ್ಲವೇ? ಶತಮಾನಗಳಿಂದ ಸಮಾಜದ ಆಸ್ತಿ, ವಿದ್ಯೆ, ಜ್ಞಾನಗಳನ್ನು 'ಬಹುಜನರಿಂದ' ದೂರವಿಟ್ಟು ಈಗ ಮೀಸಲಾತಿ ವಿರುದ್ಧ ಚೀರಾಡುವುದು, ಮನುವಿನಿಂದಾದ ಘೋರ ಅಪರಾಧದ ಸಮರ್ಥನೆ ತಾನೇ? ಕಳೆದ ತಿಂಗಳೇ ಒರಿಸ್ಸಾದಲ್ಲಿ ದಲಿತರ ಪರವಾಗಿ ಕೋರ್ಟ್ ಆರ್ಡರ್ ಇದ್ದರೂ ಅವರನ್ನು ಜಗನ್ನಾಥ್ ದೇವಸ್ಥಾನದೊಳಗೆ ಬಿಡದಿರುವುದು ಹಾಗೂ ಆಂಧ್ರ ಮತ್ತು ಬಿಹಾರ್‌ಗಳಲ್ಲಿ ಕ್ಷುಲ್ಲಕ ಕಾರಣಗಳಿಂದಾಗಿ ಇಡೀ ಹರಿಜನ ಕೇರಿಯನ್ನೇ ಮೇಲ್ಜಾತಿಯವರು ಸುಟ್ಟು ಹಾಕಿದ್ದು ಇವೆಲ್ಲಾ ಇತಿಹಾಸ ಕಲಿಸಿದ ತಪ್ಪು ಪಾಠಗಳ ಪರಿಣಾಮವಲ್ಲವೇ?

"ಹಿಂದೂ ಧರ್ಮವೇನಾದರೂ ಯುರೋಪ್-ಅಮೆರಿಕದಲ್ಲಿ ಹರಡುತ್ತಿದ್ದರೆ, ಜಗತ್ತು ಇನ್ನೂ ಎತ್ತಿನಗಾಡಿಯ ಯುಗದಲ್ಲೇ ಇರುತ್ತಿತ್ತು. ಕಾರಣ Law of Averages ಪ್ರಕಾರ ನ್ಯೂಟನ್, ಐನ್‌ಸ್ಟನ್‌ರಂತಹ ಮಹಾಮೇಧಾವಿ ವಿಜ್ಞಾನಿಗಳಲ್ಲಿ 95% ವಿಜ್ಞಾನಿಗಳು ಕೆಳಜಾತಿಗಳಲ್ಲಿಯೇ ಹುಟ್ಟುವ ಸಾಧ್ಯತೆಯಿದ್ದು ಒಂದೋ ಅವರು ಅವಿದ್ಯಾವಂತರಾಗಿ ವ್ಯರ್ಥವಾಗುತ್ತಿದ್ದರು ಅಥವಾ ಅವರ ಆವಿಷ್ಕಾರ-ಸಂಶೋಧನೆಗಳು ಬೆಳಕಿಗೆ ಬರಲು ಹಿಂದೂ ಸಮಾಜದ ಠೇಕೇದಾರರು ಬಿಡದೇ ಕೊಳೆತು ಹೋಗುತ್ತಿತ್ತು" ಎಂಬ ಅರ್ಥದ ಲೇಖನವೊಂದನ್ನು ಕಳೆದ ವರ್ಷ ನಾನು ಸ್ಥಳೀಯ ಪತ್ರಿಕೆಯೊಂದರಲ್ಲಿ ಬರೆದಿದ್ದಾಗ, ಎದುರಿಗೆ ಬರಲು ಧೈರ್ಯವಿಲ್ಲದೇ ಹೇಡಿಗಳಂತೆ ಫೋನ್‌ನಲ್ಲಿ ನನ್ನೊಡನೆ ಅನುಚಿತವಾಗಿ ವರ್ತಿಸಿದವರೂ ಇತಿಹಾಸದ ತಪ್ಪಿನೊಡನೇ ತಮ್ಮನ್ನು

ಹೊಗಳಿಕೆ ತೆಗಳಿಕೆ

ಸಮೀಕರಿಸಿಕೊಂಡವರ ಔಲಾದ್‌ಗಳು ತಾನೇ!

ಎದುರಾಳಿಯನ್ನು ಸಾಧ್ಯವಾದಷ್ಟು ತುಳಿಯಲು ಪ್ರಯತ್ನಿಸಿ, ಕೊನೆಗೆ ಎದುರಾಳಿ ತನಗಿಂತ ಹೆಚ್ಚು ಶಕ್ತಿಯುತನೆಂದು ಅರಿವಾದೊಡನೆ "If you can't beat them you join them" ಎಂಬ ಉಕ್ತಿ ಅನುಸರಿಸಿ ಬುದ್ಧ, ಬಸವಣ್ಣ, ಕನಕ, ಅಂಬೇಡ್ಕರ್ ಇವರುಗಳನ್ನೆಲ್ಲಾ Co-opt ಮಾಡಲು ಕಾರಣ ಮೇಲ್ಜಾತಿಯವರು ಇತಿಹಾಸದಿಂದ ಕಲಿತ ಚಾಣಾಕ್ಷ ಪಾಠದಿಂದಾಗಿ-ಅಂದರೆ ವಾಲ್ಮೀಕಿ, ವ್ಯಾಸ, ವಸಿಷ್ಠ, ವಿಶ್ವಾಮಿತ್ರ, ಪರಾಶರ ಮುಂತಾದ ಕೆಳಜಾತಿಯವರ ಪ್ರಚಂಡ ಪಾಂಡಿತ್ಯದೆದುರು ಏಗಲಾರದೇ ಕೊನೆಯಲ್ಲಿ ಅವರ ಹೆಸರಲ್ಲಿ ಉಚ್ಚ ಬ್ರಾಹ್ಮಣರು ತಮ್ಮ ಗೋತ್ರ ಸ್ಥಾಪಿಸಿದಂತೆ, ಚಾರ್ವಾಕ, ಸತ್ಯಕಾಮ, ಜಾಬಾಲಿ, ಗೋಶಾಲರಂತಹ ಪಕ್ಕಾ ನಾಸ್ತಿಕರನ್ನು ಆಸ್ತಿಕರೆಂದು ಬಿಂಬಿಸಲು ಅವರನ್ನು ಸನಾತನ ಋಷಿಗಳ ಸ್ಥಾನಕ್ಕೇರಿಸಿದಂತೆ, ದೇವದಾಸಿಗಳ ಮನೆಯಲ್ಲಿ ಹುಟ್ಟಿದ ಶಾಸ್ತ್ರೀಯ ಸಂಗೀತ ಹಾಗೂ ನಾಟ್ಯಕಲೆಗಳಿಗೆ ರಾಜಾಶ್ರಯ ಸಿಕ್ಕಿದೊಡನೇ ಮೇಲ್ಜಾತಿಗಳು ಈ ಸಂಗೀತ-ನೃತ್ಯಗಳನ್ನು ಕೈವಶ ಮಾಡಿಕೊಂಡು ನಂತರ ಅವುಗಳ ಪ್ರವರ್ತಕರು ತಮ್ಮವರೇ ಎಂದು ಬಿಂಬಿಸಿಕೊಂಡಂತೆ.

ಏನೇ ಆಗಲಿ, ಚೆಡ್ಡಿ ಪಕ್ಷ ಕೇಂದ್ರದಲ್ಲಿ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ಮುಂದಿನ ಜ್ಞಾನಪೀಠದ ಮೇಲೆ ತನ್ನದೂ ಒಂದು ಕರವಸ್ತ್ರ ಇರಲಿ ಎಂಬ ಭೈರಪ್ಪನವರ ಒಳ ಉದ್ದೇಶದ ಹೂರಣವನ್ನು ಅನಾವರಣಗೊಳಿಸಿದ ಈ 'ಆವರಣ' ಕಾದಂಬರಿ.

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು



ಕಳೆದ ಸಂಚಿಕೆಯಲ್ಲಿ ಪ್ರಕಟಗೊಂಡ ಅಜ್ಜಂಪುರದ ಅವಿವೇಕಿ ಪ್ರಿನ್ಸಿಪಾಲ್ ವರದಿ ಅರ್ಥಪೂರ್ಣ ಹಾಗೂ ನೈಜ ಕೂಡಾ. ಈತ ಎಂತಹ ಅವಿವೇಕಿ ಎಂದರೆ ಪತ್ರಿಕೆಯಲ್ಲಿ ಸುದ್ದಿ ಪ್ರಕಟಗೊಂಡ ಮೇಲಂತೂ ಹಠಕ್ಕೆ ಬಿದ್ದವನಂತೆ ಕಾಲೇಜಿಗೆ ಬರುವುದೇ ಅಪರೂಪವಾಗಿದೆ. ಅಕಸ್ಮಾತ್ ಬಂದರೂ ಸಹಿ ಮಾಡಿ ಒಂದೇ ಉಸಿರಿಗೆ ಊರಿಗೆ ಹೋಗಲು ಬಸ್‌ಸ್ಟಾಂಡಿಗೆ ಬರುತ್ತಾನೆ.

ನೀವೇ ಹೇಳಿದಂತೆ ಅಜ್ಜಂಪುರದ ಜನತೆ ಈತನಿಗೆ ಬುದ್ಧಿ ಕಲಿಸಿ, ತಕ್ಷಣವೇ ಓಡಿಸಬೇಕು. ಜೋಭದ್ರಗೇಡಿ ಶಾಸಕ ಟಿ.ಎಚ್. ಶಿವಶಂಕರಪ್ಪನೇ ಈತನ ಮೇಲೆ ಕ್ರಮ ಕೈಗೊಳ್ಳಿ ಎಂದರೆ ಅವರು ಅವರದೇ ಆದ ಹೊಯ್ದಾಟದಲ್ಲಿದ್ದಾರೆ. ಶಾಸಕ ಮತ್ತು ಪ್ರಿನ್ಸಿಪಾಲ್ ಒಂದೇ ನಾಣ್ಯದ ಎರಡು ಮುಖಗಳಂತಿದ್ದಾರೆ. ತಕ್ಷಣ ಕಾಲೇಜು ಶಿಕ್ಷಣ ಇಲಾಖೆ ಈ ಕಾಲೇಜಿನ ಆರೋಗ್ಯವನ್ನು ಕಾಪಾಡಬೇಕಿದೆ.

ಹಾಗೆಯೇ ಅಜ್ಜಂಪುರದ ಅಮೃತಮಹಲ್ ತಳಿಯನ್ನೂ ಉಳಿಸಿ-ಬೆಳೆಸಬೇಕಾದದ್ದು ಎಲ್ಲರ ಕರ್ತವ್ಯವಾಗಿದೆ. ಅರ್ಥವಿಲ್ಲದ ಗೋಸಮ್ಮೇಳನ ನಡೆಸಿ, ಕೋಟಿ ರೂಪಾಯಿ ಖರ್ಚು ಮಾಡುವ ಕೋ-ಜಾ ಸರ್ಕಾರ, ಇಲ್ಲಿಗೆ 1 ಕೋಟಿ ನೀಡಿ ಅಮೃತಮಹಲ್ ತಳಿಯನ್ನು ಉಳಿಸಬಹುದಲ್ಲದೇ ಇದನ್ನು ಪ್ರವಾಸಿ ಸ್ಥಳವನ್ನಾಗಿ ಮಾರ್ಪಡಿಸಬಹುದು.


ಈಗ ಇರುವ ರಾಸುಗಳು ಕೇವಲ 261. 2006-07 ರಲ್ಲಿ 109 ಗಂಡು ಕರುಗಳ ಮಾರಾಟದಿಂದ ಸರ್ಕಾರಕ್ಕೆ 25 ಲಕ್ಷ ರೂಪಾಯಿ ಸಂದಾಯವಾಗಿದೆ. ಅದೂ ಇಲ್ಲಿನ ಕೃಷಿ ಅಧಿಕಾರಿ ಹುದ್ದೆ ಖಾಲಿ ಇರುವಾಗ. "ಸದ್ಯಕ್ಕೆ ಆರು ಡಿ ದರ್ಜೆ ನೌಕರರನ್ನು ಸರ್ಕಾರ ನಮಗೆ ಕೊಟ್ಟರೆ ವರ್ಷಕ್ಕೆ 1 ಕೋಟಿ ರೂಪಾಯಿ ಅನ್ನು ದುಡಿದು ಸರ್ಕಾರಕ್ಕೆ ಕೊಡುತ್ತೇವೆ" ಎಂದು ಉಪನಿರ್ದೇಶಕ ಡಾ. ಟಿ.ವಿ. ಕಾಂತರಾಜು ಮತ್ತು ಸಹಾಯಕ ನಿರ್ದೇಶಕ ಡಾ. ಎಚ್.ಎಸ್. ಭಾಷಾ ಹೇಳುತ್ತಾರೆ. ಈಗಲಾದರೂ ಸರ್ಕಾರ ಈ ಕಡೆ ಗಮನಹರಿಸುತ್ತದೆ ಎಂದು ಆಶಿಸಬಹುದೇ?

-ಶೂದ್ರ ಸಂತೋಷ್, ಅಜ್ಜಂಪುರ

ಆಗಿನ ಕಾಲದಲ್ಲಿ ಮಾದಿಗರು ಮಂತ್ರಿಯಂತಹ ಉನ್ನತ ಸ್ಥಾನವನ್ನು ಅಲಂಕರಿಸುತ್ತಿರಲಿಲ್ಲ. ಆದ್ದರಿಂದ ಬಸವಣ್ಣ ಬ್ರಾಹ್ಮಣನೇ. ಅಂದರೆ, ಹುಟ್ಟಿನಿಂದ ಮಾದಿಗನಾದ ಬಸವಣ್ಣನನ್ನು ಬ್ರಾಹ್ಮಣರು ಬೆಳೆಸಿದ್ದರೆ, ಮಾದಿಗ ಬಸವಣ್ಣ ಮಂತ್ರಿಯಾಗಬಹುದಿತ್ತು, ಬಸವಣ್ಣ ಹುಟ್ಟಿನಿಂದ ಮಾದಿಗನಾಗಿದ್ದರೆ ಈ ವಿಚಾರ ಮುಂಚೆಯೇ ಬಯಲಾಗುತ್ತಿತ್ತು.

-ಡಾ. ಗೋಪಿನಾಥ್, ಧಾರವಾಡ

ಅಪ್ಪಾಜಿಯ ಜೀವನೋತ್ಸಾಹವೇ ಕುಗ್ಗಿಹೋಗಿತ್ತು...



> ಕಾಡಿನಿಂದ ಬಂದ ನಂತರ ಅವರಿಗೆ ಜೀವನೋತ್ಸಾಹವೇ ಕುಗ್ಗಿಹೋಯಿತು. ಈ ಸಮಾಜವೆಂದರೆ ಇಷ್ಟೇನಾ? ಈ ಸರ್ಕಾರ ಎಂದರೆ ಇಷ್ಟೇನಾ? ಪೊಲೀಸರೆಂದರೆ ಇವರೇನಾ? ಇತ್ಯಾದಿ.. ಇತ್ಯಾದಿ ವಿಷಯಗಳ ಬಗ್ಗೆ ಅವರಿಗೆ ಬೇಸರ ಬಂದುಬಿಟ್ಟಿತ್ತು. ಆದರೆ ಅವರು ಯಾರನ್ನೂ ವೈಯಕ್ತಿಕವಾಗಿ ನಿಂದಿಸಲಿಲ್ಲ. ಬದಲಾಗಿ ಒಂದು ಆಧುನಿಕ ಸಮಾಜದಲ್ಲಿ ಒಬ್ಬ ವ್ಯಕ್ತಿಯನ್ನು ಅಪಹರಿಸಿ ಲಕ್ಷಾಂತರ ಜನರನ್ನು ತೊಂದರೆಗೆ ಸಿಲುಕಿಸಲು ಹೇಗೆ ಸಾಧ್ಯ? ಎಂದು ಆಶ್ಚರ್ಯ ವ್ಯಕ್ತಪಡಿಸುತ್ತಿದ್ದರು.



ಅಂದು ಕಾಡಿನಲ್ಲಿ ಮುಂಜಾನೆಯ ಹೊತ್ತು, ನಾವೆಲ್ಲಾ ಅಪ್ಪಾಜಿಯನ್ನು ಎದುರುಗೊಂಡ ಆ ರೋಮಾಂಚನ ಕ್ಷಣವನ್ನು ನೆನೆಸಿಕೊಂಡಾಗ ಈಗಲೂ ನನ್ನ ರೋಮಗಳು ನೆಟ್ಟಗಾಗುತ್ತವೆ. ನಾವೆಲ್ಲರೂ ಅಪ್ಪಾಜಿಯನ್ನು ಪ್ರೀತಿಯಿಂದ ಆಲಂಗಿಸಿದೆವು, ಮುತ್ತಿನ ಸುರಿಮಳೆಗೈದೆವು, ಇದೆಲ್ಲದರ ನಡುವೆ ಎಲ್ಲರೂ ಅಳುತ್ತಲೇ ಇದ್ದೆವು. ಆ ಸಂದರ್ಭದಲ್ಲಿ ಅಪ್ಪಾಜಿಯನ್ನು ಮಾತನಾಡಿಸಲೂ ನಮಗೆ ಸಾಧ್ಯವಾಗಲಿಲ್ಲ, ಅವರು ಮಾತ್ರ ನಮ್ಮನ್ನೆಲ್ಲಾ ವಿಚಿತ್ರವಾದ ರೀತಿಯಲ್ಲಿ ನೋಡುತ್ತಿದ್ದರು. ಆಗ ಯಾವುದೋ ವಾಹನ ಹೋಗುತ್ತಿದ್ದ, ಹಾರ್ನ್ ಮಾಡಿದ ಶಬ್ದ ಕೇಳಿ ಅಪ್ಪಾಜಿ ಸ್ವಲ್ಪ ಬೆಚ್ಚಿ ಬಿದ್ದರು. ಇದನ್ನು ಗಮನಿಸಿದ ನನಗೆ ಸ್ವಲ್ಪ ಆತಂಕವಾಯಿತು. ಕಾಡಿನ ನಿಶ್ಯಬ್ಧ ವಾತಾವರಣದಲ್ಲಿ ನೂರ ಎಂಟು ದಿನಗಳ ಕಾಲ ಕಳೆದ ಅಪ್ಪಾಜಿಗೆ ನಾಡಿಗೆ ಬಂದಾಕ್ಷಣ ಹೀಗೆ ವಾಹನಗಳ ಸದ್ದು ಕೇಳಿದರೂ ಗಾಬರಿಗೊಳ್ಳುವ ಸ್ಥಿತಿ ನಿರ್ಮಾಣವಾದ ಬಗ್ಗೆ ನನ್ನ ಹೃದಯ ಕಂಬನಿ ಮಿಡಿಯಿತು. ಆದರೆ ಅದನ್ನೆಲ್ಲಾ ಚರ್ಚಿಸುವ, ಮಾತನಾಡುವ ಸಮಯ ಅದಾಗಿರಲಿಲ್ಲ, ನಾನು ಸಾಧಾರಣವಾಗಿ ಯಾವುದೇ ಸಂದರ್ಭದಲ್ಲಿ, ಅದು ಎಷ್ಟೇ ಕ್ಲಿಷ್ಟಕರವಾದ ಪರಿಸ್ಥಿತಿಯಿರಲಿ, ಮಾತನಾಡುವುದಕ್ಕಿಂತ ಅಲ್ಲಿನ ಸಂದರ್ಭವನ್ನು ಅರ್ಥಮಾಡಿಕೊಳ್ಳುವುದಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡುತ್ತೇನೆ.

ಹೀಗೆ... ಅಂದು ಅಪ್ಪಾಜಿಗೆ ಮುತ್ತಿನ ಸುರಿಮಳೆಗೈದ ನಂತರ ಅವರನ್ನು ಆದಿಯಿಂದ ಮುದಿಯುತನಕ ಒಂದೇ ಸಮನೆ ತದೇಕಚಿತ್ತದಿಂದ ಗಮನಿಸಿದೆ. ನನ್ನ ಅಪ್ಪಾಜಿಗೆ ಏನಾಗಿದೆ? ಅವರು ದೈಹಿಕವಾಗಿ ದುರ್ಬಲಗೊಂಡಿದ್ದಾರಾ? ಎಂಬುದೇ ಆ ಕ್ಷಣದವರೆಗೆ ನನ್ನ ಕಾಳಜಿಯಾಗಿತ್ತು. ಬಹುಶಃ ನನ್ನ ಜೀವನದಲ್ಲಿ ಅಷ್ಟೊಂದು ದಿನಗಳ ಕಾಲ ಅಪ್ಪಾಜಿಯನ್ನು ಬಿಟ್ಟು ಬದುಕಿದ್ದು ಅದೇ ಮೊದಲ ಬಾರಿಗೆ. ನಾವಿಬ್ಬರು ಶೂಟಿಂಗ್‌ಗಳಲ್ಲಿ ಬ್ಯುಸಿಯಾಗಿದ್ದರೂ ಸಹ ಕನಿಷ್ಠ ವಾರಕ್ಕೆ ಮೂರ್‍ನಾಲ್ಕು ಬಾರಿಯಾದರೂ ಭೇಟಿಯಾಗುತ್ತಿದ್ದೆವು. ಅದಕ್ಕಿಂತ ಮುಖ್ಯವಾಗಿ ಯಾವುದೇ ಮಗನಿಗೆ ತನ್ನ ತಂದೆ ನೂರ ಎಂಟು ದಿನಗಳ ಕಾಲ ಕಾಡಿನಲ್ಲಿ ವನವಾಸ ಅನುಭವಿಸಿದ ಯಾತನೆಯ ದಿನಗಳು ಬಂದಿರಲಿಕ್ಕಿಲ್ಲ. ಯಾರಿಗೂ ಅಂತಹ ಅನುಭವ ದೊರಕುವುದೂ ಬೇಡ.

ಅದೇನೇ ಇರಲಿ, ಅವತ್ತು ಅಪ್ಪಾಜಿ ನನ್ನನ್ನು ತಬ್ಬಿಕೊಂಡ ತಕ್ಷಣ ಏನು ಹೇಳಿದರು ಗೊತ್ತೆ? "ನೀವೆಲ್ಲಾ ಟಿಫನ್ ಮಾಡಿದ್ದೀರಾ ಇಲ್ವಾ? ಬನ್ನಿ... ಬನ್ನಿ.... ಟಿಫನ್ ಮಾಡೋಣ" ಎಂದು ನನ್ನನ್ನು ಕರೆದುಕೊಂಡು ಹೋದರು. ಎಂತಹ ಮಹಾನ್ ವ್ಯಕ್ತಿ ನೋಡಿ ಅವರು. ಅಂತಹ ಸಂದರ್ಭದಲ್ಲೂ ಅವರಿಗೆ ನಮ್ಮ ಬಗ್ಗೆ ಕಾಳಜಿ. ಮನೆಗೆ ಬಂದ ಅತಿಥಿಗಳನ್ನು ಸತ್ಕರಿಸುವ ರೀತಿಯಲ್ಲಿ ನಮ್ಮ ಕುಶಲೋಪರಿಯನ್ನು ವಿಚಾರಿಸಿದರು.

ಟಿಫನ್ ಮಾಡಿ ಮುಗಿಸಿದ ನಂತರ ನನ್ನನ್ನು ಪಕ್ಕಕ್ಕೆ ಕರೆದು ಮತ್ತೊಮ್ಮೆ ಆಲಂಗಿಸಿದರು. ಅವರು ನನ್ನೊಬ್ಬನನ್ನೇ ಕರೆದು ಆಲಂಗಿಸಿದ ಬಗ್ಗೆ ನನಗೆ ಹೆಮ್ಮೆಯಾಯಿತು. ಹಾಗೆ ತಬ್ಬಿಕೊಂಡ ನಂತರ ನನ್ನ ಮುಖವನ್ನು ನೋಡುತ್ತಾ "ಕಂದಾ.... ನೀನು ಈ ಥರ ಗಡ್ಡ ಬಿಟ್ಟುಕೊಂಡಿರುವುದನ್ನು ನನ್ನಿಂದ ನೋಡಲು ಸಾಧ್ಯವಿಲ್ಲ, ನನಗೆ ನಿನ್ನನ್ನು ನೋಡಿದರೆ ಒಂಥರಾ ಅನ್ನಿಸುತ್ತಿದೆ. ಆದ್ದರಿಂದ ದಯವಿಟ್ಟು ಈಗಲೇ ಇಲ್ಲೇ ಎಲ್ಲಾದರೂ ಹಳ್ಳಿಗೆ ಹೋಗಿ ಶೇವಿಂಗ್ ಮಾಡಿಸಿಕೊಂಡು ಬಂದ್ಬಿಡು" ಎಂದರು. ಅಪ್ಪಾಜಿ ಅಷ್ಟು ಹೇಳಿದ ನಂತರ ನಾನು ಒಂದು ಕ್ಷಣವನ್ನೂ ವ್ಯರ್ಥ ಮಾಡಲಿಲ್ಲ, ಹತ್ತಿರದಲ್ಲೇ ಇದ್ದ ಹಳ್ಳಿಗೆ ಯಾರೋ ನನ್ನನ್ನು ಕರೆದುಕೊಂಡು ಹೋದರು. ಆ ತರಹದ ಶೇವಿಂಗ್ ಶಾಪನ್ನು ನಾನೆಂದೂ ನೋಡೇ ಇರಲಿಲ್ಲ, ಹಾಗೆಯೇ ನನ್ನಂತಹ ಗಿರಾಕಿಯನ್ನೂ ಆ ಅಂಗಡಿಯ ಮಾಲೀಕ ನೋಡಿರಲಿಕ್ಕಿಲ್ಲ, ಶೇವಿಂಗ್ ಮುಗಿಸಿಕೊಂಡು ನೇರವಾಗಿ ಅಪ್ಪಾಜಿ ಮುಂದೆ ಹಾಜರಾದೆ.

ಅಲ್ಲಿಂದ ಕೆಲವರು ಹೆಲಿಕಾಪ್ಟರಿನಲ್ಲಿ, ಹಲವರು ಕಾರ್‌ಗಳಲ್ಲಿ ಅತ್ಯಂತ ಸಂತೋಷದಿಂದ, ಸಂಭ್ರಮದಿಂದ ಬೆಂಗಳೂರಿಗೆ ಹೊರಟೆವು. ಆದರೆ ಆಗ ಒಂದು ಗೊಂದಲ ಸೃಷ್ಟಿಯಾಯಿತು. ಹೆಲಿಕಾಪ್ಟರ್ ಎಚ್.ಎ.ಎಲ್. ವಿಮಾನ ನಿಲ್ದಾಣದಲ್ಲಿ ಇಳಿಯುವುದೋ ಅಥವಾ ಜಕ್ಕೂರಿನಲ್ಲೋ ಎಂದು. ಆದರೆ ಚಿತ್ರೋದ್ಯಮದ ಜನರೆಲ್ಲಾ ಜಕ್ಕೂರಿನಲ್ಲೇ ಕಾದಿದ್ದರಿಂದ ನಾವೂ ಅಲ್ಲಿಗೇ ಹೋಗಬೇಕೆಂದು ಮುಖ್ಯಮಂತ್ರಿ ಎಸ್ಸೆಂ ಕೃಷ್ಣರ ಬಳಿ ಹಠ ಹಿಡಿದೆ. ಕೊನೆಗೆ ಅಪ್ಪಾಜಿಯಿದ್ದ ಹೆಲಿಕಾಪ್ಟರ್ ಜಕ್ಕೂರಿನ ವಿಮಾನ ನಿಲ್ದಾಣದಲ್ಲಿ ಇಳಿಯಿತು. ಅವರನ್ನು ಕಂಡಿದ್ದೇ ತಡ, ಪೊಲೀಸ್ ಬಂದೋಬಸ್ತನ್ನೂ ಮುರಿದ ಜನಸಾಗರ ಅಪ್ಪಾಜಿ ಕಡೆಗೆ ನುಗ್ಗಿಬಂತು. ಅದನ್ನೆಲ್ಲಾ ನಾನು ಈ ಸಂದರ್ಭದಲ್ಲಿ ಏನಂತ ಹೇಳಲಿ? ಎಷ್ಟೂಂತ ವರ್ಣಿಸಲಿ?

ಅನಂತರ ವಿಧಾನಸೌಧದ ಬ್ಯಾಂಕ್ವೆಂಟ್ ಹಾಲ್‌ನಲ್ಲಿ ಮೊದಲ ಬಾರಿಗೆ ಅಪ್ಪಾಜಿ ಪತ್ರಕರ್ತರೊಂದಿಗೆ ಮಾತನಾಡಿದರು. ಅಲ್ಲೂ ಕೂಡ ಪತ್ರಿಕೆಯವರು ಯಾವುದೇ ರೀತಿಯ ಅಹಿತಕರ ಪ್ರಶ್ನೆಯನ್ನು ಕೇಳದೆ ಅಪ್ಪಾಜಿ ಮೇಲೆ ಅಭಿಮಾನವನ್ನು ಪರೋಕ್ಷವಾಗಿ ಪ್ರದರ್ಶಿಸಿದರು.

ಅಪ್ಪಾಜಿ ವಾಪಾಸು ಬಂದ ಸಂತೋಷದಲ್ಲಿ ಕುಟುಂಬದ ಎಲ್ಲ ಸದಸ್ಯರೂ ಮನೆಯಲ್ಲಿ ಜಮಾಯಿಸಿದ್ದರು. ನನಗೋ ಅಪ್ಪಾಜಿಯನ್ನು ಪ್ರತ್ಯೇಕವಾಗಿ ಕೂರಿಸಿಕೊಂಡು ಕಾಡಿನಲ್ಲಿ ಏನೇನಾಯಿತು? ಎಂದು ಕೇಳುವ ಉತ್ಸಾಹ ಮತ್ತು ಕುತೂಹಲ. ಆದರೆ ಆ ಪ್ರಶ್ನೆಯನ್ನು ಕೇಳಲು ನನಗೆ ಮುಂದಿನ ಹತ್ತು ದಿನಗಳ ಕಾಲ ಸಾಧ್ಯವಾಗಲೇ ಇಲ್ಲ, ಯಾಕೆಂದರೆ ನಾನು ಅಪ್ಪಾಜಿಯನ್ನು ಭೇಟಿಯಾಗಬೇಕೆಂದು ಹೋದಾಗಲೆಲ್ಲ ಯಾರಾದರೂ ವಿಐಪಿ ಅವರ ಬಳಿ ಇರುತ್ತಿದ್ದರು. ಅಥವಾ ಅವರು ವಿಶ್ರಾಂತಿ ಪಡೆಯುತ್ತಿದ್ದರು.

ಒಮ್ಮೆ ಅಪ್ಪಾಜಿ ಹೀಗೆ ವಿಶ್ರಾಂತಿ ಪಡೆಯುತ್ತಿದ್ದಾಗ ಮೇಲುಗಡೆ ಫ್ಯಾನು ತಿರುಗುವ ಶಬ್ದವನ್ನು ಕೇಳಿ ಹೆದರಿದ್ದನ್ನು ರಾಘು ನನ್ನ ಗಮನಕ್ಕೆ ತಂದಿದ್ದ, ಇದನ್ನು ಕೇಳಿ ನಾನು ತಬ್ಬಿಬ್ಬಾಗಿ ಹೋಗಿದ್ದೆ. ಕಾಡಿನ ಭಯದ ನೆರಳಿನಿಂದ ನಾಡಿನ ಈ ಹೊಸ ವಾತಾವರಣಕ್ಕೆ ಹೊಂದಿಕೊಳ್ಳುವ ಈ ಸಂದರ್ಭದಲ್ಲಿ ಇದೆಲ್ಲಾ ಸಹಜ ಎಂದು ಆ ನಂತರ ವೈದ್ಯರೊಬ್ಬರು ಹೇಳಿದರು.

ಆಗ ಆ ವೈದ್ಯರು ನನಗೊಂದು ಕಿವಿ ಮಾತನ್ನೂ ಹೇಳಿದ್ದರು. "ನೋಡಿ ಶಿವು, ಸಾಧ್ಯವಾದಷ್ಟು ನೀವು ಅವರಿಗೆ ಸಂತೋಷದ, ಸಂಭ್ರಮದ ವಾತಾವರಣವನ್ನು ಸೃಷ್ಟಿಸಬೇಕು. ಕಾಡಿನ ವಿಷಯವನ್ನು ಪ್ರಸ್ತಾಪಿಸದಿದ್ದಷ್ಟೂ ಒಳ್ಳೆಯದು' ಎಂದಿದ್ದರು. ಇವರು ಹೀಗೆ ಹೇಳಿದ ನಂತರ ಕಾಡಿನಲ್ಲಿನ ಅವರ ದಿನಚರಿಯನ್ನು ಕೇಳಬೇಕೆಂದಿದ್ದ ನನ್ನ ಉತ್ಸಾಹಕ್ಕೆ ತಣ್ಣೀರೆರಚಿದಂತಾಯಿತು. ಯಾಕೆಂದರೆ ನನ್ನ ಸ್ವಾರ್ಥಕ್ಕಿಂತ ಅವರ ಸಂತೋಷವೇ ನನಗೆ ಮುಖ್ಯವಾಗಿತ್ತು.

ಆದರೂ ಹಲವೊಮ್ಮೆ ಮಾತಿನ ಮಧ್ಯೆ ನಮ್ಮ ಕುಟುಂಬದವರು ಅದನ್ನು ಪ್ರಸ್ತಾಪಿಸಿದಾಗ ಅಪ್ಪಾಜಿ ಹೇಳುತ್ತಿದ್ದದ್ದು ಇಷ್ಟೇ: "ನನ್ನನ್ನು ಆತ ತುಂಬ ಚೆನ್ನಾಗಿ ನೋಡಿಕೊಂಡ. ಸಿಕ್ಕಾಪಟ್ಟೆ ನಡೆದಾಡಿಸುತ್ತಿದ್ದ ಅನ್ನುವುದನ್ನು ಬಿಟ್ಟರೆ ಬೇರೆ ಯಾವ ರೀತಿಯಲ್ಲೂ ಆತ ನನಗೆ ತೊಂದರೆ ಕೊಡಲಿಲ್ಲ, ನಾನು ಆತನ ಬಗ್ಗೆ ಈಗ ಕೆಟ್ಟದಾಗಿ ಮಾತನಾಡಿದರೆ ಅದು ನನಗೆ ನಾನೇ ಆತ್ಮವಂಚನೆ ಮಾಡಿಕೊಂಡಂತಾಗುತ್ತದೆ." ಅಷ್ಟೇ ಅಲ್ಲ, ಅಪ್ಪಾಜಿ ಯಾವುದೇ ಸಂದರ್ಭದಲ್ಲೂ ವೀರಪ್ಪನ್‌ನನ್ನು ನಿಂದಿಸಿದ್ದಾಗಲಿ, ಅಥವಾ ಆತನಿಗೆ ಶಾಪ ಹಾಕಿದ್ದಾಗಲಿ ಎಂದೂ ನಾನು ಕೇಳಲಿಲ್ಲ, ಒಬ್ಬ ಮನುಷ್ಯ ಇಷ್ಟೊಂದು ಮುಗ್ಧನಾಗಿರಲು ಸಾಧ್ಯವೇ ಎಂದು ನಾನು ಆಗ ತುಂಬ ತಲೆಕೆಡಿಸಿಕೊಂಡಿದ್ದೆ. ಹೀಗಾಗಿ ಅಪ್ಪಾಜಿ ಕಾಡಿನಲ್ಲಿ ಏನೇನು ಮಾಡುತ್ತಿದ್ದರು? ಆ ಕ್ಲಿಷ್ಟಕರ ಪರಿಸ್ಥಿತಿಯನ್ನು ಹೇಗೆ ನಿಭಾಯಿಸಿದರು? ಇಂತಹ ಅನೇಕಾನೇಕ ಪ್ರಶ್ನೆಗಳು ನನ್ನ ಮನಸ್ಸಿನಲ್ಲಿ ಪ್ರಶ್ನೆಯಾಗಿಯೇ ಉಳಿದವು.

ಆದರೆ ಒಂದು ಮಾತಂತೂ ಸತ್ಯ. ಕಾಡಿನಿಂದ ಬಂದ ನಂತರ ಅವರಿಗೆ ಜೀವನೋತ್ಸಾಹವೇ ಕುಗ್ಗಿಹೋಯಿತು. ಈ ಸಮಾಜವೆಂದರೆ ಇಷ್ಟೇನಾ? ಈ ಸರ್ಕಾರ ಎಂದರೆ ಇಷ್ಟೇನಾ? ಪೊಲೀಸರೆಂದರೆ ಇವರೇನಾ? ಇತ್ಯಾದಿ.. ಇತ್ಯಾದಿ ವಿಷಯಗಳ ಬಗ್ಗೆ ಅವರಿಗೆ ಬೇಸರ ಬಂದುಬಿಟ್ಟಿತ್ತು, ಆದರೆ ಅವರು ಯಾರನ್ನೂ ವೈಯಕ್ತಿಕವಾಗಿ ನಿಂದಿಸಲಿಲ್ಲ, ಬದಲಾಗಿ ಒಂದು ಆಧುನಿಕ ಸಮಾಜದಲ್ಲಿ ಒಬ್ಬ ವ್ಯಕ್ತಿಯನ್ನು ಅಪಹರಿಸಿ ಲಕ್ಷಾಂತರ ಜನರನ್ನು ತೊಂದರೆಗೆ ಸಿಲುಕಿಸಲು ಹೇಗೆ ಸಾಧ್ಯ? ಎಂದು ಆಶ್ಚರ್ಯ ವ್ಯಕ್ತಪಡಿಸುತ್ತಿದ್ದರು. ತನ್ನ ಅಪಹರಣದಿಂದಾಗಿ ಲಕ್ಷಾಂತರ ಜನ ತೊಂದರೆಗೆ ಒಳಪಟ್ಟ ಬಗ್ಗೆ ಅವರಿಗೆ ಅಪಾರವಾದ ನೋವಿತ್ತು. "ನನ್ನಿಂದಾಗಿ ನನ್ನ ಅಭಿಮಾನಿ ದೇವರುಗಳು ನೋವು ಅನುಭವಿಸಬೇಕಾಯಿತಲ್ಲವೇ? ವಾಸ್ತವವಾಗಿ ನಾನು ಅವರನ್ನು ರಂಜಿಸಬೇಕಾದವನು" ಎಂದು ಮರುಗುತ್ತಿದ್ದರು.

ಈ ಕಾರಣಕ್ಕೇ ಅಪ್ಪಾಜಿಯನ್ನು ಸನ್ಮಾನಿಸುವ ನೆಪದಲ್ಲಿ ನಾವು ಬಸವನಗುಡಿಯಲ್ಲಿ 'ಧನ್ಯ ಮಿಲನ' ಕಾರ್ಯಕ್ರಮವನ್ನು ಹಮ್ಮಿಕೊಂಡೆವು. ಆ ನಂತರ ಮೈಸೂರು ಮತ್ತು ಇನ್ನೆರಡು ಕೇಂದ್ರಗಳಲ್ಲೂ ಈ ಕಾರ್ಯಕ್ರಮ ಆಯೋಜಿಸಿದೆವು. ಅಭಿಮಾನಿ ದೇವರುಗಳನ್ನು ಕಂಡು ಅವರೆಲ್ಲರಿಗೆ ಧನ್ಯವಾದ ಹೇಳುವುದೇ ಆ ಕಾರ್ಯಕ್ರಮದ ಮೂಲ ಉದ್ದೇಶವಾಗಿತ್ತು, ಇಡೀ ಕರ್ನಾಟಕದ ಉದ್ದಗಲಕ್ಕೂ ಇಂತಹ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂಬ ನಮ್ಮ ಆಸೆ ಅವರ ಅನಾರೋಗ್ಯ ಮತ್ತು ಅಶಕ್ತಿಯಿಂದಾಗಿ ಸಾಧ್ಯವಾಗಲಿಲ್ಲ.


ಇದೇ ಸಂದರ್ಭದಲ್ಲಿ ಅಪ್ಪಾಜಿಯನ್ನು ಆದಷ್ಟು ಬೇಗ ಮತ್ತೆ ಬಣ್ಣದ ಲೋಕದ ಜಗತ್ತಿನೆಡೆಗೆ ಕರೆದುಕೊಂಡು ಹೋಗಬೇಕು ಎಂದು ನಾವು ಮಾತನಾಡಿಕೊಂಡೆವು. ಯಾಕೆಂದರೆ ಆ ಮಾಯಾ ಜಗತ್ತನ್ನು ಒಳಹೊಕ್ಕ ನಂತರ ಅವರ ಎಲ್ಲಾ ದುಃಖ ದುಮ್ಮಾನಗಳು ದೂರವಾಗಿ ಅವರು ಮತ್ತೆ ಹಿಂದಿನ ರಾಜ್‌ಕುಮಾರ್ ಆಗುತ್ತಾರೆ ಎಂದು ನಾವು ನಂಬಿದ್ದೆವು.

ಆದರೆ ಅವರ ಆರೋಗ್ಯ ದಿನದಿಂದ ದಿನಕ್ಕೆ ಕ್ಷೀಣಿಸಲಾರಂಭಿಸಿತು....

(ಮುಂದುವರಿಯುವುದು)

ನಿರೂಪಣೆ: ಸದಾಶಿವ ಶೆಣೈ

51



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

R.B.P. LANKESH, Kannada Weekly Price Rs. 10/- 16-5-2007 RNI No. KARKAN2005/14648 Regd.No.KA/BG(S)/2036/2005-07



ವಟಗುಟ್ಟುತ್ತಿರುವ ದೇಸಾಯಿ

ಸುನೀಲ್ ಕುಮಾರ್ ದೇಸಾಯಿ ಬದಲಾಗಿದ್ದಾರೆ. ಈ ಹಿಂದೆ ದೇಸಾಯಿ ಬಹಳ ಕಡಿಮೆ ಮಾತನಾಡುತ್ತಿದ್ದರು. ಎಷ್ಟು ಕಡಿಮೆ ಎಂದರೆ ಇತರರು ಹತ್ತು ಮಾತನಾಡಿದರೆ ಅವರು ಮಾತ್ರ ಮೆಲ್ಲನೆ ದನಿಯಲ್ಲಿ ಒಂದೆರಡು ಮಾತು ಪಿಸುಗುಟ್ಟುತ್ತಿದ್ದರು. ಅವತ್ತು ಅವರ ಮಾತಿಗಿಂತ ಅವರ ಸಿನಿಮಾಗಳೇ ಹೆಚ್ಚು ಮಾತನಾಡುತ್ತಿದ್ದವು ಎಂಬುದನ್ನು ಇಲ್ಲಿ ಸ್ಮರಿಸಬೇಕು.

ಆದರೆ ಈಗ ದೇಸಾಯಿ ಬದಲಾಗಿದ್ದಾರೆ. ಸದ್ಯದಲ್ಲೇ ಬಿಡುಗಡೆ ಆಗಲಿರುವ ಅವರ ನಿರ್ದೇಶನದ 'ಕ್ಷಣ ಕ್ಷಣ' ಚಿತ್ರದ ಪತ್ರಿಕಾಗೋಷ್ಠಿಯಲ್ಲಿ ಕಲಾವಿದರನ್ನು ಮತ್ತು ತಂತ್ರಜ್ಞರನ್ನು ಹೊಗಳಲು ದೇಸಾಯಿ ಬರೋಬ್ಬರಿ ಮೂರು ಗಂಟೆ ಕಾಲ ತೆಗೆದುಕೊಂಡರು. ಅವರಿಷ್ಟೊಂದು ಮಾತನಾಡಿದ್ದನ್ನು ಕೇಳಿ ಪತ್ರಕರ್ತರೆಲ್ಲಾ ಸುಸ್ತೋ ಸುಸ್ತು. ಅಷ್ಟೇ ಅಲ್ಲ, ಈ ಹಿಂದೆ ಕಲಾವಿದರು ದೇಸಾಯಿಯವರನ್ನು ಹೊಗಳುತ್ತಿದ್ದರೆ, ಈಗ ಸ್ವತಃ ದೇಸಾಯಿಯವರೇ ಎಲ್ಲ ಕಲಾವಿದರನ್ನು "ನೀನೇ ಇಂದ್ರ, ನೀನೇ ಚಂದ್ರ" ಎಂದು ಹೊಗಳಿದರು.

ಮನುಷ್ಯ ನಿಂತ ನೀರಿನಂತಾಗದೆ ಬದಲಾಗಬೇಕು ನಿಜ. ಆದರೆ ದೇಸಾಯಿ ಮಾತ್ರ ಇಷ್ಟೊಂದು ಬದಲಾಗಿರುವುದನ್ನು ಅಚ್ಚರಿ ಮೂಡಿಸಿದ್ದಿತು.


ಅಂದಹಾಗೆ ಜಗ್ಗೇಶ್ ಮಾತನಾಡಿದರೆ ಹೇಗೆ ಚೆನ್ನವೋ ಹಾಗೇ ದೇಸಾಯಿ ಮಾತನಾಡದಿದ್ದರೇನೇ ಚೆನ್ನ.

ಸ್ನೇಹ ಪರ್ವ

ಚಿತ್ರರಂಗದಲ್ಲಿ ಈಗ ಸ್ನೇಹಲೋಕದ ಹೊಸ ಪರ್ವ ಆರಂಭವಾಗಿದೆ. ಮೊನ್ನೆ ಯುವ ನಾಯಕನಟರಾದ ಅಜಯ್ ಮತ್ತು ನವೀನ್ ಕೃಷ್ಣ ಜೊತೆಯಾಗಿ ಪತ್ರಿಕಾಗೋಷ್ಠಿ ಕರೆದಿದ್ದರು. ಅದಕ್ಕಾಗಿ ಅದ್ದೂರಿ ಆಹ್ವಾನ ಪತ್ರಿಕೆಯನ್ನೂ ಮುದ್ರಿಸಿದ್ದರು.

ಪತ್ರಿಕಾಗೋಷ್ಠಿಯಲ್ಲಿ ಅವರು ಹೇಳಿದ್ದು ಇಷ್ಟೇ: "ನಾವಿಬ್ಬರೂ 'ಅಮೃತವಾಣಿ' ಚಿತ್ರದಲ್ಲಿ ಜೊತೆಯಾಗಿ ನಟಿಸಿದ್ದೇವೆ. ಆ ಚಿತ್ರದ ನಿರ್ದೇಶಕ ರಾಜಶೇಖರ್ ಮತ್ತು ಅವರ ತಂಡಕ್ಕೆ ಥ್ಯಾಂಕ್ಸ್ ಹೇಳಲು ಈ ಗೋಷ್ಠಿ ಕರೆದಿದ್ದೇವೆ. ಜೊತೆಗೆ ಈ ಚಿತ್ರದಲ್ಲಿ ನಟಿಸಿದ ನಂತರ ನಾವಿಬ್ಬರೂ ಇನ್ನಷ್ಟು ಕ್ಲೋಸ್ ಫ್ರೆಂಡುಗಳಾಗಿದ್ದೇವೆ" ಎಂದರು.

ಸಾಧಾರಣವಾಗಿ ಒಂದು ಚಿತ್ರದಲ್ಲಿ ಇಬ್ಬರು ನಾಯಕ ನಟರು ನಟಿಸಿದರೆ ಒಬ್ಬರ ಬಗ್ಗೆ ಇನ್ನೊಬ್ಬರು ದೂರುವುದು ಅಥವಾ ಗಾಸಿಪ್ ಹಬ್ಬಿಸುವುದು ಗಾಂಧಿನಗರದಲ್ಲಿ ನಡೆದುಕೊಂಡು ಬಂದಿರುವ ಸಂಪ್ರದಾಯ. ಈ ಯುವಕರು ಆ ಸಂಪ್ರದಾಯವನ್ನು ಮುರಿದಿರುವುದು ಸಂತೋಷ. ಇವರ ಸ್ನೇಹ ಹೀಗೇ ಮುಂದುವರೆಯಲಿ.





ಜಾರಿ ಬಿದ್ದ ಪ್ರೇಮ್

ಯುವ ನಾಯಕ ನಟ ಪ್ರೇಮ್ ಹ್ಯಾಟ್ರಿಕ್ ಬಾರಿಸುವ ಯತ್ನದಲ್ಲಿ ಮುಗ್ಗರಿಸಿದ್ದಾರೆ. ಆತ ನಟಿಸಿದ 'ನೆನಪಿರಲಿ' ಮತ್ತು 'ಜೊತೆಜೊತೆಯಲಿ' ಚಿತ್ರಗಳು ಶತದಿನೋತ್ಸವ ಆಚರಿಸಿದ್ದರಿಂದ ಅವರ 'ಪಲ್ಲಕ್ಕಿ' ಕೂಡ ನೂರುದಿನ ಓಡುತ್ತದೆ ಎಂದು ಹಲವು ಗಾಂಧಿನಗರಿಗಳು ಲೆಕ್ಕಹಾಕಿದ್ದರು.

ಆದರೆ 'ಪಲ್ಲಕ್ಕಿ' ನಿರೂಪಣೆ ನೀರಸವಾಗಿರುವುದರಿಂದ ಮತ್ತು ಕಥಾವಸ್ತು ಪ್ರೇಮ ಕಥೆಗಿಂತ ಹೊಡೆದಾಟಕ್ಕೇ ಪ್ರಾಮುಖ್ಯತೆ ನೀಡಿರುವುದರಿಂದ ಪ್ರೇಮ್ ಅನೇಕ ಕಡೆ ಉಪೇಂದ್ರ ಮತ್ತು ಶಿವ ಕುಮಾರ್ ಅನ್ನು ನೆನಪಿಸುವ ರೀತಿಯಲ್ಲಿ ನಟಿಸಿದ್ದಾರೆ. ಇದು ಅವರ ಅಭಿಮಾನಿಗಳಿಗೆ ನಿರಾಶೆ ಉಂಟುಮಾಡಿದೆ.

ಹೀಗಾಗಿ 'ಪಲ್ಲಕ್ಕಿ' ಚಿತ್ರ ಶತದಿನೋತ್ಸವ ಆಚರಿಸುವ ಸಾಧ್ಯತೆ ಕಡಿಮೆ. ಇನ್ನೂ ಎಳೆ ಮೀಸೆಯ ತರುಣನಂತಿರುವ ಪ್ರೇಮ್ ಕಥಾವಸ್ತುವನ್ನು ಆಯ್ಕೆ ಮಾಡುವಲ್ಲಿ ಸ್ವಲ್ಪ ಎಚ್ಚರಿಕೆ ವಹಿಸಿದರೆ ಆತ ಮತ್ತೆ ಎಂದಿನಂತೆ ರಾರಾಜಿಸಬಹುದು.



ಸೋಲಿನ ಸರಪಳಿಯಲ್ಲಿ ಕೋಟಿ ರಾಮು



'ಕೋಟಿ ನಿರ್ಮಾಪಕ' ಎಂದೇ ಖ್ಯಾತಿ ಗಳಿಸಿದ್ದ ರಾಮು ಯಾಕೋ ಇತ್ತೀಚೆಗೆ ಕೋಟಿ ಕೋಟಿ ಕಳೆದುಕೊಳ್ಳುತ್ತಿದ್ದಾರೆ. ಕಳೆದ ಹಲವಾರು ವರ್ಷಗಳಿಂದ ಅದೃಷ್ಟ ಲಕ್ಷ್ಮಿ ರಾಮುಗೆ ಕೈ ಕೊಡುತ್ತಲೇ ಇದ್ದಾಳೆ. ಆದರೂ ಛಲ ಬಿಡದ ತ್ರಿವಿಕ್ರಮನಂತೆ ರಾಮು ಮಾತ್ರ ಅಷ್ಟೇ ಅದ್ದೂರಿಯಾಗಿ ಚಿತ್ರ ನಿರ್ಮಿಸುತ್ತಲೇ ಇದ್ದಾರೆ.

ಉಪೇಂದ್ರ ನಟಿಸಿದ 'ಮಸ್ತಿ' ಚಿತ್ರ ರಾಮುವನ್ನು ಸೋಲಿನ ಸರಪಳಿಯಿಂದ ಹೊರಗೆ ತರಬಹುದು ಎಂದು ಅನೇಕರು ಭಾವಿಸಿದ್ದರು. ಆದರೆ ಗಾಂಧಿನಗರದ ಪಂಡಿತರ ಪ್ರಕಾರ 'ಮಸ್ತಿ' ಚಿತ್ರವೂ ರಾಮುಗೆ ಕೈ ಕೊಡಬಹುದು. ಮೊನ್ನೆ ಮೊನ್ನೆಯಷ್ಟೇ 'ಪ್ರೀತಿಗಾಗಿ' ಎಂಬ ಚಿತ್ರ ನಿರ್ಮಿಸಿ ಕೈ ಸುಟ್ಟುಕೊಂಡಿದ್ದ ರಾಮು ಒಂದು ಯಶಸ್ಸಿಗಾಗಿ ಹಾತೊರೆಯುತ್ತಿರುವುದನ್ನು ನೋಡಿದರೆ ಅವರ ಬಗ್ಗೆ ಅಯ್ಯೋ ಎನಿಸದೇ ಇರಲಾರದು.

'ಗೂಳಿ'ಯಾದ ಸುದೀಪ್



ಸುದೀಪ್ 'ಗೂಳಿ' ಎಂಬ ಚಿತ್ರದಲ್ಲಿ ನಟಿಸಲು ಸಹಿ ಹಾಕಿರುವ ಸುದ್ದಿ ಗಾಂಧಿನಗರದಿಂದ ಬಂದಿದೆ. ಈ ಚಿತ್ರವನ್ನು ರಾಮು ನಿರ್ಮಿಸಲಿದ್ದು, ನಿರ್ದೇಶಕರಾಗಿ ಪಿ.ಎನ್. ಸತ್ಯ ಆಯ್ಕೆಯಾಗಿದ್ದಾರೆ.

ಚಿತ್ರ ಯಾರು ನಿರ್ಮಿಸುತ್ತಾರೆ, ಯಾರು ನಿರ್ದೇಶಿಸುತ್ತಾರೆ ಎಂಬದು ಮುಖ್ಯವಲ್ಲ. ಬದಲಾಗಿ 'ಮೈ ಆಟೋಗ್ರಾಫ್' ಮತ್ತು 'ಶಾಂತಿ ನಿವಾಸ'ದಂತಹ ಸದಭಿರುಚಿಯ ಚಿತ್ರಗಳಿಗಾಗಿ — ಅವು ರೀಮೇಕ್ ಗಳಾಗಿದ್ದರೂ — ತನ್ನ ತನು, ಮನ, ಧನವನ್ನು ಸುರಿದಿದ್ದ ಸುದೀಪ್ ಮತ್ತೆ 'ಗೂಳಿ'ಯಂತಹ ಹೊಡಿ, ಬಡಿ ಚಿತ್ರಕ್ಕೆ ಮರಳುತ್ತಿರುವುದು ಅಚ್ಚರಿ ಹುಟ್ಟಿಸುತ್ತದೆ.

ಭಾಮಾರ ಹ್ಯಾಟ್ರಿಕ್

ಭಾ.ಮಾ. ಹರೀಶ್ ತಮ್ಮ ಇತರೆ ಚಟುವಟಿಕೆಗಳಾದ ಚಳವಳಿ ಮತ್ತು ಹೋರಾಟವನ್ನು ಬಿಟ್ಟು ಚಿತ್ರ ನಿರ್ಮಾಣದಲ್ಲಿ ಮತ್ತೊಮ್ಮೆ ಸಕ್ರಿಯರಾಗಿದ್ದಾರೆ. ಅವರ ನಿರ್ಮಾಣದ ಹೊಸ ಚಿತ್ರ 'ಸ್ಲಂ' ಜೂನ್ ತಿಂಗಳಲ್ಲಿ ಸೆಟ್ಟೇರಲಿದೆ. ಈ ಹಿಂದೆ 'ಮೆಜೆಸ್ಟಿಕ್' ಚಿತ್ರದಲ್ಲಿ ದರ್ಶನ್ ಮತ್ತು 'ಶಿಷ್ಯ' ಚಿತ್ರದಲ್ಲಿ ದೀಪಕ್ ಎಂಬ ನವ ನಟರನ್ನು ಪರಿಚಯಿಸಿದ್ದ ಹರೀಶ್ ಈ ಬಾರಿಯೂ ಹೊಸ ನಾಯಕ ನಟನೊಬ್ಬನನ್ನು ಪರಿಚಯಿಸಲಿದ್ದಾರೆ. ಅಲ್ಲಿಗೆ ನಿರ್ಮಾಪಕನಾಗಿ ಹರೀಶ್ ಕೂಡ ಹೊಸ ರೀತಿಯ ಹ್ಯಾಟ್ರಿಕ್ ಅನ್ನು ಬಾರಿಸಿದಂತಾಗುತ್ತದೆ.



ಬಂದಾನೋ ಮುರಳಿ



ಕನ್ನಡ ಚಿತ್ರರಂಗಕ್ಕೆ ಮುರಳಿ ಎಂಬ ಹೊಸ ನಿರ್ದೇಶಕ ಸದ್ಯದಲ್ಲೇ ಎಂಟ್ರಿ ಮಾಡಲಿದ್ದಾರೆ.

ಅರೆರೆ ಈಗಾಗಲೇ ಮುರುಳಿ ಎಂಬ ನಿರ್ದೇಶಕ 'ನಾಗರಹಾವು' ಎಂಬ ಚಿತ್ರವನ್ನು ಮಾಡಿ ಈಗ 'ಸಂತ' ಎಂಬ ಮತ್ತೊಂದು ಚಿತ್ರವನ್ನು ತಯಾರಿಸಿದ್ದರೂ ಆತ ಸದ್ಯದಲ್ಲೇ ಹೇಗೆ ಎಂಟ್ರಿ ಪಡೆಯಲಿದ್ದಾರೆ ಎಂದು ಯೋಚಿಸುತ್ತಿದ್ದಿರಾ?

ಆದರೆ ಈ ಮುರಳಿ ಆ ಮುರಳಿ ಅಲ್ಲ. ಈತ ಖ್ಯಾತ ಅಭಿನೇತ್ರಿ ಸುಧಾರಾಣಿಯವರ ಸಹೋದರ. ಈಗಾಗಲೇ ಡಬ್ಬಿಂಗ್ ಕಲಾವಿದನಾಗಿ ಉದ್ಯಮದಲ್ಲಿ ಅನುಭವ ಪಡೆದಿರುವ ಈ ಮುರಳಿ ಸದ್ಯದಲ್ಲೇ ಹೊಸ ಕಲಾವಿದರನ್ನು ಹಾಕಿಕೊಂಡು ಸಿನಿಮಾವೊಂದನ್ನು ನಿರ್ದೇಶಿಸಲಿದ್ದಾರೆ ಎಂಬ ಸುದ್ದಿ ಗಾಂಧಿನಗರದಲ್ಲಿ ದಟ್ಟವಾಗಿ ಹಬ್ಬಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44